
# ದೆಹಲಿ ಕರ್ನಾಟಕ ಸಂಘದ ಅಭಿಮತ

ಮೇ 2012
ಬೆಲೆ ರೂ. 1



ದಿಟದ ಮಾರ್ಗದಲ್ಲಿ ನಡೆಯಿರಿ, ಅದುವೆ ದಾರಿದೀಪ
ದಿಟವನ್ನು ಆಶ್ರಯಿಸಿರಿ, ತರದು ಅದೆಂದೂ ಲೋಪ

–ಬುದ್ಧ



ಅಗಲಿದ ಎಂ.ಕೆ. ಧರ್ಮರಾಜ್

# ಸಾಹಿತ್ಯ ಸಂಜೆಯಲ್ಲಿ ಮರುಕಳಿಸಿದ ದೆಹಲಿಯ ನೆನಪು ಹಾಗೂ ಬಾದಾಮಿ ವಾಸ್ತುಶಿಲ್ಪ ವೈಭವ



ದೆಹಲಿಯಲ್ಲಿ ಬೇಸಿಗೆ ಹೆಜ್ಜೆ ಇಡುವ ಕಾಲಕ್ಕೆ ಅರಳಿ ಮೆರೆವ ಗುಲಮೊಹರ್ ಕೆಂಪು ಹೂಗಳು ಮನಸ್ಸಿಗೆ ಮುದನೀಡುವ ವಾರಾಂತ್ಯದ ಒಂದು ಸಂಜೆಯಲ್ಲಿ 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು' ಸಾಲುಗಳು ಪದೇ ಪದೇ ನೆನಪಾಗುತ್ತಿದ್ದವು. ಹಳೆ ತಲೆಮಾರು ಮತ್ತು ಹೊಸ ತಲೆಮಾರೊಂದರ ಸಂಸ್ಕೃತಿ ಸಂವಹನದ ಸಂಭ್ರಮದಂತೆ ಏಪ್ರಿಲ್ 21 ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಿದ ಸಾಹಿತ್ಯ ಸಂಜೆಗೆ ದೆಹಲಿ ವಿಶ್ವವಿದ್ಯಾಲಯದ-ಭಾರತೀಯ ಭಾಷಾ ವಿಭಾಗದ ಮೊಟ್ಟ ಮೊದಲ ಕನ್ನಡ ಪ್ರಾಧ್ಯಾಪಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಎಂಭತ್ತರ ಹರೆಯದ ಡಾ.ವಿನೋದಾಬಾಯಿ ಹಾಗೂ ಖ್ಯಾತ ಸಂಶೋಧಕ ನೀರಾವರಿ ಚಿಂತಕ, ಬರಹಗಾರ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ನಮ್ಮೊಂದಿಗಿದ್ದರು. ಕಾರ್ಯಕ್ರಮದ ಮೊದಲಿಗೆ ಏಪ್ರಿಲ್ 19ರಂದು ಕಾಲಲೀನರಾದ ಕುಸುಮಾಕರ ದೇವರಗೆಣ್ಣೂರು ಕಾವ್ಯನಾಮದಲ್ಲಿ ಅರ್ಧ ಶತಮಾನಕ್ಕೂ ಹೆಚ್ಚುಕಾಲ ಸಾಹಿತ್ಯ ಕೃಷಿ ನಡೆಸಿದ ಡಾ.ವಸಂತ ಅನಂತ ದಿವಾಣಜಿ ಅವರಿಗೆ ಮೌನಾಚರಣೆಯ ಮೂಲಕ ಅಗಲಿದ ಚೇತನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಂತರ 1960ರ ದಶಕದಲ್ಲಿ ದೆಹಲಿಯಂತಹ ದೂರದೂರಿಗೆ ಉದ್ಯೋಗ ನಿಮಿತ್ತ, ನಿರ್ಭಯವಾಗಿ ಯಾವ ಯೋಚನೆಯೂ ಇಲ್ಲದೇ ವಲಸೆ ಬಂದ ಮೊದಲ ಮಹಿಳೆಯೆಂದರೂ ತಪ್ಪಾಗಲಾರದು ಎಂದು ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ, ಡಾ. ಟಿ.ಎಸ್. ಸತ್ಯನಾಥ್ ಅವರು ಹೆಮ್ಮೆಯಿಂದ ಡಾ. ವಿನೋದಾಬಾಯಿ ಅವರ ಪರಿಚಯವನ್ನು ನೀಡಿದರು. ಡಾ. ವಿನೋದಾಬಾಯಿ ಅವರು ಬರೆದ-ಆಂಡಾಳ್-ಅಕ್ಕಮಹಾದೇವಿ ಮತ್ತು ಮೀರಾ-ಕುರಿತ ತೌಲನಿಕ ಸಂಶೋಧನಾ ಗ್ರಂಥಕ್ಕೆ ದೆಹಲಿ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಗಳಿಸಿದ ಹೆಮ್ಮೆಯ ಗರಿಯೂ ಅವರಿಗೆ. ಅದೇ ದೆಹಲಿ ವಿಶ್ವವಿದ್ಯಾಲಯ ಸ್ವೀಕರಿಸಿದ ಮೊಟ್ಟ ಮೊದಲ ಕನ್ನಡ ಸಂಶೋಧನಾ ಗ್ರಂಥ. ವೈಷ್ಣವ ಪರಂಪರೆಯ ಆಂಡಾಳ್, ಶೈವ ಪರಂಪರೆಯ ಅಕ್ಕಮಹಾದೇವಿ ಹಾಗೂ ರಜಪೂತಾನಾ ಘರಾನಾದ ರಾಜಕುವರಿ ಮೀರಾಬಾಯಿ, ಈ ಮೂವರ ತೌಲನಿಕ ಅಧ್ಯಯನದ ಮೂಲಕ ತೌಲನಿಕ ಸಾಹಿತ್ಯದ ವಿದ್ಯಾರ್ಥಿಗಳಿಗೆ ಒಂದು ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅವರ ಕಾಲ ಬೇರೆಯಾದರೂ ಸಾರ ಒಂದೇ ಎನ್ನುವ ಡಾ.ವಿನೋದಾಬಾಯಿ ಅವರ ನೆನಪಿನ ಬುತ್ತಿಯಿಂದ ಮತ್ತಷ್ಟನ್ನು ಬಗೆದು ನೋಡಬೇಕು ಎನ್ನುವ ಹಂಬಲ ಮೂಡುತ್ತದೆ. ಈ ಕಾಲದ ನಮ್ಮ ಹಿರಿಯ ಸಾಹಿತಿವರೇಣ್ಯರಲ್ಲಿ ಡಾ. ವೃಷಭೇಂದ್ರ ಸ್ವಾಮಿ ಮತ್ತು ಡಾ. ಚಿದಾನಂದಮೂರ್ತಿ ಅವರು ವಿನೋದಾಬಾಯಿ ಅವರಿಗೆ ಕ್ಲಾಸ್ ಮೇಟ್ ಆಗಿದ್ದರಂತೆ. ಮೈಸೂರಲ್ಲಿ ಹುಟ್ಟಿ, ಬೆಂಗಳೂರಲ್ಲಿ ಬೆಳೆದು ಈಗ ಹುಬ್ಬಳ್ಳಿಯಲ್ಲಿ ನೆಲೆಸಿರುವ ಡಾ.ವಿನೋದಾಬಾಯಿ ಅವರಿಗೆ ತಾವು ಎಲ್ಲಿ ನೆಲೆಸಿದ್ದರೂ ಅದು ಕನ್ನಡಭೂಮಿಯ ತುಣುಕಿನಲ್ಲೇ ಎನ್ನುವ ವಿಶಾಲನೋಟವಿದೆ. ಕುವೆಂಪು ಅವರು ಇವರಿಗೆ ಮೇಷ್ಟರಾಗಿದ್ದ ಕಾಲದಲ್ಲಿ ಅವರು ಯಾವ ರೀತಿ ಕ್ಲಾಸ್ ರೂಮಿಗೆ ನಡೆದು ಬರುತ್ತಿದ್ದರು, ಯಾವ ರೀತಿ ಪಾಠ ಹೇಳುತ್ತಿದ್ದರು, ವಿಧ್ಯಾರ್ಥಿನಿಯರನ್ನಂತೂ ಕತ್ತೆತ್ತಿ ನೋಡುತ್ತಲೇ ಇರಲಿಲ್ಲವಂತೆ, ಮುಂದೆ ಯಾರದೋ ಪರಿಚಯದ ಮೂಲಕ ಕುವೆಂಪು ಮತ್ತು ಅವರ ಪತ್ನಿ ಹೇಮಾವತಿ ಅವರ ನೇರ ಒಡನಾಟದಲ್ಲಿ ಬಂದುದನ್ನು, ಕಳೆದ ಕ್ಷಣಗಳನ್ನು ಎಂಭತ್ತೊಂದರ ಈ ಮುಗುದೆ ಹೇಳುವಾಗ ಅವರ ನೆನೆಪಿನ ಹಿಂದೆಯೇ ಕಾಲ ಹಿಂದಕ್ಕೋಡಿದಂತೆನಿಸಿತು ಅರೆಘಳಿಗೆ. ಕುವೆಂಪು ತಮ್ಮ ವಿದ್ಯಾರ್ಥಿಗಳು ಅವರ ಕಾಲ್ಮುಟ್ಟಿ ನಮಸ್ಕರಿಸಲೂ ಬೇಡವೆನ್ನುತ್ತಿದ್ದರಂತೆ. ಏನು ಕಾರಣವಿದ್ದೀತು ಎಂದು ಇನ್ನೂ ಯೋಚಿಸುತ್ತಲೇ ಇದ್ದೇನೆ. ಕಾಲ್ಮುಟ್ಟಿ ನಮಸ್ಕರಿಸುವ ಪದ್ಧತಿಯೇ ಸಲ್ಲದು ಎಂಬ ವಿರೋಧವೇ? ಅಥವಾ ಅವರಲ್ಲಿ ಆ ಕಾಲದ ಜಾತಿ ವ್ಯವಸ್ಥೆಯ ಕುರಿತು ಮಥಿಸುತ್ತಿರುವ ದ್ವಂದವಿದ್ದಿರಬಹುದೇ ಎಂಬ ಸಂದೇಹ ಕಾಡುತ್ತದೆ. ಡಾ.ವಿನೋದಾಬಾಯಿ ತಾವು ದೆಹಲಿಯಲ್ಲಿ ನೆಲೆಸಿದ ಕಾಲ, ಆಗಿನ ಕನ್ನಡಪರ ಚಟುವಟಿಕೆಗಳಿಗೆ ಸಕ್ರಿಯವಾಗಿದ್ದ ಸ್ಮರಣೀಯ ತಲೆಮಾರೊಂದರ ಗತದ ನೆನಪುಗಳನ್ನು ಹಂಚಿಕೊಂಡರು. ಡಾ. ವಿನೋದಾಬಾಯಿ ಅವರ ತಂದೆ ಪ್ರೊ. ಕೆ.ವಿ. ರಾಘವಾಚಾರ್ ಕನ್ನಡದ ಹೆಸರಾಂತ ವಿದ್ವಾಂಸರು. ದೆಹಲಿಗೆ ತಮ್ಮನ್ನು ಕರೆತಂದುದು ತಮ್ಮ ತಂದೆಯವರ ಋಣವೆಂದು ಧನ್ಯತೆಯಿಂದ ನೆನೆಯುತ್ತಾರೆ. ಬಹಳಷ್ಟು ಜನರಿಗೆ ಸಹಾಯ ಮಾಡಿದ ಜೀವ. ಈಗಲೂ ಬೆಂಗಳೂರಿನಲ್ಲಿ ರಿಕ್ಷಾ ಓಡಿಸುವ ತಮ್ಮಿಂದ ಕನ್ನಡ ಕಲಿತ ಹುಡುಗನೊಬ್ಬ ಈಗಲೂ ತಮ್ಮನ್ನು ಗುರುವೆಂದು ಗುರುತಿಸಿ ತೋರುವ ಪ್ರೀತಿ, ನಮ್ರತೆಯನ್ನೂ ಆಪ್ತವಾಗಿ ನೆನೆಯುತ್ತಾರೆ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಡಾ.ವಿನೋದಾಬಾಯಿ ಅವರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು ಹಾಗೂ ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ ಅವರು ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು.

ಇಳಿ ಸಂಜೆಯ ಸಾಹಿತ್ಯಾಸಕ್ತರ ಹರಟೆಗೆ ವಾಸ್ತುಶಿಲ್ಪದ ತೂಗುತೊಟ್ಟಿಲು ಎಂದೇ ಹೆಸರಾದ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ವರ್ಣಪಾರದರ್ಶಿಕೆ ಪ್ರದರ್ಶನದೊಂದಿಗೆ ವಿವರಣೆ ನೀಡುತ್ತ ಅದ್ಭುತ ಐತಿಹಾಸಿಕ ದರ್ಶನ ಮಾಡಿಸಿದವರು ಖ್ಯಾತ ಬರಹಗಾರ, ಸಂಶೋಧಕ, ನೀರಾವರಿ ಚಿಂತಕ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು. 1500 ಸಾವಿರ ವರ್ಷಗಳ ನಂತರವೂ ಕೂಡ ಬೌದ್ಧ, ಜೈನ ಹಾಗೂ ಹಿಂದೂ ಧರ್ಮದ ಧಾರ್ಮಿಕ ಸಾಮರಸ್ಯದ ಕುರುಹುಗಳನ್ನು ಬಾದಾಮಿಯಲ್ಲಿ ಕಾಣಬಹುದು. ಬಾದಾಮಿ ಚಾಲುಕ್ಯರ ಕಾಲದ ಎಲ್ಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಇಡೀ ಭಾರತಕ್ಕೆ ಮಾದರಿಯಾಗಿದೆ. ಸುಮಾರು ಆರನೇ ಶತಮಾನದಲ್ಲಿ ಆಳಿದ ಚಾಲುಕ್ಯರು ವಿಶ್ವದಾದ್ಯಂತ ಕನ್ನಡಿಗರ ಹೆಸರನ್ನು ಪರಿಚಯಿಸಿ, ಕರ್ನಾಟಕದ ಹಿರಿಮೆಯನ್ನು ಮೆರೆದವರು. ಬಾದಾಮಿ ಚಾಲುಕ್ಯರು ಕಟ್ಟಿದ ದೇವಾಲಯಗಳ ವಾಸ್ತುಶಿಲ್ಪದ ವೈವಿಧ್ಯತೆ ಭರತಖಂಡದ ಇನ್ಯಾವ ಭಾಗದಲ್ಲೂ ಇಲ್ಲ ಎಂಬುದಾಗಿ ವಿದ್ವತ್ಪೂರ್ಣವಾಗಿ ವಿವರಿಸಿದ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ, ಶಾಸನಗಳ ಗತವೈಭವದಲ್ಲಿ ಮೈಮರೆಯುವಂತೆ ಮಾಡಿದರು. ಇತಿಹಾಸದ ಆಸಕ್ತರು ಡಾ. ಕುಲಕರ್ಣಿ ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡರು. ಡಾ. ಟಿ.ಎಸ್. ಸತ್ಯನಾಥ್ ಕುಲಕರ್ಣಿ ಅವರಿಗೆ ಹೂಗುಚ್ಛ ನೀಡಿ ಗೌರವಿಸಿದರು. ಸಂಘದ ಸಕ್ರಿಯ ಸದಸ್ಯ ಶಿವಾನಂದ ಇಂಗಳೇಶ್ವರ ಅವರು ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಕಿರು ಪರಿಚಯ ನೀಡಿದರು. ಸಂಘದ ಸಾಹಿತ್ಯ ಸಮಿತಿಯ ಸಂಚಾಲಕಿ ರೇಣುಕಾ ನಿಡಗುಂದಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಸಾಹಿತ್ಯ ಸಮಿತಿಯ ಸಂಚಾಲಕ ಪಿ.ಸಿ. ಶ್ರೀನಿವಾಸ ಅವರು ವಂದಿಸಿದರು.

❑ ರೇಣುಕಾ ನಿಡಗುಂದಿ

## ಮುಖಪುಟ ಚಿತ್ರ-ಬುದ್ಧವಿಹಾರ, ಗುಲ್ಬರ್ಗ

ಗುಲ್ಬರ್ಗದ ಸಮೀಪವಿರುವ ಬುದ್ಧವಿಹಾರವು ಸಾಂಚಿ, ಸಾರಾನಾಥ್, ಅಜಂತ, ನಾಗಪುರ ಮೊದಲಾದ ಬೌದ್ಧ ಕ್ಷೇತ್ರಗಳ ವಾಸ್ತುಶಿಲ್ಪ ಲಕ್ಷಣಗಳನ್ನೊಳಗೊಂಡ ದಕ್ಷಿಣ ಭಾರತದ ಒಂದು ಬೌದ್ಧ ಯಾತ್ರಾ ಸ್ಥಳವಾಗಿ ಪ್ರಸಿದ್ಧಿ ಪಡೆದಿದೆ. 18 ಎಕರೆ ವಿಸ್ತಾರವಾದ ಪ್ರದೇಶದಲ್ಲಿರುವ ಈ ಸುಂದರ ಬುದ್ಧ ವಿಹಾರದಲ್ಲಿ 8.5 ಅಡಿ ಎತ್ತರದ ಸ್ವರ್ಣಲೇಪಿತ ಕಂಚಿನ ಕುಳಿತಿರುವ ಬುದ್ಧನ ಮೂರ್ತಿ ಮನಮೋಹಕವಾಗಿದೆ. ಥಾಯ್‌ಲ್ಯಾಂಡಿನಿಂದ ತರಲಾಗಿರುವ ಈ ಮೂರ್ತಿ ದಕ್ಷಿಣ ಭಾರತದಲ್ಲೇ ಬಹುಶಃ ಅತಿ ಎತ್ತರವಾದ ವಿಗ್ರಹವಾಗಿದ್ದು ನೋಡುಗರ ಮನ ಸೆಳೆಯುತ್ತದೆ. ಕೇಂದ್ರ ಕಾರ್ಮಿಕ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಕನಸಿನ ಕೂಸಾದ ಬುದ್ಧವಿಹಾರವು ಈಗಾಗಲೇ ಖ್ಯಾತಿ ಪಡೆದಿದೆ.

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 22 ಸಂಚಿಕೆ 8
ಮೇ 2012, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಈಗ ನಮ್ಮ ಮಕ್ಕಳನ್ನು ಆಳುತ್ತಿರುವುದು ಟೆಲಿವಿಶನ್ ಎಂಬ ಮಾಯಾ ಪೆಟ್ಟಿಗೆ. ಐದು ದಶಕಗಳ ಹಿಂದೆ ದೃಶ್ಯ ಮಾಧ್ಯಮದ ಆಧುನಿಕ ತಂತ್ರಜ್ಞಾನ ಆವಿಷ್ಕಾರದಿಂದ ನಮ್ಮ ದೇಶವನ್ನು ಅಂಬೆಗಾಲಿಡುತ್ತ ಪ್ರವೇಶಿಸಿದ ಟೆಲಿವಿಶನ್ ಇಂದು ಬೃಹತ್ ಜಾಲವಾಗಿ ಮಾರ್ಪಟ್ಟಿದೆ. ಸರ್ಕಾರಿ ಸ್ವಾಮ್ಯದ ದೂರದರ್ಶನದ ಅಸ್ತಿತ್ವದಲ್ಲಿದ್ದ ದಶಕಗಳು ನಮ್ಮ ನೆಮ್ಮದಿಗೆ ಅಷ್ಟೇನು ಭಂಗ ತರಲಿಲ್ಲ. ಸೆಟಲೈಟ್ ಮೂಲಕ ಸಂವಹನ ಪ್ರಾರಂಭವಾಗಿದ್ದೇ ತಡ ದೇಶದಾದ್ಯಂತ ಸರಿಸುಮಾರು 600 ಟೆಲಿವಿಶನ್ ಚಾನೆಲ್‌ಗಳು ಕೇವಲ ರಂಜನೆಗೋಸ್ಕರ ಸ್ಥಾಪಿತಗೊಂಡವು. ದೇಶದ ಪ್ರತಿ ಭಾಷೆ, ಉಪಭಾಷೆ, ಬುಡಕಟ್ಟು ಭಾಷೆ–ಹೀಗೆ ಪ್ರಾಂತೀಯ ಇತಿಮಿತಿಗಳನ್ನೇ ಬಂಡವಾಳ ಮಾಡಿಕೊಂಡಿರುವ ಚಾನೆಲ್‌ಗಳು ನೂರಾರು. ಇವಲ್ಲದೆ 170 ಸುದ್ದಿ ಪ್ರಸಾರಕ್ಕೋಸುಗ ಬದ್ಧವಾಗಿರುವ ಚಾನೆಲ್‌ಗಳಿವೆ. ಒಂದು ಅಧ್ಯಯನದ ಪ್ರಕಾರ ಈ ದೇಶದ ಪ್ರತಿಯೊಬ್ಬರ ದಿನವೊಂದರ ಐದು ಗಂಟೆಗಳನ್ನು ಟಿ.ವಿ. ಕಬಳಿಸುತ್ತದೆ. ನಿಜ ಹೇಳಬೇಕೆಂದರೆ ಹತ್ತರಲ್ಲಿ ಏಳು ಜನರಿಗೆ ತಾವು ಏನನ್ನು ನೋಡಬೇಕು, ಏನನ್ನು ನೋಡಬಾರದು ಎಂಬುದು ಮನದಟ್ಟಾಗಿಲ್ಲ. ಅದರಿಂದಲೇ ನಾವು ಕಂಡು ಕೇಳರಿಯದಷ್ಟು ಜ್ಯೋತಿಷಿಗಳು ಗ್ರಹಗತಿ ಎನ್ನುತ್ತ ಮೌಢ್ಯ ಬಿತ್ತುವ ದುಷ್ಕಾರ್ಯವನ್ನು ಸರಾಗವಾಗಿ ಮಾಡುತ್ತಿದ್ದಾರೆ. ಬಹುತೇಕ ತಾಯಂದಿರು ತಮ್ಮ ಮಕ್ಕಳ ವೃದ್ಧಿಗೆ ಜ್ಞಾನಾರ್ಜನೆಯ ಸೂಕ್ತ ಮಾರ್ಗಗಳನ್ನು ಕಲ್ಪಿಸುವುದರ ಬದಲಿಗೆ ಟಿವಿ ಜ್ಯೋತಿಷಿಗಳ ಆದೇಶದಂತೆ ಪೂಜೆ ಪುನಸ್ಕಾರಗಳಲ್ಲಿ ತೊಡಗಿದ್ದಾರೆ. ಹೀಗಾಗಿ ಭವಿಷ್ಯದಲ್ಲಿ ವೈಜ್ಞಾನಿಕ ಮನೋಧರ್ಮದ ವಿಚಾರವಾದದಿಂದ ಮುನ್ನಡೆಯಬಲ್ಲ ದಿಟ್ಟತನದ ಸಂತಾನವನ್ನು ಕಾಣುತ್ತೇವೆಯೋ ಇಲ್ಲವೋ ಎಂಬ ಆತಂಕ ಕಾಡುತ್ತಿದೆ. ಅದರಿಂದ ಈ 'ಮಾಯಾ ಪೆಟ್ಟಿಗೆ' ಮಾರುವ ಸರಕುಗಳ ಮೇಲೆ ಕೊಂಚ ನಿಯಂತ್ರಣ ಬೇಕು. ಅವೈಜ್ಞಾನಿಕ ಹಾಗೂ ಮೌಢ್ಯದ ಸಂಗತಿಗಳ ಪ್ರಸಾರದ ಮೇಲೆ ಅಂಕುಶವಿಡಬೇಕು ಎನ್ನುವ ವಾದದಲ್ಲಿ ತಿರುಳಿದೆ. ಇದು ಖಂಡಿತ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹದ್ದಲ್ಲ. ಬದಲಿಗೆ ಪ್ರಬಲ ಮಾಧ್ಯಮದ ಮೂಲಕ ತಳವೂರಲು ಯತ್ನಿಸುತ್ತಿರುವ ದುಷ್ಕರ್ಮಿಗಳ ಕುಕೃತ್ಯಕ್ಕೆ ಕಡಿವಾಣ ಹಾಕಲು ಇರುವ ಏಕೈಕ ಮಾರ್ಗ. ಸರ್ಕಾರ ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಿ ಸೂಕ್ತ ಕಾಯ್ದೆಗಳನ್ನು ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಜಾಗತಿಕ ಸವಾಲುಗಳನ್ನು ಎದುರಿಸಲು ತಮ್ಮ ಮಿದುಳಿನ ಎಲ್ಲ ಶಕ್ತಿಯನ್ನು ಕ್ರೋಢೀಕರಿಸಿ ದೇಶವನ್ನು ಮುನ್ನಡೆಸಬೇಕಾದ ಭವಿಷ್ಯದ ಜನಾಂಗ ಪಂಚಾಂಗ ನೋಡಿಕೊಂಡು ಮೂಲೆಗುಂಪಾಗಿ ಬಿಡುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಯೋಚಿಸಿ ಕಾಯಿದೆ ಮಾಡುತ್ತದೋ ಇಲ್ಲವೋ ನಮ್ಮ ತಾಯಂದಿರು ತಮ್ಮ ಮಕ್ಕಳನ್ನು ಈ ಮಾಯಾಪೆಟ್ಟಿಗೆಯಿಂದ ಸಾಧ್ಯವಾದಷ್ಟು ದೂರವಿರಿಸಲು ಯತ್ನಿಸಬೇಕು. ಆಯ್ಕೆ ಮಾಡಿದ ನೈಜ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನಷ್ಟೇ ವೀಕ್ಷಿಸಲು ಮಕ್ಕಳನ್ನು ಪ್ರೇರೇಪಿಸಬೇಕು. ಅಷ್ಟೇ ಅಲ್ಲ, ರಜೆಯ ದಿನಗಳಲ್ಲಿ ಮಕ್ಕಳನ್ನು ಮಾರ್ಗದರ್ಶಿತ ಪ್ರವಾಸಗಳಿಗೆ ಕಳುಹಿಸಬೇಕು. ಈಗಂತೂ ಅನೇಕರು ಅಚ್ಚುಕಟ್ಟಾದ ಸಾಹಸ ಭರಿತ ಪ್ರವಾಸಗಳನ್ನು ಮಕ್ಕಳ ಸಲುವಾಗಿಯೇ ಆಯೋಜಿಸುತ್ತಿದ್ದಾರೆ. 'ದೇಶ ಸುತ್ತಿ ತಿಳಿ, ಕೋಶ ಓದಿ ತಿಳಿ' ಎಂಬ ಗಾದೆ ಮಾತು ನೆನಪಾಗುತ್ತದೆ. ಪ್ರವಾಸದಿಂದ, ಹತ್ತು ಹಲವು ಸ್ಥಳಗಳ ನೇರ ಪರಿವೀಕ್ಷಣೆಯಿಂದ ಖಂಡಿತ ಮಕ್ಕಳ ಮನಸ್ಸು ವಿಕಸನಗೊಳ್ಳುತ್ತದೆ. ಬದುಕಿನ ಮೌಲ್ಯಗಳನ್ನು, ಸಮಸ್ಯೆಯ ಮೂಲಗಳನ್ನು ಅರ್ಥ ಮಾಡಿಕೊಂಡು ಮುಂದೆ ಬದುಕನ್ನು ಎದುರಿಸುವ ಶಕ್ತಿ ಮಕ್ಕಳಿಗೆ ಬರಬೇಕಾದರೆ ಈ ತೆರೆನ ಪ್ರವಾಸಗಳು ಬಹಳ ಮುಖ್ಯ. ನಮ್ಮ ದೆಹಲಿಯಲ್ಲಿರುವ ಕನ್ನಡಿಗರು ತಮ್ಮ ಮಕ್ಕಳಿಗೆ ಕರ್ನಾಟಕದ ಪ್ರತಿ ಪ್ರವಾಸ ತಾಣಗಳ ನೇರ ಪರಿಚಯ ಮಾಡಿಕೊಡುವ ಮನಸ್ಸು ಮಾಡಬೇಕು. ಇದರಿಂದ ಕನ್ನಡದ ಕಂದಮ್ಮಗಳಿಗೆ ಕನ್ನಡ ಸಂಸ್ಕೃತಿಯ, ಆ ಸಂಸ್ಕೃತಿಯ ಆಂತರ್ಯದಲ್ಲಿರುವ ಜೀವನ ಮೌಲ್ಯಗಳ ಪರಿಚಯ ಮಾಡಿಕೊಟ್ಟಂತಾಗುತ್ತದೆ. ನಾಡು ನುಡಿಗಳ ಪರಿಚಯವಾದ ಮೇಲೆ ಆ ಮಕ್ಕಳು ದೇಶ ಸುತ್ತಲಿ, ಸಾಧ್ಯವಾದರೆ ಜಗತ್ತನ್ನೂ ಸುತ್ತಲಿ, ಆದರೆ ಒಮ್ಮೊಮ್ಮೆ ಮೌಢ್ಯ ಬಿತ್ತುವ 'ಮಾಯಾಪೆಟ್ಟಿಗೆ'ಯಿಂದ ಸಾಧ್ಯವಾದಷ್ಟು ದೂರವಿರಲಿ.

ಅತ್ತ ನಮ್ಮ ನಾಡಿನಲ್ಲಿ ಪ್ರಕೃತಿಯ ಮುನಿಸಿನಿಂದ ಬದುಕು ತಲ್ಲಣಗೊಂಡಿದೆ. ರಾಜ್ಯದ 146 ತಾಲ್ಲೋಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಅನ್ನದಾತ ಅನ್ನಿಸಿದ ರೈತ ಸ್ವತಃ ತಿನ್ನಲು ಅನ್ನವಿಲ್ಲದೆ ಕಂಗಾಲಾಗಿದ್ದಾನೆ. ಒಂದು ದಶಕದ ಅವಧಿಯಲ್ಲಿ ಕಡೆಯಪಕ್ಷ ಮೂರ್‍ನಾಲ್ಕು ಸಲ ಬರುವ ಈ ಬರಗಾಲ ಪ್ರತಿ ಸಲ ನಮಗೆ ಅನೇಕ ಪಾಠಗಳನ್ನು ಕಲಿಸುತ್ತದೆ. ಆದರೆ ನಮ್ಮ ಸರ್ಕಾರ ಹಾಗೂ ವ್ಯವಸ್ಥೆ ಈ ಕಲಿತ ಪಾಠಗಳನ್ನು ನಾಲ್ಕು ಹನಿ ಮಳೆ ಬೀಳುತ್ತಿದ್ದಂತೆ ಮರೆತುಬಿಡುತ್ತಾರೆ. ಹೀಗಾಗಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ಯೋಜನೆಗಳು ರೂಪಿತಗೊಂಡಿಲ್ಲ, ಅನುಷ್ಠಾನಗೊಂಡಿಲ್ಲ. ಬಹಳ ಮುಖ್ಯವಾಗಿ ಆಗಬೇಕಾದ್ದು ಕೊಚ್ಚಿಹೋಗುವ ಮಳೆ ನೀರನ್ನು ಹಿಡಿದಿಟ್ಟು ಅಂತರ್ಜಲದ ಮಟ್ಟವನ್ನು ಏರಿಸುವಂಥದ್ದು, ಸರ್ಕಾರ ಸಮರೋಪಾದಿಯಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಈ ಬಗ್ಗೆ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಯೋಜನೆಗಳು ರೂಪಿತಗೊಳ್ಳಲಿ, ಅಷ್ಟೇ ತೀವ್ರಗತಿಯಲ್ಲಿ ಅನುಷ್ಠಾನಗೊಳ್ಳಲಿ, ಬರಗಾಲಗಳು ನಮ್ಮ ನಾಡನ್ನು ಎಂದೂ ಕಾಡದಿರಲಿ ಎಂಬುದು ನಮ್ಮ ಹಾರೈಕೆ.

❑ ಉಷಾ ಭರತಾದ್ರಿ

ಅಂತರಾಳದಿಂದ...

# ಬೇಸಿಗೆಯ ನಿರೀಕ್ಷೆಯಲ್ಲಿ

ದೆಹಲಿಗೆ ಬೇಸಿಗೆ ಇನ್ನೂ ನುಸುಳುವ ಪ್ರಯತ್ನ ಮಾಡುತ್ತಿದೆ. ಸ್ವಲ್ಪ ಬಿಸಿ ಏರಿದರೆ ಸಾಕು. ಮೋಡ-ಮಳೆಗಳ ನಂಟು. ದೆಹಲಿಗೆ ಇದಾವ ಹೊಸ ಕಾಯಿಲೆಯಪ್ಪಾ? ಎಂಬಂತಾಗಿದೆ. ಹವಾಮಾನ ಇಲಾಖೆಯವರ ಪ್ರಕಾರ ಇದು 'ಪಶ್ಚಿಮದ ಗಲಿಬಿಲಿ'. ಮಧ್ಯ ಏಶಿಯಾದಿಂದ ಬರುವ ತಣ್ಣನೆಯ ಗಾಳಿಯಲ್ಲಿ ಮಳೆ-ಬಿರುಗಾಳಿಗಳ ಅಂಶಗಳು ತುಂಬಿರುತ್ತವೆಯಂತೆ. ಈ ಗಾಳಿ-ಮಳೆ-ಬಿರುಗಾಳಿಗಳ ಪ್ರಕೋಪ ದೆಹಲಿಯೇನು, ಉತ್ತರ ಭಾರತದ ಹಲವಾರು ರಾಜ್ಯಗಳ ಮೇಲೂ ಪ್ರಭಾವ ಬೀರುತ್ತಿವೆ. ಇತ್ತೀಚೆಗಷ್ಟೆ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದಿನ ವಿಮಾನ ನಿಲ್ದಾಣದ ಬಳಿ ಸಂಭವಿಸಿದ ವಿಮಾನ ಅಪಘಾತದ ಕಾರಣವೂ ಈ ಬಿರುಗಾಳಿಯ ಪ್ರಕೋಪವೇ ಎಂದು ತಜ್ಞರು ಹೇಳುತ್ತಿದ್ದಾರೆ.

ಒಟ್ಟಾರೆ ಹೇಳುವುದಾದರೆ ಈ ಬಗೆಯ ತಂಪಿನ ಏಪ್ರಿಲ್ ತಿಂಗಳನ್ನು ಕಳೆದ ಹಲವಾರು ದಶಕಗಳಲ್ಲಿ ನಾವು ಕಂಡಿಲ್ಲವೆಂದು ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಎಷ್ಟು ನಿಜವೋ ಎಷ್ಟು ಉತ್ಪ್ರೇಕ್ಷೆಯೋ? ಹವಾಮಾನ ಕುರಿತಾಗಿ ಎಂದಾದರೂ ನಿಖರವಾಗಿ ಹೇಳಲು ಸಾಧ್ಯವೇ? ಆದರೂ, ಒಂದು ಬಗೆಯ ವ್ಯವಸ್ಥಿತ ರೀತಿಯಲ್ಲಿ ಹವಾಮಾನದ ಮಾನದಂಡಗಳು ನಡೆಯದಿದ್ದರೆ ನಮ್ಮ ನಿಮ್ಮೆಲ್ಲರ ಬದುಕುಗಳು ಏರುಪೇರಾಗುತ್ತವೆ. ಬೇಸಿಗೆಯ ಬೇಗೆ ಇಡೀ ಉತ್ತರ ಭಾರತವನ್ನು ಸರಿಯಾಗಿ ಕಾಯಿಸಿದಿದ್ದರೆ ದಕ್ಷಿಣದ ತುದಿಯಿಂದ ಬರುವ ಮಾನ್ಸೂನ್ ಗಾಳಿಯ ದಿಕ್ಕೇ ಬದಲಾಗಿ ಹೋಗುತ್ತದೆ. ಈ ಬಾರಿ ಹಾಗೆ ಆಗಬಹುದೇ? ಯಾರಿಗೆ ಗೊತ್ತು? ಮೇ ತಿಂಗಳ ಮಧ್ಯ ಭಾಗದಿಂದ ಬೇಸಿಗೆಯ ನಿಜರೂಪ ನಮಗೆ ದೊರಕಬಹುದು.

ಇವೆಲ್ಲ ಊಹಾಪೋಹಗಳು ಹವಾಮಾನದ ಕುರಿತಾಗಿ ನಮಗೆ ದಿನಾಲೂ ದೊರಕುತ್ತವೆ. ನಮ್ಮ ಆಸುಪಾಸಿನಲ್ಲಿ ತುಂಬಿರುವ ಪ್ರಕೃತಿಯಲ್ಲಿ ಆಗುವ ಏರುಪೇರುಗಳನ್ನು ನಾವು ಗಮನಿಸುವುದೇ ಇಲ್ಲ. ಈ ಜೀವನದ ಜಂಜಾಟದಲ್ಲಿ ಅದಕ್ಕೆ ನಮಗೆ ವೇಳೆಯೆಲ್ಲಿದೆ? ಈ ಪ್ರಕೃತಿಯೆಂಬುದಾದರೂ ಎಲ್ಲಿದೆ? ನಮ್ಮ ನಮ್ಮ ಬದುಕಿನ ಓಟದಲ್ಲಿ ನಾವು ಮುಳುಗಿ ಹೋಗಿರುತ್ತೇವೆ. ಏನೇ ಇರಲಿ ಈ ಬಾರಿ ದೆಹಲಿಯ ತುಂಬ ಬೇಸಿಗೆಯಲ್ಲಿ ಅರಳಿಕೊಳ್ಳುವ ಅಮಲ್‌ತಸ್ ಗಿಡಮರಗಳು ಇನ್ನೂ ತಮ್ಮ ಮೈತುಂಬ ಹಳದಿ ಹೂಗಳ ಸಿಂಗಾರವನ್ನು ಮಾಡಿಕೊಳ್ಳಲು ಮರೆತು ಬಿಟ್ಟಿವೆ. ನಾನಿರುವ ಜೆಎನ್‌ಯುದ ವಿಶಾಲವಾದ ಕ್ಯಾಂಪಸ್ಸಿನ ತುಂಬ ತುಂಬಿರುವ ಅಮಲ್‌ತಸ್ ಗಿಡಗಳ ಕುರಿತಾಗಿ ಇದು ಸತ್ಯ. ಈ ಗಿಡಮರಗಳು ಎಲ್ಲ ಎಲೆಗಳನ್ನು ಉದುರಿಸಿಕೊಂಡು ಕಳೆದ ಒಂದು ತಿಂಗಳಿನಿಂದ ಸ್ತಬ್ಧವಾಗಿ ನಿಂತುಕೊಂಡಿವೆ. ಏಪ್ರಿಲ್ 17 ಅಥವಾ 18ರ ಹೊತ್ತಿಗೆ ಈ ಅಮಲ್‌ತಸ್ ಗಿಡಗಳ (ಹಾಗೂ ಮರಗಳ) ಮೇಲೆ ಅರಳುವ ಹಳದಿ ಹೂಗಳು ಈ ಬಾರಿ ಮೇ ತಿಂಗಳ ಮೊದಲ ವಾರ ಕಳೆದರೂ ಇನ್ನೂ ಬರಲೋ ಬೇಡವೋ ಎಂಬ ಬಿನ್ನಾಣದಲ್ಲಿ ಬೀಗಿಕೊಂಡಂತಿವೆ. ನಾನು ಕಂಡಂತೆ ಕಳೆದ ಹಲವಾರು ವರ್ಷಗಳಿಂದ ಏಪ್ರಿಲ್ 16 ಅಥವಾ 17ರ ಹೊತ್ತಿಗೆ ಅಮಲ್‌ತಸ್‌ನ ಹಳದಿ ಹಾಗೂ ಕೆಂಪಿನ ಹೂಗಳ ಪ್ರಪಂಚ ತೆರೆದುಕೊಳ್ಳಬೇಕು. ಆದರೆ ಈ ಬಾರಿ ಈ ಮರಗಳು ಇನ್ನೂ ನಿದ್ರಾವಸ್ಥೆಯಲ್ಲೇ ಇವೆ. ಕೆಲವೊಂದು ಮರಗಳು ಅಲ್ಲೊಂದು-ಇಲ್ಲೊಂದು ಎಂಬಂತೆ ತಟಕ್ಕನೇ ಅರಳಿಕೊಳ್ಳುತ್ತಿವೆ.

ಇವಕ್ಕೆಲ್ಲ ಕಾರಣ ಈ ಬೇಸಿಗೆಯ ಬೇಗೆಯಲ್ಲಿ ತುಂಬಿಕೊಂಡು ಬಂದ ತಂಪಿನ ಆವರಣವೇ ಎಂಬುದರ ಬಗ್ಗೆ ಎರಡು ಮಾತಿಲ್ಲ ಪರಿಸರವನ್ನು ನಾವು ಸ್ತಬ್ಧವಾಗಿ ಗಮನಿಸಬೇಕು. ಹತ್ತಾರು ವರ್ಷಗಳಿಂದ ಗಮನಿಸಬೇಕು. ಆಗ ಅದರ ಉಡಿಯಲ್ಲಿ ನಡೆಯುವ ಬದಲಾವಣೆಯ ಸ್ವರೂಪ ನಮಗೆ ಅರಿವಾಗುತ್ತದೆ. ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ನಮ್ಮ ಜೆಎನ್‌ಯುದ ಮನೆಯ ಆವರಣದಲ್ಲಿ ಒಂದೆರಡು ಹಳದಿ ಹಾಗೂ ಚುಕ್ಕೆ ಚುಕ್ಕೆಗಳನ್ನು ಮೈತುಂಬ ತುಂಬಿಸಿಕೊಂಡ ಹಾವುಗಳು ಹರಿದಾಡಿಕೊಂಡು ಹೋಗುತ್ತಿದ್ದವು. ನಾವು ಮನೆಯಲ್ಲಿದ್ದವರು ಹೆದರಿಕೊಂಡು ಇದಾವ ಗ್ರಹಚಾರವಪ್ಪ ಎಂದುಕೊಳ್ಳುವಂತಾಗಿತ್ತು. ನಮ್ಮ ಪರಿಸರ ಕ್ಲಬ್‌ನ ಸದಸ್ಯರು ಬಂದವರು ಕಣ್ಣರಳಿಸಿ ಈ ಹಾವುಗಳನ್ನು ನೋಡಿ ಜೋರಾಗಿ ನಕ್ಕು ಬಿಟ್ಟರು. "ಯಾರೂ ಯಾವುದಕ್ಕೂ ಹೆದರಬೇಕಾಗಿಲ್ಲ" ಎಂದು ಸಾರಿದರು. ಈ ಹಾವುಗಳು ಸಾವಿರಾರು ವರ್ಷಗಳಿಂದ ಇಲ್ಲೇ ಹರಿದಾಡಿಕೊಂಡಿದ್ದವು. "ಈಗ ನಾವೆಲ್ಲ ಬಂದು ಮನೆಗಿನೆ ಕಟ್ಟಿಕೊಂಡು ಇಲ್ಲಿರುವ ಪರಿಸರವನ್ನೇ ಏರುಪೇರು ಮಾಡಿದ್ದೇವೆ. ಒಂದು ಬಗೆಯಲ್ಲಿ ನೋಡಿದರೆ, ನಾವೇ ಅವರ (ಅಂದರೆ ಈ ಹಾವುಗಳ) ಮನೆಗೆ ಲಗ್ಗೆ ಹಾಕಿದ್ದೇವೆ. ಈಗ ಅವು ಎಲ್ಲಿ ಹೋಗಬೇಕು? ಅವರ ಮನೆಯೊಳಕ್ಕೆ ಓಡಿಯಾಡಲು ಅವಕ್ಕೆ ಜಾಗವಿಲ್ಲದಂತಾಗಿದೆ" . . .ಎಂದೆಲ್ಲ ಅಂಬೋಣಗಳನ್ನು ನಾವು ಕೇಳಿಕೊಂಡು ಸಂತಸದಿಂದ ಇದ್ದೇವು.

ಈಗ ಟಿವಿ ಹಾಗೂ ಕಂಪ್ಯೂಟರ್‌ಗಳ ಕಾಲ ನೋಡಿ. ಮಕ್ಕಳು 'ನ್ಯಾಶನಲ್ ಜಿಯೋಗ್ರಾಫಿಕ್ ಹಾಗೂ ಅನಿಮಲ್ ಪ್ಲಾನೆಟ್' ಮುಂತಾದ ಚಾನೆಲ್‌ಗಳಲ್ಲಿ ಬರುವ ಅತಿಮಾನವರನ್ನು ನೋಡಿಕೊಂಡು ಬೆಳೆದವರು. ಈ ಅತಿಮಾನವರಿಗೆ ಹಾವು-ಹುಲಿ-ಕರಡಿ ಎಂಬುದು ಲೆಕ್ಕಕ್ಕಿಲ್ಲ. ಈ ಬಗೆಯ ಜನರು ಈ ಜಗತ್ತಿನಲ್ಲಿ ಇದ್ದಾರಲ್ಲಪ್ಪ ಎಂಬಂತೆ ಈ ಚಾನೆಲ್‌ಗಳಲ್ಲಿ ಈ ಹುರಿಯಾಳುಗಳು ಹಾವು-ಹರಿಣೆಗಳನ್ನು ಕೈಯಲ್ಲಿ-ಕಾಲಲ್ಲಿ ಹಿಡಿದುಕೊಂಡು ಓಡಾಡುವ ಪರಿಯನ್ನು ನೋಡಿದಾಗ ನಮಗೂ ರೋಮಾಂಚನವಾಗುತ್ತದೆ. ನಮ್ಮಲ್ಲೂ ಆ ಬಗೆಯ ಜನರಿದ್ದಾರೆ. ಹೀಗಾಗಿ ಈ ಪ್ರಕೃತಿಯೊಂದಿಗೆ ನಾವೆಲ್ಲ ಒಂದಾಗಿ ಬದುಕಲು ಸಾಧ್ಯ ಎಂಬುದು ವಿದಿತ. ಕಳೆದ ಹತ್ತಾರು ತಿಂಗಳುಗಳಿಂದ ಈ ಹಾವು ಹರಿಣೆಗಳು ಎಲ್ಲೋ ಮಾಯವಾಗಿ ಹೋಗಿವೆ. ಎದ್ದೆದ್ದು ಬರುತ್ತಿರುವ ಹೊಸಹೊಸ ಕಟ್ಟಡಗಳ ಕಾರಣದಿಂದಾಗಿ ಅವುಗಳ ಸಾವಿರಾರು ವರ್ಷಗಳ ಮನೆ ಕುಸಿದು ಬಿದ್ದು ಹೋಗಿದೆ. ಅವುಗಳ ಬಿಲಗಳೇ ಮುಚ್ಚಿ ಹೋಗಿವೆ. ಬಹುಶಃ ಇನ್ನೂ ಸಾವಿರಾರು ವರ್ಷಗಳ ನಂತರ ನಾವೆಲ್ಲ ಧೂಳಿಪಟವಾಗಿ ಹೋದ ನಂತರ ಅವುಗಳು ಬಿಲದಿಂದ ಹೊರಬರಬಹುದು.

ಈ ಬಗೆಯ ವಿಚಾರಗಳಿಗೆ ನಮಗೆ ವ್ಯವಧಾನವೇ ಇಲ್ಲವಾಗಿದೆ. ಯಾವುದೋ ಅರಿಯದ ಕನಸನ್ನು ಬೆಂಬತ್ತಿಕೊಂಡು ಹೊರಟವರು ನಾವು. ಪ್ರಕೃತಿ ಪರಿಸರ ಎಂಬುದೆಲ್ಲ ಒಂದು ಬಗೆಯ ವಿಚಿತ್ರ ಮಾತಾಗಿ ತೋರುತ್ತದೆ. ಬೇಸರವಾದಾಗ, ಐಷಾರಾಮದ ಜೀವನದ ನೆನಪು ತುಂಬಿ ಹರಿದಾಗ ಪರಿಸರ, ಗಿಡಮರಗಳು, ನೀರು-ನೆಲ ಎಲ್ಲ ಸಂತಸದ ಬುಗ್ಗೆಯಾಗಿ ಪರಿಣಮಿಸುತ್ತದೆ. ಪ್ರಕೃತಿಯ ಉಡಿಯಲ್ಲೇ ಬೆಳೆದವರ ಗತಿ ಏನಾಗಬೇಕು? ಗಣಿ ಕೈಗಾರಿಕೆ, ಅಣುಸ್ಥಾವರಗಳು, ಕಾರ್ಖಾನೆಗಳು. . . ಹೀಗೆ ಹತ್ತು ಹಲವಾರು ರಾಜಕೀಯ ಹಾಗೂ ಇತರ ಕಾರಣಗಳು ಇಂದಿನ ಪರಿಸರ ಹಾಗೂ ಪ್ರಕೃತಿಗಳ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಿವೆ. ಇದನ್ನೆಲ್ಲ ಮೀರಿ ಬೆಳೆಯುವುದು ಹೇಗೆ? ಈ ಕುರಿತಾಗಿ ವಿಸ್ತೃತವಾದ ಚರ್ಚೆ ನಡೆಯಬೇಕಾಗಿದೆ.

❑ ಡಾ. ವೆಂಕಟಾಚಲ ಹೆಗಡೆ

## ಉಚಿತ ವೈದ್ಯಕೀಯ ತಪಾಸಣೆ

ಮೇ 27 ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

## ಮುನ್ನೋಟ


ವಸಂತ ಕಾಲ ಮುಗಿಯುತ್ತಾ ಬಂತು. ದೆಹಲಿಯ ಎಲ್ಲ ಕನ್ನಡಿಗರು ಸರ್ವೇಸಾಮಾನ್ಯವಾಗಿ ಈ ದೆಹಲಿಯ ಬೇಸಿಗೆ ಮುಗಿಸಲು ಶಾಲೆ ರಜೆಗಳ ನಂತರ ನಮ್ಮ ನಾಡಿಗೆ, ತಮ್ಮ ತಮ್ಮ ಊರಿಗೆ ಹೋಗುವ ತವಕ. ಕರ್ನಾಟಕದಲ್ಲಿ ಒಂದು ತಿಂಗಳು ಅಥವಾ ಹದಿನೈದು ದಿನಗಳು ಕಳೆದು ಬಂದರೆ ಈ ದೆಹಲಿಯ ಬೇಸಿಗೆ ಸ್ವಲ್ಪ ಮಟ್ಟಿಗೆ ಕಡಿಮೆಯಾದಂತೆ. ದೆಹಲಿ ಕರ್ನಾಟಕ ಸಂಘದಲ್ಲೂ ಸಾಮಾನ್ಯವಾಗಿ ಈ ಒಂದೆರಡು ತಿಂಗಳು ಕಾರ್ಯಕ್ರಮಗಳು ಕಡಿಮೆಯಾಗುತ್ತವೆ. ನಿಲ್ಲುವಂತೇನೂ ಇಲ್ಲ.

ಏಪ್ರಿಲ್ ತಿಂಗಳಿನಲ್ಲಿ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಸಾಹಿತ್ಯ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಹಾಗೆಯೇ ಮುಖ್ಯವಾಗಿ ನಮ್ಮನ್ನು ಅಗಲಿದ ಶ್ರೀ ಎಂ.ಕೆ ಧರ್ಮರಾಜ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು. ನಾವು ನೀವುಗಳು ಕಂಡ ಹಾಗೇ ಶ್ರೀ ಧರ್ಮರಾಜರು ಹಿರಿಯ ಪತ್ರಕರ್ತರು. ಸ್ವಾತಂತ್ರ್ಯ ದೊರಕುವ ಮೊದಲೇ 1946ರಲ್ಲಿ ದೆಹಲಿಗೆ ಬಂದು ತಮ್ಮ ಛಾಪು ಮೂಡಿಸಿದವರು. ಎಲೆಮರೆಯ ಕಾಯಿಯ ಹಾಗೆ ಇದ್ದ ಶ್ರೀ ಧರ್ಮರಾಜರು ಕ್ರಿಕೆಟ್‌ನಲ್ಲಿ ತುಂಬಾ ಅಭಿರುಚಿಯುಳ್ಳವರಾಗಿದ್ದರು. ಇವರು ಮೊಟ್ಟ ಮೊದಲಿಗೆ ಶ್ರೀ ಬ್ರಾಡ್‌ಮನ್‌ರನ್ನು ಸಂದರ್ಶನ ಮಾಡಿದವರು. 95 ವರ್ಷದ ಇವರು ಮೊನ್ನೆ ಮೊನ್ನೆ ಸಂಘದಲ್ಲಿ ನಡೆದ ಕನ್ನಡದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದು ಅವರ ಇಳಿವಯಸ್ಸಿನಲ್ಲಿಯ ಸಾಹಿತ್ಯಾಸಕ್ತಿ ನಮ್ಮ ಯುವ ಪೀಳಿಗೆ ನಾಚುವಂತೆ ಮಾಡಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅವರ ಮೊದಲನೆಯ ಮಗನಾದ ಡಾ.ಚಂದ್ರಕುಮಾರ್ ಬಲ್ಲಾಳ್ ಅವರು ಲೋಧಿ ಕ್ರಿಮೇಶನ್‌ನಲ್ಲಿ ಹೇಳಿದ ಒಂದು ಮಾತನ್ನು ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದೇನೆ–ಅವರ ತಂದೆಯವರು ಹೇಳಿದ್ದರಂತೆ ನನ್ನ ಮರಣಾನಂತರ ನನ್ನ ಶವ ಸಂಸ್ಕಾರವನ್ನು ತುಂಬಾ ಹಿತಮಿತಿಯಿಂದ ಮಾಡಬೇಕು, ವಿದ್ಯುತ್ ಚಿತಾಗಾರದಲ್ಲಿ ನನ್ನ ಅಂತ್ಯಸಂಸ್ಕಾರವನ್ನು ಮಾಡಬೇಕು. ಏಕೆಂದರೆ ಎಷ್ಟೋ ಮರಗಳನ್ನು ನಾನು ಉಳಿಸಿದಂತಾಗುತ್ತದೆ. ಒಂದು ಮರವನ್ನು ಬೆಳೆಸಲು 20 ವರ್ಷಗಳು ಬೇಕು. ಆ ಮರಗಳನ್ನು ಕಡಿದು ನನ್ನ ಅಂತ್ಯ ಸಂಸ್ಕಾರವನ್ನು ಮಾಡುವುದು ಬೇಡ, ಅದರ ಜೊತೆಗೆ ಅದರಲ್ಲಿರುವ ಕ್ರಿಮಿಕೀಟಗಳು ಸಾಯುವುದು ಬೇಡ ಎಂಬುದು. ಇದು ಅವರ ಪ್ರಕೃತಿಯ ಮೇಲಿನ ಅಭಿಮಾನ. ಹೀಗೆಯೇ ಎಲ್ಲರೂ ಯೋಚಿಸಿದಲ್ಲಿ ಕಾಡು ಉಳಿದು ನಾಡು ಬೆಳೆಯುತ್ತದೆ. ಅದೇ ರೀತಿ ಅವರ ಮಗನಾದ ಡಾ.ಚಂದ್ರಕುಮಾರ್ ಬಲ್ಲಾಳ್ ಅವರು ಅವರ ಇಚ್ಛೆಯಂತೆಯೇ ನಡೆಸಿದರು. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸೋಣ.


ದೆಹಲಿ ಕರ್ನಾಟಕ ಸಂಘ ಹಾಗೂ ಬಸವ ಇಂಟರ್ ನ್ಯಾಷನಲ್ ಸೆಂಟರ್‌ನೊಂದಿಗೆ ಜೊತೆಗೂಡಿ ಆಚರಿಸಿದ ಬಸವ ಜಯಂತಿ ಕಾರ್ಯಕ್ರಮ ತುಂಬಾ ಅದ್ಭುತವಾದ ಕಾರ್ಯಕ್ರಮವಾಗಿದ್ದು ಸುಮಾರು 400ಕ್ಕೂ ಹೆಚ್ಚು ಕನ್ನಡಿಗರು ಭಾಗವಹಿಸಿದ್ದು ಕಾರ್ಯಕ್ರಮ ತುಂಬಾ ಸುಂದರವಾಗಿ ನಡೆಯಿತು. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಅಧ್ಯಕ್ಷರಾದ ಶ್ರೀ ಅಮರನಾಥ್ ತಳವಾಡೆ, ಉಪಾಧ್ಯಕ್ಷರಾದ ಶ್ರೀ ಚೆನ್ನು ಎಸ್.ಮಠದ, ಕಾರ್ಯದರ್ಶಿ ಶ್ರೀ ವಿ.ವಿ.ಬಿರಾದಾರ, ಖಜಾಂಚಿಗಳಾದ ಶ್ರೀ ಜಗದೀಶ್ ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರುಗಳಿಗೆ ಮತ್ತು ಮುಖ್ಯವಾಗಿ ಚಂದ್ರಶೇಖರ್ ಹಾಗೂ ಡಾ.ಅಶೋಕ್ ಗೊನಾಲ್ ಅವರಿಗೆ ಅಭಿನಂದನೆಗಳು. ಇನ್ನು ಮುಂದೆಯೂ ಸಹ ಇದೇ ರೀತಿಯ ಕಾರ್ಯಕ್ರಮಗಳನ್ನು ನಡೆಸೋಣ.

❑ ಸಿ.ಎಂ. ನಾಗರಾಜ

## ಸಂಸತ್ ಭವನದಲ್ಲಿ ಬಸವ ಜಯಂತಿ ಆಚರಣೆ



ಸಂಸತ್ ಭವನದ ಆವರಣದಲ್ಲಿರುವ ಬಸವಣ್ಣನವರ ಪುತ್ಥಳಿಗೆ ಏಪ್ರಿಲ್ 24 ಬಸವ ಜಯಂತಿಯಂದು ಕರ್ನಾಟಕದ ಸಂಸದರಾದ ಪ್ರಭಾಕರ ಕೋರೆ, ಜಿ.ಎಂ. ಸಿದ್ದೇಶ್ ಹಾಗೂ ಬಸವರಾಜ ಪಾಟೀಲ ಸೇಡಂ ಇವರು ನಮನ ಸಲ್ಲಿಸಿದರು. ಇವರೊಂದಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಶಶಿಕಾಂತ್ ಪಾಟೀಲ್ ಅವರೂ ಉಪಸ್ಥಿತರಿದ್ದರು.ಅ



# ಪದ್ಮ ಪುರಸ್ಕೃತರಿಗೆ ಆತ್ಮೀಯ ಅಭಿನಂದನೆ



ಏಪ್ರಿಲ್ 3 ರ ಚೈತ್ರದ ಮುಸ್ಸಂಜೆ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್ ನಲ್ಲಿ ದೇಶದ ಅತ್ಯುನ್ನತ ಸಮ್ಮಾನವಾದ ಪದ್ಮ ಪುರಸ್ಕಾರವನ್ನು ಪಡೆದ ಕನ್ನಡದ ಎರಡು ಹಿರಿಯ ಚೇತನ–ಆರ್. ನಾಗರತ್ನಮ್ಮ ಮತ್ತು ರಾಮಚಂದ್ರ ಹೆಗಡೆ ಚಿಟ್ಟಾಣಿ ಅವರನ್ನು ಅಭಿನಂದಿಸಲಾಯಿತು. 1926ರಲ್ಲಿ ಮೈಸೂರಿನಲ್ಲಿ ಹುಟ್ಟಿದ ನಾಗರತ್ನಮ್ಮ ತಮ್ಮ ಜೀವನದ ಎಂಭತ್ತಾರು ಸಂವತ್ಸರಗಳಲ್ಲಿ ರಂಗಭೂಮಿಯನ್ನೇ ಉಸಿರಾಡಿದ ಅಪೂರ್ವ ಕಲಾವಿದೆ. ಮೂವತ್ತರ ದಶಕದಲ್ಲಿ ಹೆಣ್ಣುಮಕ್ಕಳು ಮನೆಯಿಂದ ಹೊರಗೆಹೋಗಿ ಬಣ್ಣಬಳಿದುಕೊಂಡು, ವೇಷಹಾಕಿ ರಂಗಭೂಮಿಗೆ ಕಾಲಿಡುವುದೇ ಕೆಟ್ಟ ಸಂಪ್ರದಾಯವೆಂದು ಹೀಗಳೆಯುತ್ತಿದ್ದ ಕಾಲದಲ್ಲಿ ಕಲಾಸೇವಾ ಮಂಡಳಿಯ ಮೂಲಕ ರಂಗಭೂಮಿ ಪ್ರವೇಶಿಸಿ ರಾಜ್ಯಾದ್ಯಂತ ತಿರುಗಾಡಿ ಲೆಕ್ಕವಿಲ್ಲದಷ್ಟು ನಾಟಕ ಪ್ರದರ್ಶಿಸಿದ ಹೆಗ್ಗಳಿಕೆ ಅವರದು. ಇಷ್ಟೆ ಇಲ್ಲದೇ ಪುರುಷರಿಗೆ ಕಡಿಮೆಯಿಲ್ಲವೆಂಬಂತೆ ಸ್ತ್ರೀ ನಾಟಕ ಸಂಸ್ಥೆ ಕಟ್ಟಿ ಮಹಿಳೆಯರಿಂದಲೇ ನಾಟಕ ಮಾಡಿಸಿ, ಪುರುಷ ಪಾತ್ರಗಳಿಗೆ ಜೀವ ತುಂಬಿದ ಗಟ್ಟಿ ಅಭಿನಯ ಅವರದು ಕೃಷ್ಣ, ಭೀಮ, ಬಲರಾಮ, ಸದಾರಮೆಯ–ಕಳ್ಳ, ಸಂಸಾರ ನೌಕೆಯ ಸುಂದರ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ ಖ್ಯಾತಿ ಅವರದು ಎಂದು ಅವರ ಕಿರುಪರಿಚಯದ ಮೂಲಕ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಅಭಿನಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತ ಎಲ್ಲರನ್ನು ಸ್ವಾಗತಿಸಿದರು.

ಬಡಗು ತಿಟ್ಟಿನ ಯಕ್ಷಗಾನ ದಿಗ್ಗಜ ಎಪ್ಪತ್ತಾರರ ಹರೆಯದ ರಾಮಚಂದ್ರ ಚಿಟ್ಟಾಣಿ ಅವರಿಗೆ ಪದ್ಮ ಪ್ರಶಸ್ತಿ ಬಂದುದು ಇಡೀ ಯಕ್ಷಗಾನ ಪರಂಪರೆಗೆ ಸಂದ ಗೌರವವಾಗಿದೆ ಎಂದು ಅಪ್ಯಾಯತೆಯಿಂದ ನುಡಿದ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ತಾವು ಬಾಲ್ಯದಲ್ಲಿ ಶರಾವತಿ ನದಿಯ ಸುಂದರ ಪರಿಸರದಲ್ಲಿ ಚಿಟ್ಟಾಣಿ ಅವರ ಆಟಗಳನ್ನು ನೋಡುತ್ತಲೇ ಬೆಳೆದ ಕಾಲವನ್ನು ಮೆಲುಕು ಹಾಕಿದರು. ಚಿಟ್ಟಾಣಿ ಎಂಬುದು ಹೊನ್ನಾವರ ತಾಲೂಕಿನ ಪುಟ್ಟ ಹಳ್ಳಿ. ಆಗ ಸುತ್ತುಮುತ್ತಲಿನ ಊರುಗಳಿಗೆ ಅಮೃತೇಶ್ವರೀ ಮೇಳ, ಕೊಂಡದಕುಳಿ ಮೇಳ, ಪೆರ್ಡೂರು ಮೇಳ ಮುಂತಾದವುಗಳೆಲ್ಲ ಬರುತ್ತಿದ್ದ ಕಾಲವದು. ಚಿಟ್ಟಾಣಿ ಅವರು ಹಾಕುತ್ತಿದ್ದ ಕೀಚಕ, ಭಸ್ಮಾಸುರ ವೇಷಗಳನ್ನು ಯಾರೂ ಮರೆಯಲಾರರು. ತೆಂಕುತಿಟ್ಟು ಮತ್ತು ಬಡಗುತಿಟ್ಟಿನ ತಂಡದ ಕಲಾವಿದರು ಈಗಲೂ ತುಲನಾತ್ಮಕವಾಗಿ ಚಿಟ್ಟಾಣಿ ಅವರ ಪಾತ್ರಗಳನ್ನು ನೋಡುತ್ತಾರೆ ಎಂದು ಪರಿಚಯಿಸಿದ ವೆಂಕಟಾಚಲ ಹೆಗಡೆ ಅವರು ಚಿಟ್ಟಾಣಿ ಅವರ ಪತ್ನಿ ಸುಶೀಲಾ ಚಿಟ್ಟಾಣಿ ಅವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸಿ ಸ್ವಾಗತಿಸಿದರು.

ಕರ್ನಾಟಕದ ಹಿರಿಮೆಯನ್ನು ಹೆಚ್ಚಿಸಿದ ಇಬ್ಬರು ಹಿರಿಯ ಕಲಾವಿದರನ್ನು ಸಂಘದ ಪರವಾಗಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಅಭಿನಂದನೆ ಸ್ವೀಕರಿಸಿ ಮನದ ಮಾತುಗಳನ್ನು ಹಂಚಿಕೊಂಡ ನಾಗರತ್ನಮ್ಮನವರ ದನಿಯಲ್ಲಿ "ಈ ಪ್ರಶಸ್ತಿ ಸ್ವಲ್ಪ ಮೊದಲೇ ಸಿಕ್ಕಿದ್ದರೆ ಚೆನ್ನಾಗಿತ್ತು" ಎಂಬ ವಿಷಾದದ ಎಳೆಯೊಂದು ಮೀಟಿದಂತಿತ್ತು. ಯಾಕೆಂದರೆ ಕಲಾವಿದರಿಗೆ ಸ್ಫೂರ್ತಿ ತುಂಬುವ ಪ್ರಶಸ್ತಿಗಳು ಕಲಾವಿದರ ಜೀವಮಾನ ಸಾಧನೆಗೆ ಸರಿಯಾದ ಸಮಯದಲ್ಲಿ ಸಿಕ್ಕರೆ ಕಲಾವಿದರ ಪ್ರವರ್ಧಮಾನಕ್ಕೆ ಸಹಕಾರಿಯಾಗುತ್ತವೆ. ಇಳಿ ವಯಸ್ಸಿನಲ್ಲಿ ಅವನ್ನು ಅನುಭವಿಸುವ ಶಕ್ತಿಯೂ ಇರುವುದಿಲ್ಲವೆಂಬ ಮಾತನ್ನು ಹೇಳಿದ ನಾಗರತ್ನಮ್ಮ ಕೊನೆಗೂ ಜನರಿಗೆ ಈ ಕಲಾವಿದೆಯ ನೆನಪಾಯಿತಲ್ಲ !! ಎಂದು ಸಂತಸಪಟ್ಟರಲ್ಲದೇ ದೆಹಲಿ ಕನ್ನಡಿಗರು ತೋರಿದ ಪ್ರೀತ್ಯಾದರಗಳಿಗೆ ಕೃತಜ್ಞತೆ ಸಲ್ಲಿಸಿದರು. ಚಿಟ್ಟಾಣಿ ಅವರೂ ಈ ಮಾತುಗಳನ್ನು ಪುಷ್ಟೀಕರಿಸಿದರು. ನೆರೆದ ಅಭಿಮಾನಿಗಳ ಕೋರಿಕೆಯ ಮೇರೆಗೆ ನಾಗರತ್ನಮ್ಮ ಅವರು ಸಂಸಾರ ನೌಕೆಯ ಸುಂದರನ ಇಂಗ್ಲಿಷ್ ಸಂವಾದವನ್ನೂ (ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದಿದ್ದರೂ ಸಹ) ಮತ್ತು ಕೃಷ್ಣಲೀಲೆಯ–ಕಂಸನ ಪ್ರಸಂಗದ ಸಂಭಾಷಣೆಗಳನ್ನೂ ಸಾಭಿನಯಪೂರ್ವಕ, ಪಾತ್ರಗಳಲ್ಲೊಂದಾಗಿ ವೀರಾವೇಶದಿಂದ ಅದ್ಭುತವಾಗಿ ಪ್ರದರ್ಶಿಸಿ ವಿಸ್ಮಯಗೊಳಿಸಿದರು. ತಮಗೆ ದೊರೆತ ಈ ಪದ್ಮಪುರಸ್ಕಾರ ಎಲ್ಲ ಕಲಾವಿದರಿಗೂ ಸಂದ ಗೌರವವೆಂದು ಭಾವಪೂರಿತರಾಗಿ ನುಡಿದರು.

ನಾಗರತ್ನಮ್ಮನವರ ದಂಗುಬಡಿಸುವ ರಂಗ ನಿಷ್ಠೆಯನ್ನೂ, ಅದ್ಭುತ ಕಲಾ ನೈಪುಣ್ಯವನ್ನೂ ಹತ್ತಿರದಿಂದ ಕಂಡು ಮಾತನಾಡಿದ ಚಿಟ್ಟಾಣಿ ಅವರು "ರಂಗಭೂಮಿ ಒಂದು ಕಾಲಕ್ಕೆ ಅದ್ಭುತವಾಗಿ ಮೆರೆದಿತ್ತು. ಈಗ ಹಿಂದೆ ಸರಿಯುತ್ತಿದೆಯೇನೋ ಎನಿಸುತ್ತಿದೆ. ರಂಗಭೂಮಿಯ ಅದ್ಭುತ ಪ್ರತಿಭೆಯ ನಾಗರತ್ನಮ್ಮನವರಿಗೆ ಪದ್ಮಶ್ರೀ ಅಷ್ಟೇ ಅಲ್ಲ ಪದ್ಮಭೂಷಣ, ಪದ್ಮವಿಭೂಷಣ ಸಿಗಬೇಕಿತ್ತು" ಎಂದು ಅಭಿಮಾನದಿಂದ ನುಡಿದರು. ಇದೇ ವರ್ಷ ಯಕ್ಷಗಾನ ಕಲೆಗೆ ಮೊಟ್ಟ ಮೊದಲ ಬಾರಿಗೆ ಪದ್ಮ ಪ್ರಶಸ್ತಿ ದೊರೆತಿದೆ. ಇದು ಇಡೀ ಉತ್ತರಕನ್ನಡ ಜಿಲ್ಲೆಗೆ ಸಂದ ಗೌರವ. ಕನ್ನಡ ಉಳಿದದ್ದು ಕನ್ನಡ ಸಾಹಿತ್ಯ, ಕಲೆ, ರಂಗಭೂಮಿ, ಜನಪದರಿಂದ ಯಕ್ಷಗಾನದ ಹಿರಿಮೆ ರಾಜಧಾನಿಯವರೆಗೂ ಬೆಳೆದಿರುವುದು ಅಭಿಮಾನದ ಸಂಗತಿ ಎಂದರು. ದೆಹಲಿ ಕನ್ನಡಿಗರು ತಮ್ಮನ್ನು ಇಷ್ಟು ಪ್ರೀತ್ಯಾದರದಿಂದ ಸನ್ಮಾನಿಸಿದ್ದಕ್ಕೆ ಕೃತಜ್ಞತೆ ಹೇಳುತ್ತ ರಾಜಧಾನಿಯಲ್ಲಿ ಕನ್ನಡಿಗರ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸಿದರು. ಈ ಸುಂದರ ಸಂಜೆಗೆ ಚಿಟ್ಟಾಣಿ ಅವರೊಂದಿಗೆ ಸಹವರ್ತಿಯಾಗಿ ಹೊನ್ನಾವರದ ಕಬ್ಬಿನಗದ್ದೆಯಿಂದ ಆಗಮಿಸಿದ್ದ ಶ್ರೀ ಸುಬ್ರಹ್ಮಣ್ಯ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್.ಜಿ. ಭಟ್ ಅವರು ಸಾಂದರ್ಭಿಕವಾಗಿ ಮಾತನಾಡುತ್ತ ಕನ್ನಡವೆಂಬುದು ಮೂರಕ್ಷರದ ಮಾಂತ್ರಿಕಶಬ್ದ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಎರಡು ಹಿರಿಯ ಚೇತನಗಳಿಗೆ ಸನ್ಮಾನ ಮಾಡಿದ ಮುಸ್ಸಂಜೆಯಲ್ಲಿ ನಾಗರತ್ನಮ್ಮನವರನ್ನು ಹತ್ತಿರದಿಂದ ನೋಡುವ ಭಾಗ್ಯ ದೊರೆತುದು ತಮ್ಮ ಪುಣ್ಯ. ತಮ್ಮ ಜೀವನವನ್ನೇ ಕಲೆಗಾಗಿ ಸಮರ್ಪಿಸಿಕೊಂಡ ಇಂಥ ಧೀಮಂತ ಕಲಾವಿದರಿಗೆ ಪ್ರಶಸ್ತಿ ಲಭಿಸಿರುವುದು ಈ ಕಾಲದ ಭಾಗ್ಯ, ನಮ್ಮೆಲ್ಲರ ಭಾಗ್ಯ. ಕನ್ನಡದ ಇಬ್ಬರು ಮಹಾಚೇತನರು ನಮ್ಮನ್ನು ಮುನ್ನಡೆಸಲಿ" ಎಂದು ಅಪ್ಯಾಯತೆಯಿಂದ ನುಡಿದರು. ಸಹಕಾರ್ಯದರ್ಶಿ ಎನ್.ಅರ್. ಶ್ರೀನಾಥ್ ವಂದಿಸಿದರು.

ಇದೇ ಸಂಭ್ರಮ ಮುಂದುವರಿದು ಏಪ್ರಿಲ್ 8 ರಂದು ಮತ್ತೋರ್ವ ಪದ್ಮ ಪುರಸ್ಕೃತ ಕನ್ನಡಿಗ ಪರಿಸರ ಮತ್ತು ವನ್ಯಜೀವಿ ತಜ್ಞ, ಹುಲಿ ಸಂರಕ್ಷಣಾ ಕಾರ್ಯಕ್ರಮದ ತಾಂತ್ರಿಕ ನಿರ್ದೇಶಕರಾಗಿರುವ ಡಾ.ಉಲ್ಲಾಸ್ ಕಾರಂತ್ ಅವರನ್ನು ಅಭಿನಂದಿಸಲಾಯಿತು. ವನ್ಯಜೀವಿ ಸಂರಕ್ಷಣೆ ಮತ್ತು ಪರಿಸರ ಉಳಿಸುವ ಕಾರ್ಯಕ್ಕಾಗಿ ದೇಶದ ಪ್ರತಿಷ್ಠಿತ ಪ್ರಶಸ್ತಿ ಪಡೆದ ಡಾ.ಉಲ್ಲಾಸ್ ಕಾರಂತರನ್ನು ಸಹಕಾರ್ಯದರ್ಶಿ ರೇಣುಕಾ ನಿಡಗುಂದಿ ಅಭಿನಂದಿಸಿ ಸ್ವಾಗತಿಸಿದರು. ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಉಲ್ಲಾಸ್ ಕಾರಂತರ ಕಿರು ಪರಿಚಯ ನೀಡಿದರು. ಮಾಜಿ ಪ್ರಧಾನ ವಾರ್ತಾಧಿಕಾರಿ, ಹಿರಿಯ ಕನ್ನಡಿಗ ಐ. ರಾಮಮೋಹನ್ ರಾವ್ ಅವರು ಸಂಘದ ಪರವಾಗಿ ಅಭಿನಂದಿಸಿದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಉಲ್ಲಾಸ್ ಕಾರಂತರು ತಾವು 1948 ರಲ್ಲಿ ಗಾಂಧೀಜಿಯ ಹತ್ಯೆಯಾದ ವರ್ಷದಲ್ಲಿ ಪುತ್ತೂರಿನಲ್ಲಿ ಜನಿಸಿದ್ದು ಹಾಗೂ ಅವರ ಬಾಲ್ಯಕಾಲದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ತೀವ್ರಗತಿಯಲ್ಲಿದ್ದ ಪ್ರಗಾಢ್ಯ ಕಾಲವನ್ನು ನೆನೆದರು. ಹೀಗೆ ಚಾರಿತ್ರಿಕ ಇತಿಹಾಸದ ಹಿನ್ನೆಲೆಯಲ್ಲಿ ಬೆಳೆದ ಉಲ್ಲಾಸರಿಗೆ ನಿಸರ್ಗ ಸಂರಕ್ಷಣೆ – ಕಾರ್ಯಕ್ಷೇತ್ರ. ಫ್ಲೋರಿಡಾ ವಿಶ್ವವಿದ್ಯಾಲಯದಿಂದ ವನ್ಯಜೀವಿ ಪರಿಸರ ಶಾಸ್ತ್ರದಲ್ಲಿ ಪಿ.ಎಚ್.ಡಿ. ಪಡೆದಿರುವ ಅವರಲ್ಲಿ ಪ್ರಖ್ಯಾತ ಸಾಹಿತಿ, ಹೋರಾಟಗಾರ ತಂದೆ



ಡಾ.ಶಿವರಾಮ ಕಾರಂತರ ಪ್ರಭಾವ ಅತಿಯಾಗಿರದಿದ್ದರೂ ಅದಮ್ಯವಾದ ಕನ್ನಡ ಸಂವೇದನೆಯಿದೆ. ಎಲ್ಲೇ ಇರಿ, ಏನೇ ಮಾಡಿ ಕನ್ನಡತನವನ್ನು ಮಾತ್ರ ಕಳೆದುಕೊಳ್ಳದಿರಿ ಎನ್ನುವ ಉಲ್ಲಾಸ್ ಕಾರಂತರು ಪರಿಸರ ತಜ್ಞರಾಗಿ ಮಾತ್ರ ತೋರದೇ ಭಿನ್ನವಾಗಿ ಕಾಣುತ್ತಾರೆ. ಈ ಯುಗದ ಜಾಗತಿಕ ತಾಪಮಾನದ ತಲ್ಲಣ, ನಿಸರ್ಗ ಸಂರಕ್ಷಣೆಯ ಕುರಿತು ಮಾತನಾಡಿದ ಅವರು ಖ್ಯಾತ ಪರಿಸರ ಚಿಂತಕ ಜೇಮ್ಸ್ ಲವ್ ಲಾಕ್ ಅವರು ಮಂಡಿಸಿದ ಜೈವಿಕ ಮಂಡಲದ ವಿಷಯವನ್ನು ಉಲ್ಲೇಖಿಸುತ್ತ ಈ ಭೂಮಿಯಲ್ಲಿ ಹತ್ತು ಸಾವಿರ ವರ್ಷಗಳ ಹಿಂದೆ ಕೃಷಿ ಬಂತು. ಜತೆಗೆ ನಿಸರ್ಗವನ್ನು ನಾಶಮಾಡುವ ವಿಧಾನಗಳೂ ಹೇಗೆ ಹುಟ್ಟಿಕೊಂಡವು ಎಂಬುದನ್ನು ವಿವರಿಸುತ್ತ, ಹುಲಿಗಳನ್ನು ಕಾಪಾಡುವ ಸಂಶೋಧನೆಯ ಕುರಿತು ಚುಟುಕಿನಲ್ಲಿ ಹೇಳಿ ಹಾಗೇ ಮಾತಿನಲ್ಲಿ ವಿವರಿಸಿದರೆ ಅರ್ಥವಾಗುವುದಿಲ್ಲ ಮತ್ತೊಮ್ಮೆ ದೆಹಲಿಗೆ ಬಂದಾಗ ಪ್ರಾತ್ಯಕ್ಷಿಕೆಗಳ ಮೂಲಕ ವಿವರಿಸುವೆ ಎಂದು ಉತ್ಸಾಹದಿಂದ ಹೇಳಿದರು. ಪರಿಸರವಾದವೆಂದರೆ–ಮನುಷ್ಯರಿಗೆ ಬದುಕಲು ಪರಿಸರ ಸೂಕ್ತವಾಗಿರಬೇಕು. ಪ್ರಾಣಿಹಕ್ಕು, ಪ್ರಾಣಿ ಸಂರಕ್ಷಣೆ ಎಂದರೆ–ಇತರರಂತೆ ಪ್ರಾಣಿಗಳಿಗೂ ಬದುಕಲು ತಕ್ಕ ಪರಿಸರ ಮತ್ತು ಸ್ಥಳಾವಕಾಶವಿರಬೇಕು–ಹೀಗೆ ವಿಭಿನ್ನ ವಿಷಯಗಳ ಮೇಲೆ ಬೆಳಕು ಚೆಲ್ಲಿದ ಅವರು ನಂತರದ ಸಂವಾದದಲ್ಲಿ ಅನೇಕ ಪರಿಸರಪ್ರೇಮಿ ಹಾಗೂ ಅಭಿಮಾನಿಗಳ ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪದ್ಮ ಪುರಸ್ಕಾರ ಸಮ್ಮಾನಿತ ಈ ಕನ್ನಡದ ಹೆಮ್ಮೆಯ ಚೇತನಗಳಿಗೆ ಮತ್ತೊಮ್ಮೆ ಹಾರ್ದಿಕ ಅಭಿನಂದನೆಗಳು.

❑ ರೇಣುಕಾ ನಿಡಗುಂದಿ

# ದೆಹಲಿಯಲ್ಲಿ ಯಶಸ್ವಿಯಾಗಿ ನಡೆದ 29ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಕನ್ನಡ ಬೆಳೆಸಲು ಕರೆ

ದೆಹಲಿಯಲ್ಲಿ ಏಪ್ರಿಲ್ 7 ಮತ್ತು 8ರಂದು 29ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. 'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ದೇಶದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ, ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆಯ ಸರ್ವಾಧ್ಯಕ್ಷೆ ಪ್ರೊ. ಗೀತಾ ಬಾಲಿ ಅವರು ಕನ್ನಡಿಗರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಇನ್ನಷ್ಟು ಭವ್ಯವಾಗಿ ಬೆಳೆಸಿ ಕರ್ನಾಟಕವನ್ನು ಭಾರತದ ಅಗ್ರಗಣ್ಯ ಹಾಗೂ ಆದರ್ಶ ರಾಜ್ಯವನ್ನಾಗಿ ಪರಿವರ್ತಿಸಬೇಕೆಂದೂ ಇದಕ್ಕೆ ಸರಿಯಾದ ವಾತಾವರಣವನ್ನು ನಿರ್ಮಿಸಬೇಕೆಂದರಲ್ಲದೆ ಕನ್ನಡದ ಮುಖ್ಯ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸಬೇಕೆಂದೂ ಕರೆ ನೀಡಿದರು.

ಸಮ್ಮೇಳನದ ಸಂಚಾಲಕ ಬಾ. ಸಾಮಗ ಅವರು ಕನ್ನಡಕ್ಕೆ ಇನ್ನೂ ಹೆಚ್ಚಿನ ಗೌರವ, ಮಾನ್ಯತೆ ದೊರಕಿಸಿ ಕನ್ನಡಿಗರಿಗೆ ಎಲ್ಲಾ ರಂಗಗಳಲ್ಲಿ ಲಭ್ಯವಾಗಬೇಕಾಗಿರುವ ನ್ಯಾಯ ಸಿಗುವಂತೆ ಮಾಡುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದ್ದು, ಇದಕ್ಕಾಗಿ ಕೇಂದ್ರ ಸರಕಾರ ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲಾ ಯೋಜನೆಗಳಿಗೆ ಕೂಡಲೇ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದರು.

'ದೆಹಲಿ ಕನ್ನಡಿಗ' ಸಮ್ಮೇಳನದ ಸಂಚಿಕೆ ಬಿಡುಗಡೆ ಮಾಡಿದ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಅಧ್ಯಕ್ಷ ಕೆ.ಆರ್. ಕಾಮತ್ ಅವರು ಹೊರನಾಡಿನಲ್ಲಿ 'ದೆಹಲಿ ಕನ್ನಡಿಗ' ಪತ್ರಿಕೆ ಕನ್ನಡದ ಪ್ರಗತಿಗಾಗಿ ನಿಷ್ಠೆಯಿಂದ ಕಾರ್ಯನಿರ್ವಹಿಸಿದೆ ಎಂದರಲ್ಲದೆ ದೆಹಲಿಯಲ್ಲಿ 29 ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಸಿರುವುದು ದೊಡ್ಡ ದಾಖಲೆ ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಲಕ್ನೋದ ಅಂಬೇಡ್ಕರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಹನುಮಯ್ಯ ಅವರು ಹೊರನಾಡ ಕನ್ನಡಿಗರು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಗಳಂತೆ ವರ್ತಿಸಿ ಭಾಷಾ ಬಾಂಧವ್ಯದಿಂದ ಕನ್ನಡವನ್ನು ಬೆಳೆಸಬೇಕೆಂದರಲ್ಲದೆ ಕರ್ನಾಟಕ ಸರಕಾರ ಹೊರನಾಡಲ್ಲಿ ಕನ್ನಡದ ಪ್ರಗತಿಗೆ ಸರಿಯಾದ ಯೋಜನೆ ಹಾಕಿಕೊಳ್ಳಬೇಕೆಂದರು.

ಸಮ್ಮೇಳನದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಅಧ್ಯಕ್ಷ ಕೆ.ಆರ್. ಕಾಮತ್ ಅವರಿಗೆ ಟಿ.ಎ. ಪೈ ಸ್ಮಾರಕ 'ಶ್ರೇಷ್ಠ ಬ್ಯಾಂಕರ್', ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಾಧೀಶ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರಿಗೆ 'ಶ್ರೇಷ್ಠ ಹೊರನಾಡ ಕನ್ನಡಿಗ', ಕಾರ್ಪೋರೇಶನ್ ಬ್ಯಾಂಕಿನ ಮಹಾಪ್ರಬಂಧಕರಾದ ಶ್ರೀಮತಿ ಎಸ್. ಎಂ. ಸ್ವಾತಿ ಅವರಿಗೆ 'ಶ್ರೇಷ್ಠ ದಿಲ್ಲಿ ಕನ್ನಡಿಗ', ಪ್ರಖ್ಯಾತ ಸಮಾಜ ಸೇವಕ ಎಸ್. ಪ್ರದೀಪ್ ಕುಮಾರ್ ಕಲ್ಕೂರ್ ಅವರಿಗೆ 'ಶ್ರೇಷ್ಠ ಸಾಮಾಜಿಕ ಕಾರ್ಯಕರ್ತ'– ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು ಹಾಗೂ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಕನ್ನಡಿಗರನ್ನು ಸನ್ಮಾನಿಸಲಾಯಿತು.

ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ಪ್ರಖ್ಯಾತ ಸಂಗೀತಗಾರ ಡಾ. ಕೆ. ವಾಗೀಶ್, ವಿಜಯಾ ಬ್ಯಾಂಕ್ ಉಪಮಹಾ ಪ್ರಬಂಧಕ ಕೆ.ಎಂ. ಶೇಖರ್, ದಿಲ್ಲಿ ವಿಶ್ವವಿದ್ಯಾಲಯದ ಮಾಜಿ ಹಿರಿಯ ಕನ್ನಡ ಪ್ರಾಧ್ಯಾಪಕಿ ಡಾ. ಕೆ. ವಿನೋದಾ ಬಾಯಿ, ಕವಯಿತ್ರಿ ಶ್ರೀಮತಿ ಡಾ. ಕೆ. ಸರಸ್ವತಿ ಚಿಮ್ಮಲಗಿ, ಲೇಖಕಿ ಶ್ರೀಮತಿ ವಿಜಯ ನಂದೀಶ್ವರ ಅವರು ಉದ್ಘಾಟಿಸಿದರು.



(ಚಿತ್ರದಲ್ಲಿ : ಡಾ. ಗೀತಾ ಬಾಲಿ ದೀಪ ಬೆಳಗಿಸಿ ಸಮ್ಮೇಳನ ಉದ್ಘಾಟಿಸುತ್ತಿರುವುದು ಬಾ. ಸಾಮಗ, ಡಾ. ಕೆ. ವಾಗೀಶ್, ಪ್ರೊ. ಬಿ. ಹನುಮಯ್ಯ, ಕೆ.ಆರ್. ಕಾಮತ್, ಎಸ್.ಎಂ. ಸ್ವಾತಿ, ಪ್ರದೀಪ್ ಕುಮಾರ್ ಕಲ್ಕೂರ್, ಕೆ.ಎಂ. ಶೇಖರ್)

# ವೈ. ಅವನೀಂದ್ರನಾಥ್ ರಾವ್ ಅವರಿಗೆ ಬಿ.ಎಂ. ಶ್ರೀ. ಪ್ರತಿಷ್ಠಾನದ ಪುರಸ್ಕಾರ



ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನವು ಹಿರಿಯ ಸಾಹಿತಿ ದಿ. ಸಮೇತನಹಳ್ಳಿ ರಾಮರಾಯರ ಕೃತಿಗಳ ವಿಮರ್ಶೆಗೆ ನೀಡುವ 'ರಾಸ ಸಾಹಿತ್ಯ ದತ್ತಿ ನಿಧಿ ಬಹುಮಾನ' ವನ್ನು ದೆಹಲಿಯ ಲೇಖಕ ವೈ. ಅವನೀಂದ್ರನಾಥ್ ರಾವ್ ಅವರಿಗೆ ನೀಡಿದೆ. ಅವನೀಂದ್ರನಾಥ್ ಬರೆದ ಸಮೇತನಹಳ್ಳಿಯವರ 'ಗಣೇಶ' ನಾಟಕದಲ್ಲಿ ಭಾರತೀಯ ಸಂಸ್ಕೃತಿಯ ಅನಾವರಣ ಎಂಬ ವಿಮರ್ಶಾ ಪ್ರಬಂಧಕ್ಕೆ ಈ ಪುರಸ್ಕಾರ ಲಭಿಸಿದೆ.

ದಿನಾಂಕ 18.04.2012ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಅವನೀಂದ್ರನಾಥ್ ಅವರು 2011ನೇ ಸಾಲಿನ ಪುರಸ್ಕಾರವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಹಾಗೂ ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರಿಂದ ಸ್ವೀಕರಿಸಿದರು. ಪ್ರೊ. ಕೃಷ್ಣಯ್ಯ ಮಾತನಾಡಿ 'ಶಾಸನ ಪ್ರಿಯರಾಗಿದ್ದ ರಾಮರಾಯರ ಕೃತಿಗಳ ಅಧ್ಯಯನ ವಿಮರ್ಶಕರಿಗೆ ಒಂದು ಸವಾಲು' ಎಂದು ತಿಳಿಸಿದರು.

ಆರಂಭದಲ್ಲಿ ಹಿರಿಯ ಕವಿ. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರಿಂದ ತೀ.ನಂ.ಶ್ರೀ. ದತ್ತಿ ಉಪನ್ಯಾಸ ನಡೆಯಿತು. ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಡಿ. ಲಿಂಗಯ್ಯ, ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸ ರಾವ್ ಹಾಗೂ ಸಾಹಿತಿ ಡಿ.ಎಸ್. ನಾಗಭೂಷಣ ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾದ ಅವನೀಂದ್ರನಾಥ್ ರಾವ್ ಅವರಿಗೆ ದೆಹಲಿಯ ಎಲ್ಲ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು. ಅವರ ಸಾಹಿತ್ಯ ಸೇವೆ ನಿರಂತರವಾಗಿ ಸಾಗಲಿ, ಮತ್ತಷ್ಟು ಪ್ರಶಸ್ತಿ, ಪುರಸ್ಕಾರಗಳು ಲಭಿಸಲಿ ಎಂದು ಹಾರೈಸುತ್ತೇವೆ.

### ಸಮೇತನಹಳ್ಳಿ ರಾಮರಾವ್

ಹಿರಿಯ ಸಾಹಿತಿ ಸಮೇತನಹಳ್ಳಿ ರಾಮರಾವ್ (1917–1999) ಬೆಂಗಳೂರು ಸಮೀಪದ ಸಮೇತನ ಹಳ್ಳಿಯಲ್ಲಿ ಜನಿಸಿದರು. ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ ವಿರಳ ಸಾಹಿತಿ. ಚಾರಿತ್ರಿಕ ಕಾದಂಬರಿ ಮತ್ತು ನಾಟಕಗಳಿಗೆ ಪ್ರಸಿದ್ಧರಾಗಿದ್ದರು. ಶಿಲ್ಪ ಸಂಗೀತ, ನಾಟ್ಯ ಮಂದಾರ, ಶ್ರೀಕೃಷ್ಣ ಮಾನಸ ಅವರ ಕೆಲವು ಪ್ರಮುಖ ಕೃತಿಗಳು. 'ಶಾಕುಂತಲಾ' ಮಹಾಕಾವ್ಯ. ಜಿ.ವಿ. ಅಯ್ಯರ್ ಅವರು ರಾಮರಾಯರ ನಾಟಕಗಳನ್ನು ಟಿ.ವಿ. ಧಾರಾವಾಹಿಯಾಗಿ ಪ್ರದರ್ಶಿಸಿದ್ದರು. ರಾಮರಾವ್ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಪ್ರಥಮ ಅಧ್ಯಕ್ಷರಾಗಿದ್ದರು.

# ಸಮೇತನಹಳ್ಳಿಯವರ 'ಗಣೇಶ' ನಾಟಕದಲ್ಲಿ ಭಾರತೀಯ ಸಂಸ್ಕೃತಿಯ ಅನಾವರಣ

ಭಾರತೀಯ ಸಂಸ್ಕೃತಿಯಲ್ಲಿ 'ಉಪಾಸನೆ' ಒಂದು ಪ್ರಮುಖ ಪದ್ಧತಿ. ಪರಂಪರೆಯಿಂದ ಇಲ್ಲಿ ಏಕದೇವೋಪಾಸನೆ, ಬಹುದೇವೋಪಾಸನೆ ಮತ್ತು ದೇವರನ್ನು ಆಕಾರವಿಲ್ಲದೆ ಪೂಜಿಸುವ ನಿರಾಕಾರ ಉಪಾಸನಾ ಕ್ರಮ ಸೇರಿದೆ. ಸಾಹಿತಿ ದಿ. ಸಮೇತನಹಳ್ಳಿ ರಾಮರಾಯರ 'ಗಣೇಶ' ರೇಡಿಯೋ ನಾಟಕ ಭಾರತೀಯ ಉಪಾಸನಾ ಸಂಸ್ಕೃತಿಯನ್ನು ವಿವರಿಸುತ್ತಾ, 'ಗಣೇಶ' ಭಾರತೀಯರಲ್ಲಿ ಭಾವೈಕ್ಯತೆಯನ್ನು ಮೂಡಿಸುವ ಏಕೈಕ ಅಧಿನಾಯಕನಾಗಿದ್ದಾನೆ ಎಂಬುದನ್ನು ವಿವಿಧ ಪ್ರಸಂಗಗಳ ಮೂಲಕ ಸುಂದರವಾಗಿ ಪ್ರಸ್ತುತಪಡಿಸಿದ್ದಾರೆ. ಈ ಮೂಲಕ ಈ ಶಬ್ದಚಿತ್ರ 'ಭಾರತೀಯತೆ'ಯನ್ನು ರಂಗ ಸಾಹಿತ್ಯದ ಮೂಲಕ ಉತ್ಕೃಷ್ಟವಾಗಿ ಅನಾವರಣಗೊಳಿಸಿದೆ.

ಭಾರತೀಯ ಜನಜೀವನದಲ್ಲಿ ಯಾವುದೇ ಶುಭಕಾರ್ಯವನ್ನು ಹಮ್ಮಿಕೊಂಡರೂ ಆರಂಭದಲ್ಲಿ ಗಣೇಶನನ್ನು ಸ್ತುತಿಮಾಡಬೇಕು ಎಂಬ ರೂಢಿಯಿದೆ. ಉಪಾಸನೆಯಲ್ಲಿ ಗಣೇಶನಿಗೆ ಈ ಹಿರಿತನ ಪ್ರಾಪ್ತವಾದ ಬಗೆಯನ್ನು ನಾಟಕ ಒಬ್ಬ ಜಿಜ್ಞಾಸು ಮತ್ತು ಸೀಮಂತಿನಿಯ ಪಾತ್ರಗಳ ಸಂಭಾಷಣೆಯ ಮೂಲಕ ಕುತೂಹಲ ಕೆರಳಿಸುತ್ತದೆ. ನಾಟಕದ ಒಳಗೆ ನಾಟಕವನ್ನು ಹೆಣೆದ ತಂತ್ರಗಾರಿಕೆ ಆಸಕ್ತಿ ಮೂಡಿಸುತ್ತದೆ.

ಭಾರತ ದೇಶ ಆಧ್ಯಾತ್ಮಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ. ಅದ್ವೈತ, ದ್ವೈತ, ವಿಶಿಷ್ಟಾದ್ವೈತ ತತ್ವಗಳಲ್ಲದೆ ವಿವಿಧ ತತ್ವ ಸಿದ್ಧಾಂತಗಳ ಕಾರಣದಿಂದ ಹುಟ್ಟಿಕೊಂಡ ಮತ ಹಾಗೂ ಧರ್ಮಗಳು ಅನೇಕ ಬೌದ್ಧಿಕ ಚರ್ಚೆ ಮತ್ತು ಸಂಘರ್ಷವನ್ನು ಉಂಟುಮಾಡಿದೆ. ಇದರಿಂದ ಮತ ಧರ್ಮಗಳ ಉಗಮ ಮಾತ್ರವಲ್ಲ, ಈ ಮತಗಳು ತಮ್ಮದೇ ಆದ ನಂಬಿಕೆ ಮತ್ತು ದೇವರುಗಳನ್ನು ಸೃಷ್ಟಿಸಿವೆ. ಈ ಹಿನ್ನೆಲೆಯಲ್ಲಿ ಸಮೇತನಹಳ್ಳಿಯವರ 'ಗಣೇಶ' ನಾಟಕ ವಿಶ್ವದ ಪ್ರಮುಖ ಧರ್ಮಗಳಾದ ಹಿಂದೂ, ಜೈನ ಮತ್ತು ಬೌದ್ಧ ಧರ್ಮದ ಅನುಯಾಯಿಗಳ ನಡುವೆ ದೇವತೆಯಾಗಿ ವಿನಾಯಕ ಸಾಮರಸ್ಯ ಮೂಡಿಸಿದ್ದನ್ನು ಅಪೂರ್ವವಾಗಿ ನಿರೂಪಿಸಿದೆ.

ಗಣೇಶನ ಆರಾಧನೆಯನ್ನು ಜಾನಪದ ಹಿನ್ನಲೆಯಲ್ಲಿ ಕಾಣುವ ನಾಟಕಕಾರರ ಚಿಂತನೆ ಗಮನಾರ್ಹ. ಜನಪದೀಯರ ಕಲ್ಪನೆಯಲ್ಲಿ ಗಣೇಶನ ಆರಾಧನಾಕ್ರಮ ರೂಢಿಯಲ್ಲಿ ಬಂದಿದೆ ಎಂಬ ಸಮೇತನಹಳ್ಳಿಯವರ ಚಿಂತನಾಕ್ರಮ ಹೊಸ ಬಗೆಯ ದೃಷ್ಟಿಕೋನವನ್ನು ಹರಿಸಿದೆ. ಭಾರತ ಮಾತ್ರವಲ್ಲ ಕಾಂಬೋಡಿಯಾ, ತುರ್ಕಿಸ್ತಾನ, ಚೀನಾ ಮತ್ತು ಜಪಾನ್ ದೇಶಗಳಲ್ಲಿ ವಿನಾಯಕನನ್ನು ಆರಾಧಿಸುವ ಪದ್ಧತಿಯನ್ನು ಇಲ್ಲಿ ವಿಚಾರಪೂರ್ಣವಾಗಿ ಮಂಡಿಸಲಾಗಿದೆ. ಆರ್ಯ ಸಂಸ್ಕೃತಿಯಲ್ಲಾಗಲೀ ಅಥವಾ ದ್ರಾವಿಡರಲ್ಲಾಗಲೀ ಗಣೇಶನ ಕಲ್ಪನೆ ಇರಲಿಲ್ಲ ಎಂಬುದು ವಿನೂತನ ವೈಚಾರಿಕ ಸಂವಾದಕ್ಕೆ ಅನುವು ಮಾಡಿಕೊಟ್ಟಿದೆ. ಅದರಂತೆ, ಭಾರತದ ಮೂಲನಿವಾಸಿಗಳು ಕೆಲವು ಅಪದೇವತೆಗಳನ್ನು ಪೂಜಿಸುತ್ತಿದ್ದರು ಹಾಗೂ ಅವರಲ್ಲಿ ವಿನಾಯಕ ಮುಖ್ಯನು ಎಂಬ ಸೀಮಂತಿನಿಯ ಹೇಳಿಕೆ ಈ ಕುರಿತು ಅನೇಕ ಒಳನೋಟಗಳನ್ನು ಹರಿಸುತ್ತದೆ. ಮಾನವನಿಗೆ ಸಂಕಷ್ಟಗಳು ಬರಬಾರದೆಂಬ ಒಂದು ಬಗೆಯ ಭಯ ಆತನಿಂದ ವಿಘ್ನಗಳನ್ನು ನಿವಾರಿಸಲು ಸಂಪ್ರೀತಗೊಳಿಸುವ ಕ್ರಮವಾಗಿ ಗಣನಾಥನ ಪೂಜೆ ರೂಢಿಗೆ ಬಂದಿದೆ ಎಂಬ ವಿಚಾರ ಜಾನಪದ ಸಂಸ್ಕೃತಿ ಮತ್ತು ಸಿದ್ಧಾಂತಗಳಿಗೆ ಹೊಸ ಆಯಾಮ ನೀಡುತ್ತದೆ. ಇಲ್ಲಿ ವೇದ, ಉಪನಿಷತ್ತುಗಳ ಪರಿಧಿಯಿಂದ ಹೊರಗೆ ಬರುವ ಗಣೇಶ ಜನಪದೀಯರ ನಂಬಿಕೆಯ ಆರಾಧ್ಯಮೂರ್ತಿಯಾಗಿ ಕಾಣಿಸಿಕೊಂಡು ಭಾವೈಕ್ಯತೆಯ ಹರಿಕಾರನಾಗಿ ಕಂಗೊಳಿಸಿದ್ದಾನೆ.

ನಾಟಕದಲ್ಲಿ ಜಿಜ್ಞಾಸು ಗಣಪತಿಯ ರೂಪದ ಬಗೆಗೆ ಪ್ರಸ್ತಾಪ ಮಾಡುತ್ತಾನೆ. ಪ್ರಮುಖವಾಗಿ ಗಣೇಶ ಎಂದೊಡನೆ ಆನೆಯ ಮುಖ ಮತ್ತು ದೊಡ್ಡ ಹೊಟ್ಟೆ ಕಣ್ಣ ಮುಂದೆ ಬರುತ್ತದೆ. ಮುಂದುವರಿಸಿ ಸೀಮಂತಿನಿಯು ಗಣೇಶನ ಜನನದ ಬಗೆಗೆ ಹೇಳಲು ಎರಡು ಪ್ರಮುಖ ಕಥೆಗಳನ್ನು ಉಲ್ಲೇಖಿಸುತ್ತಾಳೆ. ಇದು ನಾಟಕದಲ್ಲಿ ಎರಡು ಕಿರು ಪ್ರಹಸನಗಳಾಗಿ ಪ್ರಸ್ತುತಗೊಳ್ಳುವ ಬಗೆ ಅತ್ಯಂತ ಮನೋಜ್ಞವಾಗಿ ಅನಾವರಣಗೊಂಡಿದೆ. ಆಕೆ ಕಥೆಯಾಗಿ ಹೇಳುವುದು ದೃಶ್ಯದ ಮೂಲಕ ರಂಗದಲ್ಲಿ

ಪ್ರದರ್ಶನಗೊಂಡರೆ ಅದು ಸುಂದರವಾಗಿ ಮತ್ತು ಸ್ಪಷ್ಟವಾಗಿ ಸಂವಹನಗೊಳ್ಳಬಲ್ಲದು. ಇಲ್ಲಿ ಗಣೇಶನ ಜನನದ ವಿವರಗಳು ವರಾಹ ಪುರಾಣ ಮತ್ತು ಶಿವಪುರಾಣದ ರುದ್ರ ಸಂಹಿತೆಯ ಕುಮಾರಖಂಡಗಳಿಂದ ಉಲ್ಲೇಖಗೊಳ್ಳುತ್ತದೆ. ಶಿವಪುರಾಣದ ಕಥೆಯು ಜನಜನಿತವಾಗಿದ್ದರೂ ಸಮೇತನ ಹಳ್ಳಿಯವರು ಪ್ರಸ್ತುತಪಡಿಸಿದ ವರಾಹಪುರಾಣ ವಿನೂತನ ಅನುಭವವನ್ನು ನೀಡಿದೆ.

ಪಾರ್ವತಿಯು ಸ್ನಾನ ಮಾಡಲು ತೆರಳುವ ಮುನ್ನ ತನ್ನ ಮೈಬೆವರಿನಿಂದ ಮೂರ್ತಿಯನ್ನು ಮಾಡಿ ಜೀವ ತುಂಬಿ ಕಾವಲಿಗೆ ಇರಿಸುವ ಗಣೇಶ ಮತ್ತು ಪ್ರವೇಶ ಬಯಸಿದ ಶಂಕರನನ್ನು ತಡೆದ ಗಣೇಶನ ಶಿರಛೇದನದ ಕತೆ ತುಂಬಾ ಜನಪ್ರಿಯವಾಗಿದೆ. ಪಾರ್ವತಿಯನ್ನು ಸಮಾಧಾನಪಡಿಸಲು ಆನೆಯ ತಲೆಯನ್ನು ಜೋಡಿಸುವುದು ಪ್ರಚಲಿತ ಕತೆಯಾಗಿದೆ. ಇಲ್ಲಿ ನಾಟಕಕಾರರು ಜಿಜ್ಞಾಸುವಿನ ಮೂಲಕ ಗಣೇಶನ ಅಂಗಾಂಗ ರಚನೆಯ ಕುರಿತು ಹೇಳುವ ಅರ್ಥಗಳು ಗಮನಾರ್ಹ. ಗಣೇಶನ ದೊಡ್ಡ ಹೊಟ್ಟೆಯನ್ನು ಅನೇಕ ಬ್ರಹ್ಮಾಂಡಗಳ ಸಂಕೇತವಾಗಿ, ಏಕದಂತವನ್ನು ಅದ್ವೈತವಾಗಿ ಮತ್ತು ಮೋದಕ ಪ್ರಿಯತೆಯನ್ನು ಬ್ರಹ್ಮಾನಂದವಾಗಿ ನೋಡುವ ದೃಷ್ಟಿಕೋನ, ಭಾರತೀಯ ತತ್ವಗಳು ವಿಶಾಲವಾಗಿ ರೂಪುಗೊಳ್ಳುವ ಬಗೆಗೆ ನಿದರ್ಶನವಾಗಿದೆ.

ವರಾಹ ಪುರಾಣದಲ್ಲಿ ಸಮಾಜ ಘಾತುಕ ವ್ಯಕ್ತಿಗಳಿಂದ ಹಿಂಸೆಗೊಳಗಾದ ಇಂದ್ರನು ಭೂತೇಶನಾದ ಶಂಕರ ಮತ್ತು ಉಮೆಯರಲ್ಲಿ ಪರಿಹಾರಕ್ಕಾಗಿ ಪ್ರಾರ್ಥಿಸುತ್ತಾನೆ. ಶಂಕರ ಮತ್ತು ಉಮೆಯರ ದೃಷ್ಟಿ ಸಮ್ಮಿಲನದಿಂದ ಸದ್ಯೋಜಾತನಾಗಿ ಗಣೇಶ ಜನಿಸುತ್ತಾನೆ. ಮೊದಲು ದೇವತೆಗಳ ವಿಘ್ನ ನಿವಾರಣೆಗೆ ದೇವಲೋಕ ಪ್ರವೇಶಿಸಿದ ಗಣೇಶನ ಅಪ್ರತಿಮ ಸೌಂದರ್ಯ ಅಲ್ಲಿನ ಸುಂದರಿಯರ ಚಿತ್ತಗಳನ್ನು ಚಂಚಲಗೊಳಿಸುತ್ತದೆ. ದೇವ ಮಹಿಳೆಯರ ಸತೀತ್ವಕ್ಕೆ ಭಂಗ ಬರುವುದನ್ನು ಅರಿತ ಉಮೆಯಿಂದ ಗಣೇಶ ವಕ್ರರೂಪ ಶಾಪಕ್ಕೆ ಈಡಾಗುತ್ತಾನೆ. ಪರಿಣಾಮವೇ ಲಂಬೋದರ, ಗಜಮುಖ ಗಣೇಶನ ರೂಪ. ಶಿವನ ಸುಂದರ ಸೃಷ್ಟಿಯನ್ನು ಅಲ್ಲಗಳೆದ ಕಾರಣದಿಂದ ಶಿವನಿಂದ ತಾಂಡವ ನೃತ್ಯ. ಬೆದರಿಂದ ಉಮೆ ಮತ್ತು ದೇವತೆಗಳಿಗೆ ಶಿವನ ಅಭಯ. ಗಣೇಶ ಇನ್ನು ಮುಂದೆ ಸರ್ವರಿಂದ ಪ್ರಥಮ ಪೂಜೆಗೆ ಅರ್ಹನಾಗುತ್ತಾನೆ ಹಾಗೂ ಆತ ವಿಘ್ನ ವಿನಾಶಕ ಎಂಬುದಾಗಿ ಶಿವ ಭರವಸೆ ನೀಡುತ್ತಾನೆ. ಈ ಕತೆಯನ್ನು ಸಮೇತನಹಳ್ಳಿ ರಾಮರಾಯರು ನಾಟಕದಲ್ಲಿ ತರುವ ಮೂಲಕ ಗಣೇಶ ಹೇಗೆ ವಿಶ್ವಕ್ಕೆ ಅಧಿಪತಿಯಾಗುತ್ತಾನೆ ಎಂಬುದನ್ನು ಆಸಕ್ತಿಪೂರ್ಣವಾಗಿ ನೀಡಿದ್ದಾರೆ.

'ಗಣೇಶ' ನಾಟಕದಲ್ಲಿ ವಿನಾಯಕನ ಇನ್ನೆರಡು ಶ್ರೇಷ್ಠ ಲಕ್ಷಣಗಳಾದ ಜ್ಞಾನ ಮತ್ತು ಬುದ್ಧಿಗಳನ್ನು ಅವನ ಮದುವೆಯ ಪ್ರಸಂಗ ಹಾಗೂ 'ಮಹಾಭಾರತ' ಕಾವ್ಯದ ಸೃಷ್ಟಿಯ ಮೂಲಕ ರಸವತ್ತಾಗಿ ನೀಡಲಾಗಿದೆ. ಗಣೇಶ ಮತ್ತು ಸುಬ್ರಹ್ಮಣ್ಯರಲ್ಲಿ ಯಾರಿಗೆ ಮೊದಲು ಮದುವೆ ಎಂಬ ಪ್ರಶ್ನೆಗೆ ಶಿವ ಪಾರ್ವತಿಯರು ಒಂದು ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಯಾರು ಮೊದಲು ಭೂ ಪ್ರದಕ್ಷಿಣೆಯನ್ನು ಮಾಡುತ್ತಾರೋ ಅವರಿಗೆ ಮೊದಲು ವಿವಾಹ. ಈ ಪಂಥವನ್ನು ಸ್ವೀಕರಿಸಿ ಒಡನೆಯೇ ಸುಬ್ರಹ್ಮಣ್ಯ ಪರ್ಯಟನೆಗೆ ತೊಡಗಿದರೆ, ಗಣೇಶ ತಂದೆ–ತಾಯಿಯರಿಗೆ ಏಳು ಬಾರಿ ಪ್ರದಕ್ಷಿಸುತ್ತಾ ತನ್ನ ಬುದ್ಧಿವಂತಿಕೆ ಪ್ರದರ್ಶಿಸುತ್ತಾನೆ. ಭಾರತೀಯ ಸಂಸ್ಕೃತಿಯಲ್ಲಿ ಹೆತ್ತವರನ್ನು ದೇವರಾಗಿ ಕಾಣುವ ಮತ್ತು ಭೂಮಿಗಿಂತಲೂ ಶ್ರೇಷ್ಠವಾಗಿ ನೋಡುವ ಬಗೆಯನ್ನು ಸಮೇತನಹಳ್ಳಿಯವರು ಕಿರು ಪ್ರಹಸನವನ್ನು ತರುವ ಮೂಲಕ ಚಿತ್ರಿಸಿದ್ದಾರೆ. ಈ ಮೂಲಕ ಸಿದ್ಧಿ ಬುದ್ಧಿ ಎಂಬ ಸುಂದರಿಯರನ್ನು ವಿವಾಹವಾಗುವ ಗಣೇಶನ ಕತೆ ಸ್ವಾರಸ್ಯವಾಗಿದೆ.

ಭಾರತೀಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಸಾಹಿತ್ಯ ಅದರಲ್ಲೂ ಕಾವ್ಯದ ರಚನೆ ಇಲ್ಲಿನ ಜನರ ವೈವಿಧ್ಯಮಯ ಭಾವಗಳಿಗೆ ಸಮಾಧಾನ ತರುವ ಪ್ರಕ್ರಿಯೆಯಾಗಿದೆ. ಇದನ್ನು ಗಣೇಶ ಸ್ವತಃ ಆ ಭಾವಗಳನ್ನು ತನ್ನಲ್ಲಿ ತಂದುಕೊಂಡು ಬರವಣಿಗೆಯ ಮೂಲಕ ಹರಿಸುತ್ತಾನೆ ಎಂಬುದನ್ನು 'ಮಹಾಭಾರತ' ಮಹಾಕಾವ್ಯದ ರಚನೆಯ ಹಿನ್ನಲೆಯಲ್ಲಿ ನಾಟಕದಲ್ಲಿ ಸಮಯೋಚಿತವಾಗಿ ಬಿಂಬಿಸಲಾಗಿದೆ. ಮಾನವನ ವಿವಿಧ ಭಾವೋನ್ಮಾದಗಳು ಪ್ರಕಟಗೊಳ್ಳುವ ಭಾರತೀಯ ಸಾಹಿತ್ಯದ ಉತ್ಕೃಷ್ಟ ಗ್ರಂಥವಾದ 'ಮಹಾಭಾರತ'ವು ವ್ಯಾಸರಿಂದ ಹೇಳಲ್ಪಟ್ಟು ಗಣೇಶನ ಗ್ರಹಿಕೆಯ ಮೂಲಕ ಪರಿಷ್ಕರಣೆಗೊಂಡು ಬರಹವಾಗಿ ಹರಿದು ಬರುತ್ತದೆ ಎನ್ನುವ ಸೂಕ್ಷ್ಮಗಳು ಇಲ್ಲಿವೆ. ಇದು ಭಾರತೀಯ ಸಂಸ್ಕೃತಿಯಲ್ಲಿ ಮತ್ತು ಸಾಮಾನ್ಯ ಜನರ ಜೀವನ ವಿಧಾನಗಳಲ್ಲಿ ಸಾಹಿತ್ಯ ಬೀರಿರುವ ಪ್ರಭಾವವನ್ನು ತಿಳಿಸುತ್ತದೆ.

ಸಮೇತನಹಳ್ಳಿ ರಾಮರಾಯರ 'ಗಣೇಶ' ನಾಟಕದಲ್ಲಿ ಈ ರೀತಿ ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಉಪಾಸನಾ ಪದ್ಧತಿ ಮತ್ತು ಆಧ್ಯಾತ್ಮದ ಹೊಳಹುಗಳು ಮನೋಜ್ಞವಾಗಿ ಅನಾವರಣಗೊಂಡಿದೆ. ಇಲ್ಲಿ ಬರುವ ವರಾಹಪುರಾಣದ ಕತೆ ಭಾರತೀಯ ತತ್ವಗಳಲ್ಲಿ ಪ್ರಮುಖವಾದ 'ಸತ್ಯ'ವನ್ನು ಶಿವಪುರಾಣದ ಕತೆ 'ಸೌಂದರ್ಯ'ವನ್ನು ಹಾಗೂ 'ಮದುವೆ' ಮತ್ತು 'ಮಹಾಭಾರತ' ಪೌರಾಣಿಕ ಸನ್ನಿವೇಶಗಳು 'ಜ್ಞಾನ'ದ ನೆಲೆಗಳನ್ನು ನಾಟಕದ ಮೂಲಕ ಪ್ರತಿಬಿಂಬಿಸಿವೆ. ಈ ಕಾರಣದಿಂದ ಸಮೇತನಹಳ್ಳಿಯವರ 'ಗಣೇಶ' ನಾಟಕ ವಿಶಿಷ್ಟವೆನಿಸುತ್ತದೆ.

❑ **ವೈ. ಅವನೀಂದ್ರನಾಥ ರಾವ್**

# ಕನ್ನಡ ಬಳಗ ರಾಜೇಂದ್ರ ನಗರದ ನೂತನ ಕಾರ್ಯಕಾರಿ ಸಮಿತಿ

ಕನ್ನಡ ಬಳಗ ರಾಜೇಂದ್ರನಗರದ ಸದಸ್ಯರು 15 ಏಪ್ರಿಲ್ 2012ರಂದು ಹಳೆ ರಾಜೇಂದ್ರನಗರದ ಸಿಂಧಿ ಪಾರ್ಕ್‌ನಲ್ಲಿ ಸಭೆ ಸೇರಿ ಮುಂದಿನ ವರ್ಷದ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಿದರು. ಪದಾಧಿಕಾರಿಗಳ ವಿವರ ಈ ಕೆಳಗಿನಂತಿದೆ.

ಅಧ್ಯಕ್ಷರು–ಅಶ್ವತ್ಥ ನಾರಾಯಣ ಶೆಟ್ಟಿ, ಕಾರ್ಯದರ್ಶಿ–ರವೀಂದ್ರನಾಥ್, ಖಜಾಂಚಿ–ರಾಘವೇಂದ್ರ ರಾವ್, ಉಪಾಧ್ಯಕ್ಷರು–ಉಮೇಶ್ ಭಟ್ ಮತ್ತು ಶ್ರೀಮತಿ ಕುಸುಮ



ಸದಸ್ಯರುಗಳಾಗಿ : ನಾರಾಯಣ ಭಟ್, ಈಶ್ವರ ಬಸವರೆಡ್ಡಿ, ಮಂಜುನಾಥ ನಾಯಕ್ ಮತ್ತು ಶೈಲಜಾ ಪ್ರಕಾಶ್ ಇವರನ್ನು ಆಯ್ಕೆ ಮಾಡಲಾಯಿತು.

ಹಿಂದಿನ ಅಧ್ಯಕ್ಷರಾಗಿದ್ದ ಮಹಾಲಿಂಗೇಶ್ವರ್ ಇವರಿಗೆ ಮಂಗಳೂರಿಗೆ ವರ್ಗಾವಣೆ, ಕಾರ್ಯದರ್ಶಿ ಗೋಪಾಲಕೃಷ್ಣ ಅವರಿಗೆ ಹುಬ್ಬಳ್ಳಿಗೆ ವರ್ಗಾವಣೆ ಮತ್ತು ಉಪಾಧ್ಯಕ್ಷೆಯಾಗಿದ್ದ ಶ್ರೀಮತಿ ಶಾರದಾ ಅವರಿಗೆ ಉದ್ಯೋಗದಿಂದ ನಿವೃತ್ತಿಯಾದದ್ದರಿಂದ ಬೀಳ್ಕೊಡುಗೆ ಸಮಾರಂಭವನ್ನು ನಡೆಸಲಾಯಿತು. ಮೂವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ರವೀಂದ್ರನಾಥ್, ಈಶ್ವರ ಬಸವರೆಡ್ಡಿ ಮತ್ತು ಅಶ್ವತ್ಥ ನಾರಾಯಣ ಶೆಟ್ಟಿಯವರು ಸಂದರ್ಭೋಚಿತವಾಗಿ ಮಾತನಾಡಿದರು. ಬೀಳ್ಕೊಡಲ್ಪಟ್ಟ ಮೂವರು ಬಳಗದ ಸದಸ್ಯರೊಂದಿಗಿನ ತಮ್ಮ ಅನುಭವವನ್ನು ನೆನಪಿಸಿ ಮಾತನಾಡಿದರು.

ನೂತನ ಕಾರ್ಯದರ್ಶಿ ರವೀಂದ್ರನಾಥರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

❑ **ಗೋಪಾಲಕೃಷ್ಣ ಭಟ್**

# ಕರ್ನಾಟಕದಲ್ಲಿ ಬುದ್ಧನ ಹೆಜ್ಜೆಗಳು

ಬೋಧಿಯ ಬೆಳಕು ಇಂದು ಜಗತ್ತಿನೆಲ್ಲೆಡೆ ತುಂಬಿದೆ. ಬಹಳ ಹಿಂದೆಯೇ ಕರ್ನಾಟಕವೂ ಬೌದ್ಧಧರ್ಮಕ್ಕೆ ನೆಲೆಯನ್ನು ಒದಗಿಸಿತ್ತು. ಕರ್ನಾಟಕದ ಎರಡು ಬೌದ್ಧ ಕೇಂದ್ರಗಳನ್ನು ಕುರಿತ ಕಿರುಪರಿಚಯ ಇಲ್ಲಿದೆ. ....

## ಬೆಂಗಳೂರಿನ ಬಳಿಯಲ್ಲೇ ಬೌದ್ಧ ನೆಲೆ

ಸುಮಾರು 1400 ವರ್ಷಗಳಷ್ಟು ಪ್ರಾಚೀನವಾದ ಬೌದ್ಧಚೈತ್ಯ ಹಾಗೂ ವಿಹಾರಗಳ ಅವಶೇಷಗಳು ಬೆಂಗಳೂರಿಗೆ ಕೆಲವೇ ಕಿಲೋಮೀಟರ್‌ಗಳ ಹತ್ತಿರದಲ್ಲಿ ದೊರೆತಿವೆ ಎಂದರೆ ನೀವು ನಂಬುತ್ತೀರಾ? ದೊಡ್ಡಬಳ್ಳಾಪುರದಿಂದ ನಂದಿಗೆ ಹೋಗುವ ದಾರಿಯಲ್ಲಿರುವ ರಾಜಘಟ್ಟ ಎಂಬ ಪುಟ್ಟ ಹಳ್ಳಿಯೇ ಆ ಅಪರೂಪದ ನೆಲೆ. ರಾಜಘಟ್ಟವು ಒಂದು ಪ್ರಾಚೀನ ಐತಿಹಾಸಿಕ ನೆಲೆ. ಕ್ರಿ.ಪೂ. 5–4ನೇ ಶತಮಾನದಷ್ಟು ಹಿಂದಿನಿಂದಲೂ ಇಲ್ಲಿ ಜನವಸತಿ ಇತ್ತೆಂದು ಇಲ್ಲಿಯ ಬೃಹತ್ ಶಿಲಾಯುಗದ ಅವಶೇಷಗಳು ಸಾರಿ ಹೇಳುತ್ತವೆ. ಸಾಸಲು ವಿಶ್ವನಾಥ್, ಮೈಸೂರು ನಾಗರಾಜ ಶರ್ಮ ಮುಂತಾದ ವಿದ್ವಾಂಸರ ಅನ್ವೇಷಣೆಗಳಿಂದ ಇಲ್ಲಿ ಇನ್ನಷ್ಟು ಅಪರೂಪದ ಪ್ರಾಚ್ಯವಶೇಷಗಳು ದೊರೆಯಬಹುದೆಂಬ ಸೂಚನೆ ದೊರೆತಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ವಿಭಾಗದ ವಿದ್ವಾಂಸರು 2001 ಹಾಗೂ 2004ರಲ್ಲಿ ಡಾ. ಎಂ.ಎಸ್. ಕೃಷ್ಣಮೂರ್ತಿಯವರ ಮಾರ್ಗದರ್ಶನದಲ್ಲಿ ನಡೆಸಿದ ಉತ್ಖನನಗಳು ದಕ್ಷಿಣ ಭಾರತದ ಇತಿಹಾಸದ ಪುಟಗಳನ್ನೇ ಬದಲಿಸುವಂತಹ ಮಾಹಿತಿಯನ್ನು ಹೊರಹಾಕಿವೆ.

ದಕ್ಷಿಣ ಭಾರತದ ಬೌದ್ಧಧರ್ಮದ ಇತಿಹಾಸಕ್ಕೆ ಕರ್ನಾಟಕದ ಕೊಡುಗೆ ಗಣನೀಯವಲ್ಲ ಎಂಬ ಅಭಿಪ್ರಾಯವನ್ನು ಹಿಂದೆ ವಿದ್ವಾಂಸರು ಹೊಂದಿದ್ದರು. ಅಶೋಕನ ಶಾಸನಗಳು ದಕ್ಷಿಣದ ಎಲ್ಲ ರಾಜ್ಯಗಳಿಗಿಂತಲೂ ಸಂಖ್ಯೆಯಲ್ಲಿ ಹೆಚ್ಚಾಗಿ



ಹರಕೆಯ ಸ್ತೂಪಗಳು

ಕರ್ನಾಟಕದಲ್ಲಿಯೇ ದೊರೆತಿದ್ದರೂ ಬೌದ್ಧಧರ್ಮದ ಕುರುಹುಗಳು ನಮ್ಮ ನಾಡಿನಲ್ಲಿ, ಅದರಲ್ಲೂ ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ದೊರಕಿರಲಿಲ್ಲ. ಹಾಗಾಗಿ ನಿಜವಾಗಿಯೂ ಈ ಪ್ರಾಂತ್ಯದಲ್ಲಿ ಬೌದ್ಧಧರ್ಮವು ಪ್ರಸ್ಥಾಪಿಸಿತ್ತೇ–ಎಂಬ ಅನುಮಾನ ವಿದ್ವಾಂಸರಲ್ಲಿ ಮೂಡಿತ್ತು. ಆದರೆ ರಾಜಘಟ್ಟದಲ್ಲಿ ನಡೆದ ಈ ಉತ್ಖನನಗಳು ಈ ಸಂದೇಹಗಳಿಗೆ ಸೂಕ್ತ ಉತ್ತರವನ್ನು ನೀಡಿವೆ.

ಪ್ರಸ್ತುತ ಶೋಧನೆಯಲ್ಲಿ ವಿದ್ವಾಂಸರು ಕ್ರಿ.ಶ. 4ರಿಂದ 6ನೇ ಶತಮಾನಗಳಷ್ಟು ಹಳೆಯದಾದ, ಬಹುಶಃ ಮಹಾಯಾನಪಂಥಕ್ಕೆ ಸೇರಿದ ಚೈತ್ಯಾಲಯ ಸಂಕೀರ್ಣ ಒಂದರ ಅಡಿಪಾಯವನ್ನು ಶೋಧಿಸಿದ್ದಾರೆ. 28 ಫ 35 ಚದರ ಮೀಟರ್‌ಗಳಷ್ಟು ವಿಸ್ತಾರವಾದ, ಗಜಪೃಷ್ಠಾಕಾರದ ಈ ಕಟ್ಟಡದಷ್ಟು ದೊಡ್ಡ ಚೈತ್ಯಾಲಯ ಇಡೀಡಿಯಾ ದಕ್ಷಿಣ ಭಾರತದಲ್ಲಿಯೇ ಮತ್ತೆಲ್ಲೂ ನೋಡಸಿಗುವುದು ಅಪರೂಪ. ಪ್ರದಕ್ಷಿಣಾಪಥ, ದೇವಕೋಷ್ಠಗಳು, ಜಾಲಂಧ್ರಗಳು, ವಿಹಾರ ಕೊಠಡಿಗಳು, ಸುಂದರವಾದ ಗಾರೆಯ ರಚನೆಗಳು ಮುಂತಾದ ಎಲ್ಲ ಅಂಶಗಳನ್ನು ಹೊಂದಿರುವ ಈ ವಾಸ್ತುರಚನೆ ಅತ್ಯಂತ ಅಪರೂಪವಾದದ್ದು. ಇದೇ ಸ್ಥಳದಲ್ಲಿ ಪಗಡೆಯ ಕಾಯಿಯ ಆಕಾರದ ನೂರಾರು ಪುಟ್ಟ ಹರಕೆಯ ಸ್ತೂಪಗಳು ದೊರೆತಿವೆ. ಇವು ಪ್ರತಿಯೊಂದರಲ್ಲೂ ಬ್ರಾಹ್ಮೀಲಿಪಿಯಲ್ಲಿ ಬರೆದ ಶಾಸನವನ್ನು ಹೊಂದಿದ ಮಣ್ಣಿನ ಜಿಲ್ಲೆಗಳಿವೆ. ಅಷ್ಟೇ ಅಲ್ಲದೆ ಧ್ಯಾನಮುದ್ರೆಯಲ್ಲಿ ಕುಳಿತ ಅಮಿತಾಭಬುದ್ಧನ ಮಣ್ಣಿನ ಪದಕವೂ ದೊರೆತಿದೆ.

ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅತಿ ಸಮೀಪದಲ್ಲಿರುವ ಇಂತಹ ಸಾಂಸ್ಕೃತಿಕ ಕೇಂದ್ರವನ್ನು 000000ರಾಷ್ಟ್ರೀಯ ಸ್ಮಾರಕವಾಗಿ ರಕ್ಷಿಸಬೇಕಾದ ಕೆಲಸ ತುರ್ತಾಗಿ ಆಗಬೇಕಿದೆ.

## ಬೋಧಿಯ ಬೆಳಕಲ್ಲಿ ಮಿಂದ ಸನ್ನತಿ

ಚಕ್ರವರ್ತಿ ಅಶೋಕನ ಹೆಸರನ್ನು ಕೇಳದವರಾರು! ಆದರೆ ಆತ ನೋಡಲು ಹೇಗಿದ್ದ? ಅವನ ಭಾವಶಿಲ್ಪವೇನಾದರೂ ಇದೆಯೇ? ಅಕಸ್ಮಾತ್ ಇದ್ದಲ್ಲಿ ಅದು ಅವನದೇ ಎನ್ನುವುದಕ್ಕೆ ಸಾಕ್ಷಿಯೇನು? ಎಂಬೆಲ್ಲ ಪ್ರಶ್ನೆಗಳು ನಿಮ್ಮನ್ನು ಕಾಡುತ್ತಿದ್ದರೆ ನೀವೊಮ್ಮೆ ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿರುವ ಸನ್ನತಿಗೆ ಬರಬೇಕು. ಇಲ್ಲಿ ಇಡಿಯ ಭಾರತದಲ್ಲಿಯೇ ಅಪೂರ್ವವೆನಿಸುವ, ಸುಮಾರು ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಅಶೋಕನ ಹೆಸರನ್ನು ಹೊತ್ತ ಭಾವಶಿಲ್ಪ, 350ಕ್ಕೂ ಹೆಚ್ಚು ಶಾಸನಗಳು, ಅತ್ಯಂತ ಕಲಾತ್ಮಕವಾದ ಮಹಾಸ್ತೂಪಸಮುಚ್ಚಯ ಮುಂತಾದವುಗಳನ್ನು ತನ್ನ ಒಡಲಿನಲ್ಲಿ ಇರಿಸಿಕೊಂಡಿರುವ ಸನ್ನತಿ ನಮ್ಮನ್ನು ಗತಕಾಲಕ್ಕೆ ಕೊಂಡೊಯ್ಯುತ್ತದೆ.



ಸನ್ನತಿಯ ಪ್ರಸಿದ್ಧವಾದ ಚಂದ್ರಲಾ ಪರಮೇಶ್ವರಿ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿರುವ ಕನಗನಹಳ್ಳಿಯಲ್ಲಿ, ಭೀಮಾನದಿಯ ದಂಡೆಯ ಮೇಲೆ ಮಹಾಸ್ತೂಪವಶೇಷವು ಹರಡಿ ನಿಂತಿದೆ. ಸುಮಾರು 30 ಫ30 ಮೀಟರ್ ವಿಸ್ತೀರ್ಣದ 18 ಮೀಟರ್ ಎತ್ತರವಿದ್ದಿರಬಹುದಾದ ಈ ಗಜವೃಷ್ಠಾಕಾರದ ಸ್ತೂಪವು ಧರ್ಮಸ್ತಂಭಗಳ ವೇದಿಕೆ, ಕಲಾಂಜನ, ಪ್ರದಕ್ಷಿಣಾಪಥ ಮುಂತಾದವುಗಳನ್ನು ಒಳಗೊಂಡಿದೆ. ಕುಳಿತ ಮತ್ತು ನಿಂತಭಂಗಿಯಲ್ಲಿರುವ ಬುದ್ಧಶಿಲ್ಪಗಳು, ಬುದ್ಧಪಾದ, ಧರ್ಮಚಕ್ರ ಮುಂತಾದ ಅಪರೂಪದ ಕಲಾಕೃತಿಗಳ ಆಗರವಾಗಿರುವ ಈ ಸ್ತೂಪವು ಕ್ರಿ.ಪೂ. 1ನೇ ಶತಮಾನದಿಂದ ಕ್ರಿ.ಶ. 1ನೇ ಶತಮಾನದ ಅವಧಿಯಲ್ಲಿ, ಶತವಾಹನರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವಂತಹುದೇ ಒಂದು ಸುಂದರವಾದ ಒಂಬತ್ತು ಹೆಡೆಗಳ ನಾಗರಾಜ ಮುಚಲಿಂದ ಶಿಲ್ಪವೂ ಇಲ್ಲಿದೆ. ಸಾಂಚಿಯ ಸ್ತೂಪದಲ್ಲಿ ಅಶೋಕನ ಶಾಸನ ರಹಿತವಾದ ಶಿಲ್ಪಗಳಿದ್ದರೆ ಇಲ್ಲಿ ಕೇವಲ ಆತ ಮಾತ್ರವಲ್ಲದೆ ಶಾತವಾಹನ ರಾಜರಾದ ಸಿಮುಕ, ಪುಳುಮಾವಿ, ಸಾತಕರ್ಣಿ ಮುಂತಾದವರ ಶಿಲ್ಪಗಳೂ ಹೆಸರಿನ ಉಲ್ಲೇಖದೊಂದಿಗೆ ಲಭಿಸಿವೆ.

ಹೀನಾಯಾನ ಮತ್ತು ಮಹಾಯಾನಗಳೆರಡರ ಅಂಶಗಳನ್ನೂ ತನ್ನಲ್ಲಿ ಒಳಗೊಂಡಿರುವುದು ಈ ಸ್ತೂಪದ ವಿಶೇಷ. ಅದರಲ್ಲಿಯೂ ಪ್ರದಕ್ಷಿಣಾಪಥದ ಹಾಸುಗಲ್ಲುಗಳ ಮೇಲೆ ಎಂಟು ದಿಕ್ಕುಗಳಿಗೆ ಒಂದೊಂದರಂತೆ ಎಂಟು 'ಅಷ್ಟಮಾನುಷಿ' ಬುದ್ಧಶಿಲ್ಪಗಳನ್ನು ಪ್ರತಿಷ್ಠಾಪಿಸುವ ಮಹಾಯಾನಪಂಥದ ಸಂಪ್ರದಾಯ ಇಲ್ಲಿಂದಲೇ ಆರಂಭವಾಗಿರಬೇಕೆಂದು ಊಹೆಯಿದೆ.

ಬೋಧಿಯ ಬೆಳಕು ಕನ್ನಡಿಗರನ್ನೂ ಬಹುಕಾಲ ಬೆಳಗಿತ್ತು ಎನ್ನುವುದಕ್ಕೆ ಸನ್ನತಿಗಿಂತ ಬೇರೆ ಸ್ಮಾರಕ ಬೇಕೆ ?

❑ ಎಸ್.ಎಲ್. ಶ್ರೀನಿವಾಸಮೂರ್ತಿ
ಕೃಪೆ : ವಿಜಯವಾಣಿ

# ಶ್ರೇಷ್ಠ ಸಮಾಜ ಸುಧಾರಕ–ಬಸವಣ್ಣನವರ ಜಯಂತಿ ಆಚರಣೆ



ಏಪ್ರಿಲ್ 29, 2012ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಕ್ಷಯ ತೃತೀಯದಂದು ಜನಿಸಿದ ವಿಶ್ವಮಾನ್ಯ 'ಮಹಾನ್ ಮಾನವತಾವಾದಿ' ಶ್ರೀ ಬಸವೇಶ್ವರರ 879ನೆಯ ಜನ್ಮ ದಿನಾಚರಣೆಯನ್ನು ದೆಹಲಿ ಕರ್ನಾಟಕ ಸಂಘ ಹಾಗೂ ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಸಹಯೋಗದೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು. ಮಧ್ಯಾಹ್ನ 2.30ಗಂಟೆಗೆ 'ಜಗಜ್ಯೋತಿ ಬಸವೇಶ್ವರ' ಎಂಬ ಚಲನಚಿತ್ರ ಪ್ರದರ್ಶನಗೊಂಡಿತು. ಸಾಯಂಕಾಲ ಖ್ಯಾತ ಹಿಂದೂಸ್ತಾನೀ ಗಾಯಕಿ ವೀಣಾ ಮರಡೂರ ಅವರ 'ನುಡಿದರೆ ಮುತ್ತಿನ ಹಾರದಂತಿರಬೇಕು. . . 'ಅಯ್ಯಾ ನಿಮ್ಮ ಶರಣರ ಬರವಿಂಗೆ ನುಡಿ ತೋರಣವ ಕಟ್ಟುವೆ. . . ಎಂಬ ಬಸವೇಶ್ವರ ವಚನಗಳ ಸುಶ್ರಾವ್ಯವಾದ ಗಾನಲಹರಿಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.

ಬಸವಕಲ್ಯಾಣದ ಗುರು ಶ್ರೀ ಪ್ರಣವಾನಂದ ಸ್ವಾಮೀಜಿ, ದೆಹಲಿಯ ಬಸವ ಮಂಟಪದ ಪೀಠಾಧಿಕಾರಿ ಸ್ವರ್ಣ ಮಂಗಳಾದೇವಿ, ದೆಹಲಿಯ ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಶರದ್ ಜವಳಿ, ಕರ್ನಾಟಕ ಸರ್ಕಾರದ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಹಾಗೂ ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಅಧ್ಯಕ್ಷ ಶ್ರೀ ಅಮರನಾಥ ತಳವಾಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು 12ನೇ ಶತಮಾನದಲ್ಲಿ ಸಾಹಿತ್ಯ, ಸಂಸ್ಕೃತಿ ಕ್ರಾಂತಿಯನ್ನು 'ಕಳಬೇಡ, ಕೊಲಬೇಡ. . .ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಯ್ಯಾ ಬಡವನು. . . ಇಂತಹ ಅತ್ಯಂತ ಸರಳವಾದ ವಚನಗಳಿಂದ ಜನರಲ್ಲಿ ಜಾಗೃತಿ ಮಾಡಿದ್ದು ತಮಗೆ ಬಾಂಗ್ಲಾದೇಶದಲ್ಲಿ ಬುಲೆಂದ್ ಷಾ ಹಾಗೂ ಪ್ರಪ್ರಥಮ ಪ್ರಧಾನಿ ಶ್ರೀ ನೆಹರೂರವರ 'ಡಿಸ್ಕವರಿ ಆಫ್ ಇಂಡಿಯಾದಲ್ಲಿಯ 'ಯುನಿಟಿ ಇನ್ ಡೈವರ್ಸಿಟಿ'ಯ ಲೇಖನದಲ್ಲಿ ಕೂಡಾ ಅಳವಡಿಸಿಕೊಂಡಂತೆ ತೋರ್ಪಡುತ್ತದೆ. ಒಗ್ಗಟ್ಟಾಗಿದ್ದರೆ, ಸಮಾಜದಲ್ಲಿಯ ಜಾತಿ ಬೇಧ ನಿವಾರಣೆ ಮಾಡಿ ಪರಿವರ್ತನೆ ತರಲು ಸಾಧ್ಯ ಎಂದು ಹೇಳುತ್ತಾ ಎಲ್ಲರನ್ನೂ ಆತ್ಮೀಯತೆಯಿಂದ, ನಮ್ರತೆಯಿಂದ ಸ್ವಾಗತಿಸಿದರು.

ಬಸವ ಇಂಟರ್ ನ್ಯಾಷನಲ್ ಸೆಂಟರಿನ ಅಧ್ಯಕ್ಷರಾದ ಅಮರನಾಥ ತಳವಾಡೆಯವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಬಸವಣ್ಣ ಲೌಕಿಕ ವ್ಯಕ್ತಿಯಾದರೂ, ಬಹುಮುಖ ವ್ಯಕ್ತಿತ್ವವುಳ್ಳವರು. 12ನೆಯ ಶತಮಾನದಲ್ಲಿ ಜನಿಸಿದ ಬಸವಣ್ಣನವರ ವ್ಯಕ್ತಿತ್ವವು ಬುದ್ಧನ ದಯೆ, ಮಹಾವೀರನ ಸರಳತೆ, ಕ್ರೈಸ್ತನ ಅನುಕಂಪದಿಂದ ಕೂಡಿದ್ದು ಮಹಾತ್ಮರ ಗುಂಪಿನಲ್ಲಿ ಹೊಳೆಯುವ ಒಂದು ನಕ್ಷತ್ರದಂತೆ ಎಂದು ವರ್ಣಿಸುತ್ತಾ ಜನಸಾಮಾನ್ಯರ ಏಳಿಗೆ, ಉನ್ನತಿ ಹಾಗೂ ಉದ್ಧಾರವನ್ನು ಜೀವನದ ಉದ್ದೇಶವಾಗಿ ಹೊಂದಿದ್ದ ಬಸವಣ್ಣನವರು ಮುಖ್ಯವಾಗಿ ಜನತೆಗೆ ಬಾಂಧವ್ಯ ಏಕತಾಭಾವ, ಸತ್ಯ, ಅಹಿಂಸೆ ಸದಾಚಾರಗಳ ಸಂದೇಶ ಬೀರಿದವರು ಎಂದು ಹೇಳಿದರು. ಸುಮಾರು 30ವರ್ಷಗಳ ಹಿಂದೆ ಹಲವಾರು ಹಿರಿಯರ ಪ್ರಯತ್ನದಿಂದಾಗಿ ದೆಹಲಿಯಲ್ಲಿ ಬಸವ ಇಂಟರ್ ನ್ಯಾಷನಲ್ ಸೆಂಟರ್ ಬೆಳೆದು ಬಂದ ಬಗೆಯನ್ನು ತಿಳಿಸಿದರು. ಮುಂಬರುವ ಅಕ್ಟೋಬರ್‌ನಲ್ಲಿ ಸಂಸ್ಥೆಯು ಬೆಳ್ಳಿಹಬ್ಬವನ್ನು ಆಚರಿಸುವ ಕುರಿತಂತೆ ತಮ್ಮ ಯೋಜನೆಯನ್ನು ಮುಂದಿಡುತ್ತಾ ಎಲ್ಲರ ಸಹಕಾರವನ್ನು ಕೋರಿದರು.

ವಿಶ್ವಗುರು ಬಸವೇಶ್ವರರ ಭಾವಚಿತ್ರದ ಎದುರಿಗೆ ಜ್ಯೋತಿ ಬೆಳಗಿಸುವ ಮೂಲಕ ಅತಿಥಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯಸಭಾ ಸದಸ್ಯರಾದ ಕೆ. ರೆಹಮಾನ್ ಖಾನ್ ಅವರ ಶುಭ ಸಂದೇಶವನ್ನು ಬಸವ ಇಂಟರ್ ನ್ಯಾಷನಲ್ ಸೆಂಟರಿನ ಕಾರ್ಯದರ್ಶಿ ವಿ.ವಿ. ಬಿರಾದಾರ ಅವರು ವಾಚಿಸಿದರು.

ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಸಂಸ್ಥೆಯನ್ನು ಬೆಳೆಸಿದ ಅತ್ಯಂತ ಹಿರಿಯರಾದ ಶ್ರೀ ಚಂದ್ರಶೇಖರ ರಾಚಯ್ಯ ಹಿರೇಮಠ್ ಹಾಗೂ ಶ್ರೀ ಜಗದೀಶ್ ರುದ್ರಯ್ಯ ಹಿರೇಮಠ್ ಅವರನ್ನು ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ವತಿಯಿಂದ 'ಬಸವ ರತ್ನ ಪರಿಪಾಲಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿಗಳಾದ ಶ್ರೀ ಬೈಕೆರೆ ನಾಗೇಶ್‌ರವರು "12ನೇ ಶತಮಾನದಲ್ಲಿ ಬದುಕಿ ಬಾಳಿದ ಬಸವಣ್ಣನವರು ದೈವಸ್ವರೂಪಿ ಮತ್ತು ಪೃಥ್ವಿಯಲ್ಲಿ ದೀನ–ದಲಿತರಿಗೆ ವರದಾನವಾಗಿ ಬಂದ ಒಂದು ಅಮೂಲ್ಯ ಸಂಪತ್ತು. ಅಂದು ಸಮಾಜದಲ್ಲಿ ಮೇಲು–ಕೀಳು ಎಂಬ ತಾರತಮ್ಯವನ್ನು ಹೊಡೆದೋಡಿಸಲು ಸಾಮಾಜಿಕ ಕ್ರಾಂತಿಯನ್ನೇ ಮಾಡಿದ ಮಹಾನ್ ಚೇತನ. 12ನೆಯ ಶತಮಾನದಲ್ಲಿಯೇ ಸರಳವಾದ ವಚನಗಳ ಮೂಲಕ ನುಡಿದಂತೆ ನಡೆದ ಬಸವಣ್ಣನವರ ತತ್ವ ಕೇವಲ ವಿಚಾರವಲ್ಲ, ಆಚಾರ ಕೂಡಾ. ಈ ತತ್ವ ಇಂದಿನ ಸಮಾಜದ ಉಳಿವಿಗೆ, ಬೆಳವಣಿಗೆಗೆ ಅತ್ಯಂತ ಅಗತ್ಯವಾಗಿದೆ. ಬಸವತತ್ವದ ಪ್ರಸ್ತುತತೆ ಹಾಗೂ ಬಸವಣ್ಣನವರ ಚಿಂತನೆಗಳು ವಿಶ್ವಾತ್ಮಕ ಮಹತ್ವವನ್ನು ಹೊಂದಿರುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲೂ ಅದನ್ನು ಪಸರಿಸಬೇಕಾಗಿದೆ" ಎಂದು ನುಡಿದರು.

ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿಗಳಾದ ಶ್ರೀ ಶರದ್ ಜವಳಿಯವರು "ಬಸವಣ್ಣ ಕೇವಲ ಕೆಲವರ ಸೊತ್ತಲ್ಲ. ಅವನು ವಿಶ್ವಮಾನವ. ಬಸವಣ್ಣನವರ ವಚನಗಳ ಅರ್ಥ ವೈಶಾಲ್ಯತೆ ದಿಗ್ಭ್ರಮೆ ಮೂಡಿಸುವಂತಹವು. 'ಕಾಯಕವೇ ಕೈಲಾಸ'–ಎಂದರೆ ಕೇವಲ ನಾವು ಮಾಡುವ ಕಾಯಕವಲ್ಲ–ಅದು ನಮ್ಮ ಪ್ರಾಮಾಣಿಕತೆ, ಬದ್ಧತೆಯ ಸಂಕೇತ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ಎಂಬ ನೀತಿಯನ್ನು ಅನುಸರಿಸಿದರೆ, ದೇವರ

ಪೂಜೆಯನ್ನು ಮರೆತರೂ ಲೇಸು ಎಂಬ ವಿಶ್ವಾತ್ಮಕ ಸತ್ಯದ ಅರಿವಿನ ಅಗತ್ಯ ಇಂದಿನ ಈ ಬರ್ಬರ ಪರಿಸ್ಥಿತಿಯಲ್ಲಿ ಅತ್ಯಂತ ಪ್ರಸ್ತುತ"–ಎಂದು ಹೇಳುತ್ತಾ ತಮ್ಮ ವೃತ್ತಿ ಜೀವನದ ಕೆಲವು ಸಾಂದರ್ಭಿಕ ಅನುಭವಗಳನ್ನು ಹಂಚಿಕೊಂಡರು. "ಸಮಾಜ ಸುಧಾರಕರು" ಎಂಬ ಪದದ ಅರ್ಥವನ್ನು ಸೀಮಿತಗೊಳಿಸದೇ ವಿಶಾಲವಾಗಿ ಅರ್ಥೈಸಿಕೊಂಡಾಗ ಬಸವಣ್ಣನವರು ಈ ಜಗತ್ತು ಕಂಡ ಶ್ರೇಷ್ಠ ಸಮಾಜ ಸುಧಾರಕ ಎಂದು ಅಭಿಮಾನದಿಂದ ಹೇಳಿದರು.



ವೀಣಾ ಮರಡೂರ್ ಅವರಿಂದ ವಚನ ಗಾಯನ

ಶರಣೆ ಸ್ವರ್ಣಮಂಗಳಾದೇವಿಯವರು 'ಸಪ್ತನೀತಿಸೂತ್ರಗಳನ್ನು' ಹೇಳಿ ನುಡಿದಂತೆ ನಡೆದಿದ್ದಕ್ಕೆ 12ನೇ ಶತಮಾನದ ವಚನಕಾರರಿಗೆ ಮಹತ್ವ ಬಂದಿದೆ. ಆ ತತ್ವಗಳು ಈಗಲೂ ಜೀವನಕ್ಕೆ ಹತ್ತಿರವಾಗಿದ್ದು, ಜೀವನ ಸಿದ್ಧಾಂತ, ಜೀವನದರ್ಶನ, ತಿಳಿಸುವಂತಹದ್ದಾಗಿದ್ದು, ವಾಗ್ದೇವಿ ಒಲಿದಂತಹ ಬಸವೇಶ್ವರರ ಜೀವನ ಆದರ್ಶಮಯ ಎಂದು ಹೇಳಿದರು.

ಬಸವಕಲ್ಯಾಣದಿಂದ ಆಗಮಿಸಿದ್ದ ಶ್ರೀ ಪ್ರಣಾವಾನಂದ ಸ್ವಾಮೀಜಿ ಅವರು ಬಸವಣ್ಣನವರ ಭವ್ಯವ್ಯಕ್ತಿತ್ವವನ್ನು ವಿವರಿಸುತ್ತಾ ನಡೆಯಲು ಕಲಿಸಿದ ಬಸವ, ನುಡಿಯಲು ಕಲಿಸಿದ ಬಸವ, ಉಡಲು, ಉಣ್ಣಲು ಎಲ್ಲರೊಂದಾಗಿ ಬದುಕಲು ಕಲಿಸಿದ 'ಮಹಾನ್ ಸಮಾನತಾವಾದಿ' ಎಂದು ಹೇಳುತ್ತಾ ಇಂದಿನ ದಿನಗಳಲ್ಲಿ ಬಸವಣ್ಣನವರ ಸಮತಾವಾದದ ತತ್ವ ದಿವ್ಯ ಔಷಧಿ ಎಂದು ಹೇಳಿದರು. ದೇವರ ಬಗ್ಗೆ ನಿಜವಾದ ಜ್ಞಾನ ನೀಡಿ ಜನರಿಗೆ ಮೂಢನಂಬಿಕೆ ಕಳೆದು ದೇವರ ಬಗ್ಗೆ ಮಹತ್ವ ಮೂಡುವಂತೆ ಮಾಡಿದಂಥ ಭವ್ಯ ವ್ಯಕ್ತಿತ್ವವುಳ್ಳ ಬಸವೇಶ್ವರರೇ ದೇವರಿಗಿಂತ ಶ್ರೇಷ್ಠ ಎಂದು ಅಲ್ಲಮಪ್ರಭುಗಳು ಒಂದು ವಚನದಲ್ಲಿ ಹೇಳಿದ್ದನ್ನು ಸಾಂದರ್ಭಿಕವಾಗಿ ತಿಳಿಸಿದರು.



ಸಿ.ಆರ್. ಹಿರೇಮಠ್ ಅವರಿಗೆ ಅಭಿನಂದನೆ

ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಯ ಸೇವೆಗಾಗಿ ಭಾರತ ಸರ್ಕಾರದ "ಪ್ಲಾಂಟ್ ಜಿನೋಂ ಸೇವಿಯರ್ ಕಮ್ಯೂನಿಟಿ" ಪ್ರಶಸ್ತಿ ಪುರಸ್ಕೃತರಾದ ಕಪೋತಗಿರಿ ಶ್ರೀ ನಂದಿವೇರಿ ಸಂಸ್ಥಾನ ಮಠ, ಡೋಣಿ, ಗದಗದ ಶ್ರೀ ಮ.ನಿ.ಪ್ರ. ಶಿವಕುಮಾರ ಮಹಾಸ್ವಾಮಿಗಳನ್ನು ಹೂಗುಚ್ಛ ನೀಡಿ ಅಭಿನಂದಿಸಲಾಯಿತು.

ಕಳೆದ 35 ವರ್ಷಗಳಿಂದ ಹೊರದೇಶದಲ್ಲಿದ್ದು ಕನ್ನಡಪ್ರೇಮವನ್ನು ಉಳಿಸಿ, ಬೆಳೆಸುತ್ತಿರುವ ಮೂಲತಃ ಆನೇಕಲ್‌ನ ಉದ್ಯಮಿ ಶ್ರೀ ಕುಪ್ಪುಸ್ವಾಮಿ ಅವರು ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಇದೀಗ ಕೆನಡಾದಲ್ಲಿರುವ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿಯವರು ಕಾರ್ಯಕ್ರಮ ನಿರ್ವಹಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜರವರು ವಂದನಾರ್ಪಣೆ ಸಲ್ಲಿಸಿದರು.



ಕು. ಸಪ್ನಾ ಅತ್ತಾವರ್

ತದನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ವೀಣಾ ಮರಡೂರ್ ಅವರು ಬಸವಣ್ಣನವರ ವಚನ ಗಾನಾಮೃತದ ಸವಿಯನ್ನು ನೀಡಿ ಸಭಿಕರ ಪ್ರಶಂಸೆಗೆ ಪಾತ್ರರಾದರು. ಅವರಿಗೆ ತಬಲಾದಲ್ಲಿ ಸಂಘದ ಸಕ್ರಿಯ ಸದಸ್ಯ ಸುಧೀರ್ ಫಡ್ನೀಸ್ ಅವರು ಸಾತ್ ನೀಡಿದರು. ಕುಮಾರಿ ಸಪ್ನಾ ಅತ್ತಾವರ್ ಹಾಗೂ ಕುಮಾರಿ ಸ್ವಾತಿ ಅವರ ನೃತ್ಯ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಗಳಿಸಿತು. ಜಮುನಾ ಸಿ. ಮಠದ, ಮಂಜುಳಾ ನಾಗರಾಜ್ ಹಾಗೂ ಸಂತೋಷ್ ಕುಮಾರ್ ಉಪಾಧ್ಯಾಯ ಅವರುಗಳು ವಚನಗಳನ್ನು ಹಾಡಿದರು.



ಕು. ಸ್ವಾತಿ

ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಚಂದ್ರಶೇಖರ ಎನ್.ಪಿ.ಯವರು ನಿರ್ವಹಿಸಿದರು. ದೆಹಲಿ ಮಾತ್ರವಲ್ಲದೇ ಕರ್ನಾಟಕದಿಂದ ಆಗಮಿಸಿದ್ದ ಅಪಾರ ಕನ್ನಡ ಬಂಧುಗಳು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿತ್ತು.

❑ ಡಾ. ಸುಮಂಗಲಾದೇವಿ

# ಚಂದ್ರಶೇಖರ ರಾಚಯ್ಯ ಹಿರೇಮಠ್




ಶ್ರೀ ಸಿ.ಆರ್. ಹಿರೇಮಠ ಅವರು ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ 1924ರಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿದರು. ಇವರು ಮುಂಬಯಿ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಸಮುದಾಯ ಅಭಿವೃದ್ಧಿ, ಪಂಚಾಯತರಾಜ್ ಮತ್ತು ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವರು. ಶ್ರೀ ಹಿರೇಮಠ ಅವರು ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸಹಕಾರಿ ಮತ್ತು ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ 11 ವರ್ಷ ಮತ್ತು ರಾಷ್ಟ್ರಮಟ್ಟದಲ್ಲಿ ಸುಮಾರು 40 ವರ್ಷಗಳ ಕಾಲ ರಾಷ್ಟ್ರದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿರುವರು. 1956ರಲ್ಲಿ ಕರ್ನಾಟಕ ಏಕೀಕರಣವಾದಾಗ ಶ್ರೀ ಹಿರೇಮಠರ ಸೇವಾ ವೃತ್ತಿ ಕರ್ನಾಟಕ ಸೇವೆಗೆ ಅಳವಡಿಸಲಾಯಿತು. 1958ರಲ್ಲಿ ಕೇಂದ್ರ ಸರಕಾರದ ಸೇವೆಗೆ ಸೇರಿದ ಹಿರೇಮಠರು ಜಮೀನು ಅಭಿವೃದ್ಧಿ, ಭೂದಾನ ಮತ್ತು ಗ್ರಾಮಾಭಿವೃದ್ಧಿ ಕ್ಷೇತ್ರದಲ್ಲಿ ಶ್ರೀ ಎಸ್. ನಿಜಲಿಂಗಪ್ಪ, ಡಾ. ಡಿ.ಆರ್. ಗಾಡ್ಗೀಲ್ ಅವರೊಂದಿಗೆ ಕಾರ್ಯ ನಿರ್ವಹಿಸಿರುವರು.

1966ರಲ್ಲಿ FAO ಫೆಲೋಶಿಫ್‌ಗೆ ಆಯ್ಕೆಯಾದ ಹಿರೇಮಠರು, ಸ್ವೀಡನ್, ಇಂಗ್ಲೆಂಡ್, ಸ್ವಿಡ್ಜರ್‌ಲ್ಯಾಂಡ್ ದೇಶಗಳಲ್ಲಿ ಮಾರುಕಟ್ಟೆ ಅಭಿವೃದ್ಧಿ ಕುರಿತ ಅಧ್ಯಯನ ಮಾಡಿ ಭಾರತ ಸರಕಾರಕ್ಕೆ ಅದರ ಸಲಹೆಗಳನ್ನು ನೀಡಿದರು. ಹಿರೇಮಠರು ಕೃಷಿ, ಕೃಷಿ ಸಂಬಂಧಿತ ಆರ್ಥಿಕ ಅಭಿವೃದ್ಧಿ, ನೀರಾವರಿ ಅಭಿವೃದ್ಧಿಗಾಗಿ ಗಣನೀಯವಾಗಿ ದುಡಿದಿರುವರು. ವಿಶ್ವಬ್ಯಾಂಕ್ ಅಭಿವೃದ್ಧಿ ನಿಧಿಯ ಆಶ್ರಯದಲ್ಲಿನ All India Federation of Co-operative spinning Mills, ಮುಂಬಯಿಯಲ್ಲಿ 14 ವರ್ಷಗಳವರೆಗೆ ಅದರ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿರುವರು. ಅವರ ಈ ಗಣನೀಯ ಸೇವೆಯನ್ನು ಗುರುತಿಸಿದ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ಅವರು 1995ರಲ್ಲಿ ಅವರನ್ನು ನವದೆಹಲಿಯ ಸೂಪರ್ ಬಜಾರದ ಅಧ್ಯಕ್ಷರಾಗಿ ನಾಮಕರಣ ಮಾಡಿದರು.

ನವದೆಹಲಿಯ ಬಸವ ಇಂಟರ್ ನ್ಯಾಶನಲ್ ಸೆಂಟರ್‌ನ ಸಂಸ್ಥಾಪಕ ಸದಸ್ಯರಾದ ಹಿರೇಮಠರು ಅದರ ಅಧ್ಯಕ್ಷರಾಗಿ ಸುಮಾರು 20ವರ್ಷ ಕಾರ್ಯನಿರ್ವಹಿಸಿರುವರು. ಈ ಅವಧಿಯಲ್ಲಿ ಬಸವ ತತ್ವ ಮತ್ತು ವಚನ ಸಾಹಿತ್ಯದ ಪ್ರಚಾರ ಮಾಡಿದ ಅವರ ಈ ಗಣನೀಯ ಸೇವೆಗಾಗಿ ಶರಣ ಸಿ.ಆರ್. ಹಿರೇಮಠ ಅವರನ್ನು ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ 2012ನೇ ಸಾಲಿನ "ಬಸವ ತತ್ವ ಪರಿಪಾಲಕ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಯಿತು.

❑ **ಡಾ. ಜಿ.ಎ. ಬಿರಾದಾರ**

# ರಾಯಭಾರಿ ಜಗದೀಶ್ ರುದ್ರಯ್ಯ ಹಿರೇಮಠ



ರಾಯಭಾರಿ ಜಗದೀಶ್ ರುದ್ರಯ್ಯ ಹಿರೇಮಠ ಅವರು ಬಿಜಾಪುರದ ಶ್ರೀ ರುದ್ರಯ್ಯ ಶಿವಲಿಂಗಯ್ಯ ಹಿರೇಮಠ ಪುತ್ರರಾಗಿ ಜನಿಸಿದ್ದು 1931 ರಲ್ಲಿ. ಪೂನಾ ವಿಶ್ವವಿದ್ಯಾಲಯದಿಂದ ಬಿ. ಎ. ಪದವಿ ಗಳಿಸಿದ ಇವರು ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಎಂ. ಎ. ಪಡೆದರು. ನಂತರ 35 ವರ್ಷ ಐ. ಎಫ್. ಎಸ್. ಅಧಿಕಾರಿಯಾಗಿ ಸೇವೆಸಲ್ಲಿಸಿದರು. ಈ 35 ವರ್ಷಗಲ್ಲಿ ಇವರು ಬಲ್ಗೇರಿಯ, ಭೂತಾನ್, ಯುಗೊಸ್ಲಾವಿಯ ಮತ್ತು ಆಸ್ಟ್ರಿಯ ದೇಶಗಳಿಗೆ ರಾಯಭಾರಿಯಾಗಿ ಸೇವೆಸಲ್ಲಿಸಿದ್ದಾರೆ. ಇದಲ್ಲದೆ ಆಸ್ಟ್ರಿಯಾದ ರಾಯಭಾರಿಯಾಗಿದ್ದಾಗಲೇ ಸಂಯುಕ್ತ ರಾಷ್ಟ್ರಕೂಟದ (ಯು. ಎನ್. ಒ.) ದ ಸ್ಥಾಯಿ ಪ್ರತಿನಿಧಿಯಾಗಿ, ಸಂಯುಕ್ತ ರಾಷ್ಟ್ರಕೂಟದ ಔದ್ಯೋಗಿಕ ಸಂಸ್ಥೆ (ಯು. ಎನ್. ಐ. ಡಿ. ಒ.) ಯ ಸ್ಥಾಯಿ ಪ್ರತಿನಿಧಿಯಾಗಿ ಹಾಗು ಅಂತರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ (ಐ. ಎ. ಇ. ಎ.) ಯ ಸ್ಥಾಯಿ ಪ್ರತಿನಿಧಿಯಾಗಿ ಕೂಡ ಸೇವೆಸಲ್ಲಿಸಿದ್ದಾರೆ.

ರಾಯಭಾರಿಯ ಪದವಿಗೆ ಪೂರ್ವ ಇವರು ಕೀನ್ಯ ಮತ್ತು ಸೋಮಾಲಿಯ ದೇಶಗಳಿಗೂ ಭಾರತದ ಅಧಿಕಾರಿಯಾಗಿ ಸೇವೆ ನೀಡಿದ್ದಾರೆ. ಕೆಲಕಾಲ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ಎಕಾನೋಮಿಕ್ ಡಿವಿಸನ್ ಎಂ.ಇ. ಎ. ದ ನಿರ್ದೇಶಕರಾಗಿ ಹಾಗೂ 1972 ರಿಂದ 1975 ರ ವರೆಗೆ ವಿತ್ತ ಮಂತ್ರಾಲಯದ ಡಿಪಾರ್ಟ್‌ಮೆಂಟ್ ಆಫ್ ಎಕಾನೋಮಿಕ್ ಆಫ್ಯೆರ್ಸ್‌ನ ಜಂಟಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ನಿವೃತ್ತಿಯ ನಂತರ 1989 ರಿಂದ 1991 ವರೆಗೆ ಪ್ರಧಾನ ಮಂತ್ರಿಯವರಿಗೆ ದಕ್ಷಿಣ ಆಫ್ರಿಕ ಮತ್ತು AFRICA (Action For Resisting Invasion Colonialism and Apartheid) ವಿಶೇಷ ಸಲಹೆಗಾರರಾಗಿ ದೇಶದ ಸೇವೆಗೈದಿದ್ದಾರೆ.

ಜವಾಹರಲಾಲ್ ನೆಹರು ಫೆಲೋಶಿಪ್ ಪಡೆದು "ಭಾರತೀಯ ದಕ್ಷಿಣ ಆಫ್ರಿಕನ್ (ISA) ರ ಪ್ರಸ್ತುತ ಸ್ಥಿತಿಗತಿ ಹಾಗು ಭವಿಷ್ಯ"ಎಂಬ ಅಧ್ಯಯನ ಗ್ರಂಥ ಬರೆದಿದ್ದಾರೆ. ಇದು "ಸಮ್ಮರಿಂಗ್ ಇನ್ ಸೌತ್ ಆಫ್ರಿಕಾ" ಹೆಸರಿನ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. 2000 ದಲ್ಲಿ ಇವರನ್ನು ಭಾರತ ಸರಕಾರವು ಐದು ಜನರ ಅತ್ಯುನ್ನತ ಸಮಿತಿಗೆ (HLC) ಸದಸ್ಯರನ್ನಾಗಿ ನಿಯಮಿಸಿ–ಅನಿವಾಸಿ ಭಾರತೀಯರು ಹಾಗು ಭಾರತೀಯ ಮೂಲದ ವಿದೇಶಿಯರುಗಳ ಕುರಿತಂತೆ ಬೃಹತ್ ವರದಿಯನ್ನು ನೀಡಲು ಕೇಳಿಕೊಂಡಿತ್ತು. ಪ್ರಧಾನ ಮಂತ್ರಿಯವರಿಗೆ 2002 ರಲ್ಲಿ ನೀಡಲಾದ ವರದಿಯಲ್ಲಿ ಅನೇಕ ಮನವಿಗಳನ್ನು ಸರಕಾರಕ್ಕೆ ಸೂಚಿಸಲಾಗಿತ್ತು. ಅವುಗಳಲ್ಲಿನ ಒಂದು ಸೂಚನೆಯಂತೆ ಜನವರಿ 9 ಅನ್ನು (9 ಜನವರಿ–1915 ರಲ್ಲಿ ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಮರಳಿದ ದಿನ) "ಪ್ರವಾಸಿ ಭಾರತೀಯ ದಿವಸ"ವನ್ನಾಗಿ ಆಚರಿಸಲು ಸರಕಾರವು ಒಪ್ಪಿಕೊಂಡಿದೆ.

ರಾಯಭಾರಿ ಜಗದೀಶ್ ರುದ್ರಯ್ಯ ಹಿರೇಮಠರು ಸದ್ಯ ದೆಹಲಿಯಲ್ಲಿಯೇ ನೆಲೆಸಿದ್ದಾರೆ. ಅವರೊಂದಿಗೆ ಅವರ ಪತ್ನಿ (ಊನಿತ ಕಟ್ಟಲಿಯ ಹಿರೇಮಠ) ಮತ್ತು ಅವರ ಮೂವರು ಮಕ್ಕಳಾದ (ಅನಿಲ ಹಿರೇಮಠ,ಅಲೋಕ ಹಿರೇಮಠ ಹಾಗು ಅಕ್ಷಯ ಹಿರೇಮಠ) ವಾಸಿಸುತ್ತಿದ್ದಾರೆ. ದೇಶದ ಹಿತಕ್ಕಾಗಿ, ಹಾಗು ಬಸವ ತತ್ವವಾದ "ವಿಶ್ವ ಮಾನವೀಯತೆ"ಯತ್ತ ಇವರು ಇಟ್ಟ ದಿಟ್ಟ ಹೆಜ್ಜೆ ಗಮನಿಸಿ ಇವರಿಗೆ 2012 ನೆ ವರ್ಷದ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ "ಬಸವ ತತ್ವ ಪರಿಪಾಲಕ ರತ್ನ" ಗೌರವ ಫಲಕವನ್ನಿತ್ತು ದಿನಾಕ 29.04.2012 ರಂದು ನಡೆದ ಬಸವ ಜಯಂತಿ ಕಾರ್ಯಕ್ರಮದಂದು ಸನ್ಮಾನಿಸಲಾಯಿತು.

❑ **ಚೆನ್ನು ಎಸ್. ಮಠದ**

# ಅಗಲಿದ ದೆಹಲಿ ಹಿರಿಯ ಕನ್ನಡಿಗ ಜೈನ ವಿದ್ವಾಂಸ ಎಂ.ಕೆ. ಧರ್ಮರಾಜ್



ತಮ್ಮ ಜೀವಿತದ ಮುಕ್ಕಾಲು ಭಾಗವನ್ನು ದೆಹಲಿಯಲ್ಲೇ ಕಳೆದ ಹಿರಿಯ ಪತ್ರಕರ್ತ, ಜೈನ ವಿದ್ವಾಂಸ, 94ರ ಹಿರಿಯ ಕನ್ನಡಿಗ ಎಂ.ಕೆ. ಧರ್ಮರಾಜ್ ಅವರು ಏಪ್ರಿಲ್ 25ರಂದು ನಿಧನರಾದರು. ಅಗಲಿದ ಮಹಾನ್ ಚೇತನಕ್ಕೆ ನಮನ ಸಲ್ಲಿಸುವ ಸಲುವಾಗಿ ಏಪ್ರಿಲ್ 24ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಶ್ರದ್ಧಾಂಜಲಿ ಸಭೆ ಸೇರಿ ಮೌನವನ್ನಾಚರಿಸಲಾಯಿತು.

ಧರ್ಮರಾಜ್ ಅವರ ಬಹುಕಾಲದ ಒಡನಾಡಿ, ಸಹೋದ್ಯೋಗಿ ಐ. ರಾಮಮೋಹನ ರಾವ್ ಅವರು ತಮ್ಮ ಸುದೀರ್ಘ ಗೆಳೆತನದ ಅನುಭವವನ್ನು ಹಂಚಿಕೊಂಡರು. ಅವರಿಬ್ಬರೂ ಕಾರ್ಕಳ ತಾಲ್ಲೂಕಿನಿಂದ ಬಂದವರು ಮುಂದಿನ ದಿನಗಳಲ್ಲಿ ಆಕಾಶವಾಣಿಯಲ್ಲಿ ಸಹೋದ್ಯೋಗಿಯಾಗಿದ್ದರಿಂದ ಧರ್ಮರಾಜ್ ಅವರನ್ನು ಬಹಳ ಹತ್ತಿರದಿಂದ ಕಂಡವರು. 1965, 1971ರ ಯುದ್ಧದ ವರದಿಯನ್ನು ಅತ್ಯಂತ ಕ್ಷಿಪ್ರ ವೇಗದಲ್ಲಿ ನಿರೂಪಿಸಿದ ಖ್ಯಾತಿ ಧರ್ಮರಾಜ್ ಅವರದು ಎಂದು ನುಡಿದ ರಾಮಮೋಹನರಾವ್ ಅವರು ಧರ್ಮರಾಜ್ ಅವರ ನಿಧನದಿಂದ ಆತ್ಮೀಯರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ತಮ್ಮ ಮನದಾಳದ ನೋವನ್ನು ವ್ಯಕ್ತಪಡಿಸಿದರು.

1998ರಲ್ಲಿ ಮೊದಲ ಬಾರಿಗೆ ದೆಹಲಿಗೆ ಬಂದ ಎರಡೇ ದಿನದಲ್ಲಿ ಧರ್ಮರಾಜ್ ಅವರನ್ನು ಭೇಟಿಯಾಗುವ ಸುಯೋಗ ದೊರೆತಿದ್ದನ್ನು ಡಾ. ಪುರುಷೋತ್ತಮ ಬಿಳಿಮಲೆ ಸ್ಮರಿಸಿದರು. ಪಂಪನ ಆದಿಪುರಾಣದ ಮೂಲ ಪ್ರಾಕೃತ ಕೃತಿ 'ಪಉಮ ಚರಿತೆ'ಯ ಬಗ್ಗೆ ಮಾತನಾಡಿ ದಿಗ್ಭ್ರಮೆ ಮೂಡಿಸಿದ ಧರ್ಮರಾಜ್ ಜೈನ ಸಾಹಿತ್ಯದ ಬಗ್ಗೆ ಜ್ಞಾನವನ್ನು ವಿಸ್ತಾರಗೊಳಿಸಿದವರು ಹಾಗೂ ಆತ್ಮದಲ್ಲಿ ದೊಡ್ಡತನವಿದ್ದ ಮಹಾನ್ ವ್ಯಕ್ತಿ ಎಂದು ತಮ್ಮ ನುಡಿ ನಮನ ಸಲ್ಲಿಸಿದರು.

ಪಶ್ಚಿಮವಿಹಾರದಲ್ಲಿ ಧರ್ಮರಾಜ್ ಅವರ ಮನೆಯ ಸಮೀಪವೇ ಇದ್ದ ಎಸ್. ಕೃಷ್ಣಭಟ್ ಅವರು ತಮ್ಮ 20 ವರ್ಷಗಳ ಆತ್ಮೀಯ ಒಡನಾಟವನ್ನು ಮೆಲುಕು ಹಾಕಿದರು. "ಪ್ರೀತಿ ಹಾಗೂ ಮೋಹಗಳ ನಡುವಿನ ಅಂತರವನ್ನು ಅವರ ಬದುಕಿನಲ್ಲಿ ಕಂಡಿದ್ದೇನೆ. ಅವರೆಂದೂ ಏನನ್ನೂ ಅಪೇಕ್ಷೆ ಪಡುತ್ತಿರಲಿಲ್ಲ. ಬದುಕನ್ನು ತಾವೇಣಿಸಿದಂತೆ ಬದುಕಿ ಬಾಳಿದವರು. ಕನ್ನಡನಾಡು, ನುಡಿ, ಸಂಸ್ಕೃತಿಯನ್ನು ಬದುಕಿನುದ್ದಕ್ಕೂ ಆವಿರ್ಭವಿಸಿಕೊಂಡು ಕೊನೆಯ ದಿನದವರೆಗೂ ಸಾರ್ಥಕ ಬಾಳ್ವೆ ನಡೆಸಿದವರು ಕನ್ನಡದ ಅರಿವು, ಇಂಗ್ಲಿಷಿನ ಹಿಡಿತ, ತುಳುವಿನ ಅದಮ್ಯ ಪ್ರೀತಿಯ ಅಂತಃಶಕ್ತಿಯನ್ನು ತುಂಬಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ" ಎಂದು ತಮ್ಮ ಗೌರವಪೂರ್ವಕ ನಮನಗಳನ್ನು ಸಲ್ಲಿಸಿದರು.

1982ರಲ್ಲಿ ದೆಹಲಿಗೆ ಬಂದಾಗಿನಿಂದಲೂ ನಿಕಟ ಸಂಪರ್ಕದಲ್ಲಿದ್ದ ವಸಂತ ಶೆಟ್ಟಿ ಬೆಳ್ಳಾರೆ ಅವರು ಧರ್ಮರಾಜ್ ಅವರ ನಿಧನದಿಂದ ತಮ್ಮ ಕುಟುಂಬದ ಹಿರಿಯ ಸದಸ್ಯರೊಬ್ಬರನ್ನು ಕಳೆದುಕೊಂಡ ನೋವಾಗಿದೆ ಎಂದರು. ತುಳುನಾಡು ಫೋರಂ, ಸೌತ್ ಕೆನರಾ ಕ್ಲಬ್, ಅಲ್ಲದೇ ಕನ್ನಡಪರ ಸಂಘ ಸಂಸ್ಥೆಗಳ ಕುರಿತಾದ ಅವರ ಕಾಳಜಿ ಆದರಣೀಯ ಹಾಗೂ ಅನುಕರಣೀಯ, ಪ್ರತಿಯೊಬ್ಬರಿಗೂ ಯಾವಾಗಲೂ ಸಕಾರಾತ್ಮಕ ಸಲಹೆ, ಮಾರ್ಗದರ್ಶನ ನೀಡುತ್ತಿದ್ದ ಧರ್ಮರಾಜ್ ಅವರ ನಿಧನದಿಂದ ದೆಹಲಿ ಕನ್ನಡಿಗರ ವಲಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣ ಡಾ. ಅಹಲ್ಯಾ ಚಿಂತಾಮಣಿ ಅವರು ತಮ್ಮ ಶೋಕ ಸಂದೇಶವನ್ನು ಕಳುಹಿಸಿದ್ದರು "ದೆಹಲಿ ಕನ್ನಡಿಗ–29ನೇ ಸಮ್ಮೇಳನದ ಸಂಜೆ. ನಾನು ಕರ್ನಾಟಕ ಸಂಘಕ್ಕೆ ನಾಲ್ಕು ಗಂಟೆಗೆ ತಲುಪಿದೆ. ಆರ್ಟ್ ಗ್ಯಾಲರಿಗೆ ಹೆಜ್ಜೆ ಇಟ್ಟೆ. ಅದೇ ಸಮಯಕ್ಕೆ ಶ್ರೀ ಕೆ.ಎಸ್.ಜಿ. ಶೆಟ್ಟಿಯವರು ಶ್ರೀ ಧರ್ಮರಾಜರನ್ನು ಲಿಫ್ಟ್‌ನಿಂದ ಇಳಿಸಿಕೊಂಡು ಬರುತ್ತಿದ್ದರು. ನನ್ನ ನೋಡಿದ ಧರ್ಮರಾಜರು–ಅಹಲ್ಯಾ "ನನ್ನ ಕಾಗದ ತಲುಪಿತೆ, ವಯಸ್ಸಾಯಿತು ಬರೆಯಲು ನನಗೆ ಕೈ ನಡುಗುತ್ತೆ, ನಿಮ್ಮ ಯುಗಾದಿ ಪತ್ರ ತಪ್ಪದೆ ಬರುತ್ತೆ, ನನಗೆ ಹೆಚ್ಚು ಹೊತ್ತು ಇರಲಾಗುವುದಿಲ್ಲ. ಮನೆಗೆ ಹೋಗುತ್ತೇನೆ" ಎಂದು ಟ್ಯಾಕ್ಸಿಯಲ್ಲಿ ಕುಳಿತು ಹೋದರು. ನಾನು ಅದೃಷ್ಟವಂತೆ. ಅವರ ಆಶೀರ್ವಾದ ಪಡೆದೆ. ಅವರು ಪ್ರತಿ ವರ್ಷ ಯುಗಾದಿ ಪತ್ರಕ್ಕೆ ಬರೆದ ಪತ್ರಗಳು ನನಗೆ ಅಮೂಲ್ಯವಾಗಿವೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ".

ಧರ್ಮರಾಜ್ ಅವರ ಪುತ್ರರಾದ ಡಾ. ಚಂದ್ರಕುಮಾರ್ ಬಲ್ಲಾಳ್, ರತ್ನಂಜಯ ಬಲ್ಲಾಳ್ ಹಾಗೂ ಲೆ। ಕ। ಎಸ್.ಕೆ. ಬಲ್ಲಾಳ್ ಅವರುಗಳು ಶ್ರದ್ಧಾಂಜಲಿ ಸಭೆಯಲ್ಲಿ ಉಪಸ್ಥಿತರಿದ್ದರು. ಡಾ. ಚಂದ್ರಕುಮಾರ್ ಬಲ್ಲಾಳ್ ಅವರು ತಮ್ಮ ತಂದೆಯವರ ಬಹುಮುಖ ವ್ಯಕ್ತಿತ್ವವನ್ನು ತೆರೆದಿಟ್ಟರು. ಜೀವನದಲ್ಲಿ ಎಂದೂ ಆದರ್ಶ, ನೀತಿ, ನಿಷ್ಠೆ, ಪ್ರಾಮಾಣಿಕತೆಗಳನ್ನು ಮರೆದ ಅವರು ಮಕ್ಕಳಿಗೂ ಅದೇ ಮಾರ್ಗವನ್ನು ತೋರಿಸಿದವರು. ತಮ್ಮ ತಂದೆಯವರ ಅಂತಿಮ ಇಚ್ಛೆಯಂತೆ ಕಣ್ಣುಗಳನ್ನು ದಾನ ಮಾಡಿದ್ದನ್ನು ಹಾಗೂ ಪರಿಸರ ಸಂರಕ್ಷಣೆಯ ಸಲುವಾಗಿ ವಿದ್ಯುತ್ ಚಿತಾಗಾರದಲ್ಲೇ ಅಂತಿಮ ಸಂಸ್ಕಾರ ಮಾಡಿದ್ದನ್ನು ತಿಳಿಸಿದರು. ತಮ್ಮ ತಂದೆಯವರ ಬಗ್ಗೆ ಪ್ರೀತಿ, ಗೌರವಗಳನ್ನು ತೋರಿದ ಎಲ್ಲ ಕನ್ನಡಿಗರಿಗೂ ಹಾಗೂ ದೆಹಲಿ ಕರ್ನಾಟಕ ಸಂಘಕ್ಕೂ ತಮ್ಮ ಕುಟುಂಬದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

❑ ಉಷಾ ಭರತಾದ್ರಿ

# ಎಂ.ಕೆ. ಧರ್ಮರಾಜ–ದೆಹಲಿ ಕನ್ನಡಿಗರ ಬಾಹುಬಲಿ

ಪಶ್ಚಿಮ ವಿಹಾರದ 33, ಮೈತ್ರಿ ಅಪಾರ್ಟ್‌ಮೆಂಟ್‌ನ ಒಳಹೊಕ್ಕರೆ ನಿಮಗೆ ಗ್ರಂಥಾಲಯವೊಂದಕ್ಕೆ ಪ್ರವೇಶ ಮಾಡಿದಂತಾಗುತ್ತದೆ. ಜೈನ ಧರ್ಮಕ್ಕೆ ಸೇರಿದ ಅತ್ಯಮೂಲ್ಯ ಪುಸ್ತಕಗಳನ್ನು ನೋಡಿ ನೀವು ಆಶ್ಚರ್ಯಪಡುತ್ತಿರುವಾಗ ಆ ಪುಸ್ತಕಗಳ ಒಳಗಿನಿಂದಲೋ ಎಂಬಂತೆ 87 ವರ್ಷದ (ಜನನ–ಸೆಪ್ಟಂಬರ್ 20, 1918) ಶ್ರೀ ಎಂ.ಕೆ. ಧರ್ಮರಾಜ ಅವರು ಕೈಯಲ್ಲಿ ನಾಲ್ಕಾರು ಪುಸ್ತಕಗಳನ್ನು ಹಿಡಿದುಕೊಂಡು ನಿಧಾನವಾಗಿ ಪ್ರತ್ಯಕ್ಷರಾಗುತ್ತಾರೆ. "ಬನ್ನಿ . . .ಬನ್ನಿ. . . ಈ ಪುಸ್ತಕ ನೊಡಿ, ಇದು ಮಹಾಪಂಡಿತ ಕುಂದಕುಂದಾಚಾರ್ಯರು ಬರೆದದ್ದು. ಅರ್ಥ ಮಾಡಿಕೊಳ್ಳಲು ಭಾರೀ ಕಷ್ಟ ನಾನದನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ್ದೇನೆ" ಎಂದು ನೀವು ಎಂದೂ ಕಂಡಿರದ ಪುಸ್ತಕವೊಂದನ್ನು ನಿಮ್ಮ ಕೈಗೆ ನೀಡುತ್ತಾರೆ. ನೀವು ಆವಾಕ್ಕಾಗಿ ಅದನ್ನು ನೋಡುತ್ತಿರುವಂತೇ ಅವರು ನಿಮ್ಮನ್ನು ನೇರವಾಗಿ ಒಳ ಕೊಠಡಿಗೆ ಕರೆದೊಯ್ಯುತ್ತಾರೆ, ಕುಳಿತುಕೊಳ್ಳಲು ಹೇಳುತ್ತಾರೆ. ಅಷ್ಟರಲ್ಲಿ ಶ್ರೀಮತಿ ಧರ್ಮರಾಜ (ಲಕ್ಷ್ಮೀಮತಿ) ನಿಮ್ಮ ಮುಂದೆ ಹಾಜರಾಗುತ್ತಾರೆ. "ಹೇಗಿದೆ ನಿಮ್ಮ ಸಂಘ ಈಗ, ಕಟ್ಟಡ ಚೆನ್ನಾಗಿ ಬರುತ್ತಿದೆ ಅಂತ ಕೇಳಿದೆ... ಅದು ಆಮೇಲೆ ಮಾತಾಡೋಣ, ಈಗ ಚಹ ಆದೀತೋ... ಕಾಫಿ ಆದೀತೋ..." ಎಂದು ಪ್ರೀತಿಯಿಂದ ವಿಚಾರಿಸಿಕೊಳ್ಳುತ್ತಾರೆ. ಅವರು ಅತ್ತ ಸರಿಯುತ್ತಿದ್ದಂತೆ ಧರ್ಮರಾಜರು ಪುಸ್ತಕದ ರಾಶಿಯೊಳಗಿನಿಂದ ಯಾವುದೋ ಒಂದು ಪುಸ್ತಕವನ್ನು ತೆಗೆದು... "ನಿಮಗೆ ಧವಳಕೀರ್ತಿ ಎಂಬ ಪುಸ್ತಕ ಸಿಕ್ಕಿದೆಯೋ...ಆ ಜಿನರಾಜ ಹೆಗ್ಡೆ ಅವರು ಇದ್ದರಲ್ಲ? ಅವರ ಬಗೆಗಿನ ಪುಸ್ತಕ ಅದು. ಅದರಲ್ಲಿ ನಾನೊಂದು ಲೇಖನ ಬರೆದಿದ್ದೇನೆ ನೋಡಿ..." ಎಂದು ಹೇಳುತ್ತಾ ಆ ಪುಸ್ತಕವನ್ನು ನಿಮ್ಮ ಕೈಗೆ ಕೊಡುತ್ತಾರೆ. ಹೀಗೆ ಪಾಂಡಿತ್ಯ, ಸಾಹಿತ್ಯ ಪ್ರೇಮ, ಬರಹಗಳಿಂದ ಶ್ರೀ ಧರ್ಮರಾಜರು ಪ್ರಸಿದ್ಧರು. ಅವರನ್ನು ಭೇಟಿಯಾಗಿ ಮಾತಾಡುವುದೆಂದರೆ ಈ ದೆಹಲಿಯಲ್ಲಿ ಬೇರೆಯದೇ ಆದ ಒಂದು ಅನುಭವ. ಸುಸಂಸ್ಕೃತ ವ್ಯಕ್ತಿತ್ವ ಅವರದು.

ಬಹುಮುಖ ಪ್ರತಿಭೆಯ ಶ್ರೀ ಎಂ.ಕೆ. ಧರ್ಮರಾಜ ಅವರು ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರಲ್ಲೊಬ್ಬರು. ದೆಹಲಿಯಲ್ಲಿ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಜೀವನ ಸಮಯವನ್ನು ಕಳೆದ ಧರ್ಮರಾಜರ ಕುಟುಂಬದ ಬೇರು ದಕ್ಷಿಣದ ಜೈನ ಕಾಶಿ ಎಂದೇ ಪ್ರಸಿದ್ಧವಾದ ಕಾರ್ಕಳದಲ್ಲಿದೆ. ಧರ್ಮರಾಜ ಅವರು ಆರಂಭದ ವಿದ್ಯಾಭ್ಯಾಸವನ್ನು ದಕ್ಷಿಣ ಕನ್ನಡದ ಕಾರ್ಕಳದಲ್ಲಿ ನಡೆಸಿದರು. ನಂತರ ಮಂಗಳೂರಿನ ಸೈಂಟ್ ಅಲೋಸಿಯಸ್ ಮತ್ತು ಮದರಾಸಿನ ಲಯೋಲಾ ಕಾಲೇಜುಗಳಲ್ಲಿ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರು.

ಮದರಾಸಿನಲ್ಲಿದ್ದಾಗ, ಲಯೋಲಾ ಕಾಲೇಜು ಯೂನಿಯನ್ ಡಿಬೇಟಿಂಗ್ ಕ್ಲಬ್‌ನ ಅಧ್ಯಕ್ಷರಾಗಿದ್ದಲ್ಲದೇ, ಅಂತರ್ ವಿಶ್ವವಿದ್ಯಾಲಯ ಚರ್ಚಾ ಸ್ಪರ್ಧೆಗಳಲ್ಲಿ ಆರು ಪದಕ ಹಾಗೂ ಹನ್ನೆರಡು ಬಹುಮಾನಗಳನ್ನು ಪಡೆದಿದ್ದರು. ಮದರಾಸಿನ ವೈ.ಎಂ.ಸಿ.ಎ. ಅಥೇನಿಯಂನ ಭಾಷಣಕಾರರಾಗಿ ಶ್ರೀನಿವಾಸ ಅಯ್ಯಂಗಾರ್ ಅಂತರ್ ಸಂಘಗಳ ಚರ್ಚಾ ಸ್ಪರ್ಧೆಯಲ್ಲಿ ವಿಜಯ ಗಳಿಸಿದರು.

ಆಕಾಶವಾಣಿ ಮದರಾಸು ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಕನ್ನಡ ಶೈಕ್ಷಣಿಕ ಹಾಗೂ ಇತರ ಕಾರ್ಯಕ್ರಮಗಳಲ್ಲದೆ ಕಾಲಚಕ್ರ ಕಾರ್ಯಕ್ರಮದ ವಾರ್ತಾ ಓದುಗರಾಗಿದ್ದರು. 1947ನೇ ಇಸವಿಯಲ್ಲಿ ಆಕಾಶವಾಣಿಯ ವಾರ್ತಾ ಸೇವೆಯಲ್ಲಿ ಖಾಯಂ ವೃತ್ತಿಗೆ ಸೇರಿದ ಇವರು ಸಾಮಾನ್ಯ ಹಾಗೂ ಸಂಸತ್ ವಾರ್ತೆಗಳ ವಿಶೇಷ ವರದಿಗಾರರಾಗಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮುಖ್ಯ ವಾರ್ತಾ ಸಂಚಯದ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ 1968ರ ಶ್ರೀಲಂಕಾದ ಭೇಟಿಯಲ್ಲಿ ಧರ್ಮರಾಜ ಅವರು ಜತೆಗಾರರಾಗಿ ಹೋಗಿದ್ದರು.

ಏಷ್ಯಾ ಮತ್ತು ದಕ್ಷಿಣ ಪೆಸಿಫಿಕ್ ಕ್ರೀಡಾ ಪ್ರಸಾರಕರ ಸಂಘದ ಉಪಾಧ್ಯಕ್ಷರಾಗಿ 1971ರಲ್ಲಿ ಅವಿರೋಧವಾಗಿ ಆಯ್ಕೆಯಾದರು. ಬಾನುಲಿ ವ್ಯವಸ್ಥೆ, ಕಲಾ ಮತ್ತು ಕ್ರೀಡಾ ಪದ್ಧತಿಗಳನ್ನು ಅಧ್ಯಯನ ಮಾಡಲು 1977ರಲ್ಲಿ ಪೂರ್ವ ಜರ್ಮನಿಯ ಭೇಟಿ ಮಾಡಿದರು. ನಿವೃತ್ತಿ ನಂತರ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸಂಸತ್ ವಾರ್ತೆ ಮತ್ತು ಪ್ರಮುಖ ಘಟನೆಗಳ ಟೀಕಾಕಾರರಾಗಿ ಕಾರ್ಯನಿರ್ವಹಿಸಿದರು. ಜತೆಗೆ ವಿವಿಧ ಪತ್ರಿಕೆಗಳಲ್ಲಿ ಸುದ್ದಿ ವಿಭಾಗದ ಮುಖ್ಯಸ್ಥರಾಗಿ ಹಾಗೂ ಫ್ರೀಲ್ಯಾನ್ಸ್ (ಹವ್ಯಾಸಿ) ಪತ್ರಕಾರರಾಗಿ ಕೆಲಸ ಮಾಡಿದರು.

ತಮ್ಮ ಜೀವನದ ಅಮೂಲ್ಯವಾದ ಸಮಯವನ್ನು ಶ್ರೀ ಧರ್ಮರಾಜ ಅವರು ಜೈನಮತದ ಧಾರ್ಮಿಕ ಕೆಲಸಗಳಿಗೂ ಅರ್ಪಿಸಿದ್ದಾರೆ. ದೇಶದ ಪ್ರಮುಖ ಪತ್ರಕರ್ತರಾಗಿರುವ ಅವರು ಗೊಮ್ಮಟವಾಣಿ ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹಾಗೂ ಮೂಡಬಿದಿರೆಯ ಜ್ಞಾನಯೋಗಿ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಜತೆ ಅಮೆರಿಕಾದ ಪ್ರಿನ್ಸ್‌ಟನ್‌ನಲ್ಲಿ 1979ರಲ್ಲಿ ನಡೆದ ಜಾಗತಿಕ ಧರ್ಮ ಹಾಗೂ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದರು. ವಿವಿಧ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಧಾರ್ಮಿಕ ಸಮ್ಮೇಳನಗಳಲ್ಲಿ ಭಾಗವಹಿಸಿದ ಶ್ರೀ ಧರ್ಮರಾಜ ಅವರು ಶ್ರವಣಬೆಳಗೊಳ, ಧರ್ಮಸ್ಥಳ, ವೇಣೂರುಗಳ ಮಹಾ ಮಸ್ತಕಾಭಿಷೇಕಗಳು ನಡೆದಾಗೆಲ್ಲ ಉದ್ಘೋಷಕರಾಗಿ ತಮ್ಮ ಅಭೂತಪೂರ್ವ ಪ್ರತಿಭೆಯನ್ನು ಪ್ರಕಟಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದಿಂದ 1998ರಲ್ಲಿ ವಿಶಿಷ್ಟ ಕನ್ನಡಿಗರೆಂದು ಪುರಸ್ಕೃತರಾದ ಧರ್ಮರಾಜ ಅವರನ್ನು ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಭಗವಾನ್ ಮಹಾವೀರ 2500ನೇ ಪರಿನಿರ್ವಾಣ ಪದಕ, ಆಚಾರ್ಯ ಕುಂದ ಕುಂದ ಪುರಸ್ಕಾರ ಮೊದಲಾದ ಪ್ರಶಸ್ತಿಗಳು ಇವರಿಗೆ ದೊರೆತಿವೆ. ಉತ್ತಮ ಬರಹಗಾರರಾದ ಇವರು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಕ್ರಿಕೆಟ್ ಮತ್ತು ಜೈನ ಧರ್ಮದ ಕುರಿತು ಬಹಳಷ್ಟು ಕೃತಿಗಳನ್ನು ಹೊರತಂದಿದ್ದಾರೆ.

ಜೀವನದ ಸಂಜೆಯಲ್ಲಿರುವ ಇವರು ಅತೀವ ಉತ್ಸಾಹ ಹಾಗೂ ತಮ್ಮ ಸರಳ ಜೀವನಕ್ರಮಗಳಿಂದ ದೆಹಲಿಯ ಮಾತ್ರವಲ್ಲ ಕರ್ನಾಟಕದ ಹೆಮ್ಮೆಯ ಕನ್ನಡ ಕಣ್ಮಣಿಯಾಗಿದ್ದಾರೆ. ಕಠಿಣ ಪರಿಶ್ರಮ ಹಾಗೂ ಸದಾ ಕ್ರಿಯಾಶೀಲರಾಗಿ ಜೀವನದ ಹಲವು ಮಜಲುಗಳ ಎತ್ತರವನ್ನು ಏರಿರುವ ಧರ್ಮರಾಜ ಅವರು ಹೊಸ ತಲೆಮಾರಿಗೆ ಅಪೂರ್ವವಾದ ಆದರ್ಶ ವ್ಯಕ್ತಿಯಾಗಿದ್ದಾರೆ.

ಕನ್ನಡ ಸಂಸ್ಕೃತಿಗೆ ಜೈನರ ಕೊಡುಗೆ ಅಪಾರ. ಶಾಸನವೊಂದು ಕರ್ನಾಟಕವನ್ನು 'ಜಿನಧರ್ಮದ ಆಡುಂಬೊಲಂ' ಎಂದು ಕರೆದಿದೆ. ವಡ್ಡಾರಾಧನೆಯ ಶಿವಕೋಟ್ಯಾಚಾರ್ಯ, ಆದಿಪುರಾಣ, ವಿಕ್ರಮಾರ್ಜುನ ವಿಜಯಗಳನ್ನು ಬರೆದ ಆದಿಕವಿ ಪಂಪ, ಗದಾಯುದ್ಧವನ್ನು ಬರೆದ ರನ್ನ, ಶಾಂತಿಪುರಾಣದ ರನ್ನ, ಪಂಪ ರಾಮಾಯಣ ಪ್ರಸಿದ್ಧಿಯ ನಾಗಚಂದ್ರ, ಯಶೋಧರ ಚರಿತೆಯ ಜನ್ನ, ಭರತೇಶ ವೈಭವದ ರತ್ನಾಕರವರ್ಣಿ–ಮೊದಲಾದ ಕವಿಗಳು ಕನ್ನಡ ಕಾವ್ಯದ ಪ್ರಧಾನ ಚಿಂತನಾಕ್ರಮವೊಂದನ್ನು ಗಾಢವಾಗಿ ಪ್ರಭಾವಿಸಿದ್ದಾರೆ. ಶ್ರೀ ಧರ್ಮರಾಜರು ಈ ಶ್ರೇಷ್ಠ ಪರಂಪರೆಯನ್ನು ಸಮಕಾಲೀನಗೊಳಿಸ ಬಯಸುವ ವಿದ್ವಾಂಸ. ಅವರೊಡನೆ ಕುಳಿತರೆ ಸಮಯ ಹೋಗುವುದೇ ತಿಳಿಯದು. ವಡ್ಡಾರಾಧನೆಯಿಂದ ಭರತೇಶ ವೈಭವದ ತನಕ ಅಸ್ಖಲಿತವಾಗಿ ಮಾತಾಡಬಲ್ಲ ಅವರು ತಮ್ಮ ಅಮೋಘ ಕ್ರಿಕೆಟ್ ಕಾಮೆಂಟರಿ ಮೂಲಕ ದೇಶದ ಎಲ್ಲೆಡೆಯೂ ಪ್ರಸಿದ್ಧರಾಗಿದ್ದಾರೆ. ಇದು ಕನ್ನಡದ ಭಾಗ್ಯ.

❑ **ಬಾಲಕೃಷ್ಣ ನಾಯ್ಕ್ ಡಿ.**

(2005ರ ಫೆಬ್ರವರಿ ಅಭಿಮತ ಸಂಚಿಕೆಯಲ್ಲಿ ಪ್ರಕಟವಾದ ಈ ಲೇಖನವನ್ನು ಶ್ರೀ ಧರ್ಮರಾಜರ ಸ್ಮರಣಾರ್ಥ ಮರು ಪ್ರಕಟಿಸಿದ್ದೇವೆ–ಸಂಪಾದಕರು)

# ಹಿರಿಯ ಪತ್ರಕರ್ತ, ವಿದ್ವಾಂಸ ಎಂ.ಕೆ. ಧರ್ಮರಾಜ್ ಇನ್ನಿಲ್ಲ

ಎಂ.ಕೆ. ಧರ್ಮರಾಜ ಅವರ ನಿಧನದಿಂದ ದೇಶ ಒಬ್ಬ ವಿಶಿಷ್ಟ ಪತ್ರಕರ್ತ ಮತ್ತು ಜೈನ ವಿದ್ವಾಂಸನನ್ನು ಕಳೆದುಕೊಂಡಂತಾಗಿದೆ. ಧಾರ್ಮಿಕ ನೀತಿಗಳನ್ನು ಅಕ್ಷರಶಃ ಪಾಲಿಸಿದ ಓರ್ವ ಜೈನ ವಿದ್ವಾಂಸ ಅವರಾಗಿದ್ದರು.

ಐವತ್ತರ ದಶಕದ ಮಧ್ಯದಲ್ಲಿ ನಾನು ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋ ಸೇರಿದಂದಿನಿಂದ ಅವರನ್ನು ಅರಿಯುವ ಸುಯೋಗವು ನನಗೆ ದೊರಕಿತು. ಧರ್ಮರಾಜರು ಆಕಾಶವಾಣಿಯಲ್ಲಿ ಸುದ್ದಿಗಾರರಾಗಿದ್ದರು. ರಾಷ್ಟ್ರೀಯ ಬೆಳವಣಿಗೆಗಳಿಂದ ಹಿಡಿದು ಕ್ರೀಡಾ ಸುದ್ದಿಗಳವರೆಗೆ ಅವರು ರೇಡಿಯೋ ನ್ಯೂಸ್ ರೀಲ್ ವಿಭಾಗದಲ್ಲಿ ತನ್ನ ಸಹೋದ್ಯೋಗಿಗಳೊಂದಿಗೆ ರೇಡಿಯೋ ವರದಿ ತಯಾರಿಸುತ್ತಿದ್ದುದನ್ನು ಕಾಣಬಹುದಿತ್ತು.

ಅವರು ನನಗಿಂತ ಸುಮಾರು ಎರಡು ದಶಕ ಹಿರಿಯರಾಗಿದ್ದರು. ಅವರು ನನ್ನನ್ನು ಬಹಳ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದರು. ಅವರು ದಕ್ಷಿಣ ಕನ್ನಡದ ಕಾರ್ಕಳದವರು. ಮಂಗಳೂರಿನ ಸಂತ ಅಲೋಸಿಯಸ್ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿ ಅವರು ಮದರಾಸಿನ ಲಯೋಲಾ ಕಾಲೇಜಿನಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿ 1938ರಲ್ಲಿ ಪಾಸಾದವರು. ಆ ಕಾಲದಲ್ಲಿ ಅವರ ಸಹಪಾಠಿಗಳು ಇಂಡಿಯನ್ ಸಿವಿಲ್ ಸರ್ವಿಸ್ ಸೇರುತ್ತಿದ್ದರು. ಆದರೆ ಧರ್ಮರಾಜ ಅವರು ಆಕಾಶವಾಣಿಯಲ್ಲಿ ಉಪಸಂಪಾದಕರಾಗಿ ಸೇರಲು ನಿರ್ಧರಿಸಿದರು. ನಂತರ ವೃತ್ತಿಯನ್ನು ಬದಲಿಸಲು ಅವರೆಂದೂ ಯೋಚಿಸಲಿಲ್ಲ.

ಸಂಸತ್ತಿನ ಪ್ರಮುಖ ಚರ್ಚೆಗಳನ್ನು, ರಾಜಧಾನಿಯಲ್ಲಿ ನಡೆಯುತ್ತಿದ್ದ ಪ್ರಮುಖ ಸಮ್ಮೇಳನಗಳನ್ನು ನೋಡುತ್ತಾ ಅವರು ಅವುಗಳನ್ನು ವರದಿ ಮಾಡುತ್ತಿದ್ದರು. ಕ್ರೀಡೆಯಲ್ಲಿ ವಿಶೇಷ ಆಸಕ್ತಿ ಇದ್ದ ಅವರು ಆಕಾಶವಾಣಿಯಲ್ಲಿ ವಿಶೇಷ ಕ್ರೀಡಾ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಐವತ್ತರ ದಶಕದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾ ಕೂಟ ಮತ್ತು 1982 ರಲ್ಲಿ ನಡೆದ ಏಷಿಯಾಡ್ ಕ್ರೀಡಾಕೂಟಗಳ ಸಂದರ್ಭದಲ್ಲಿ ನಾನೂ ಅವರ ಜತೆ ಓಡಾಡಿದ್ದೆ. ಆಂಗ್ಲ ಭಾಷೆಯಲ್ಲಿ ನಿರರ್ಗಳವಾಗಿ ಮಾತಾಡಬಲ್ಲ ಧರ್ಮರಾಜ ಅವರು ಆರಂಭದ ವರ್ಷಗಳಲ್ಲಿಯೇ ಟೆಸ್ಟ್ ಕ್ರಿಕೆಟ್‌ಗಳಿಗೆ ಕಾಮೆಂಟರಿ ನೀಡುತ್ತಿದ್ದರು.

1971ರ ಭಾರತ–ಪಾಕಿಸ್ತಾನ ಸಮರದ ಸಮಯದಲ್ಲಿ ಆಕಾಶವಾಣಿಯ ಮೂಲಕ ಘಟನೆಗಳನ್ನು ಪ್ರಸ್ತುತ ಪಡಿಸಲು ನನಗೆ ಸಹಕರಿಸುತ್ತಿದ್ದರು. ಡಿಸೆಂಬರ್ 1971ರಲ್ಲಿ ಪಾಕಿಸ್ತಾನದ ಸೇನೆಯು ಡಾಕ್ಕಾದಲ್ಲಿ ಶರಣಾದ ಸಂದರ್ಭ ಇಂದಿರಾಗಾಂಧಿಯವರು ಸಂಸತ್ತಿನಲ್ಲಿ ಭಾಷಣ ಮಾಡಿದ ಸಮಯದಲ್ಲಿ ಅವರು ಅಲ್ಲಿದ್ದರು. ಅದಾದ ಕೂಡಲೇ ಅವರು ಸೇನಾ ಮುಖ್ಯಸ್ಥ ಜನರಲ್ ಸ್ಯಾಮ್ ಮಾಣೆಕ್ ಷಾ ಅವರ ಸಂದರ್ಶನವನ್ನು ರೆಕಾರ್ಡ್ ಮಾಡುತ್ತಿದ್ದರು. ಜನರಲ್ ಮಾಣೆಕ್ ಷಾ ಅವರಿಗೆ 1973ರಲ್ಲಿ ಫೀಲ್ಡ್ ಮಾರ್ಷಲ್ ಬಿರುದು ದೊರಕಿದಾಗ ಧರ್ಮರಾಜ ಅವರು ಮಾಣೆಕ್ ಷಾ ಅವರನ್ನು ಸಂದರ್ಶಿಸಿದ ನೆನಪು ನನಗಿದೆ.

ಆಕಾಶವಾಣಿಯ ಸುದ್ದಿ ಸೇವಾ ವಿಭಾಗದಲ್ಲಿ ನಾನು ಮುಖ್ಯಸ್ಥನಾದಾಗ ಧರ್ಮರಾಜ ಅವರು ನನಗೆ ಓರ್ವ ಉತ್ತಮ ಸಹೋದ್ಯೋಗಿಯಾಗಿ ದೊರೆತರು. ಅಮೃತಸರದ ಅಪರೇಶನ್ ಬ್ಲೂ ಸ್ಟಾರ್, ಇಂದಿರಾಗಾಂಧಿಯವರ ಹತ್ಯೆ, ನಂತರದ ಚುನಾವಣೆಗಳಿಗೆಲ್ಲಾ ನಾವಿಬ್ಬರೂ ಜತೆಜತೆಯಾಗಿಯೇ ಸಾಕ್ಷಿಯಾಗಿದ್ದೆವು.

ಧರ್ಮರಾಜರು ಓರ್ವ ಉತ್ತಮ ಅತಿಥೇಯರು ಕೂಡಾ. ಅವರ ಮನೆಯಲ್ಲಿ ಅವರ ಪತ್ನಿ ಲಕ್ಷ್ಮಿಮತಿಯವರಿಂದ ನನಗೆ ಮತ್ತು ನನ್ನ ಪತ್ನಿಗೆ ದೊರೆತ ಆದರಾತಿಥ್ಯಗಳನ್ನು ಎಂದೂ ಮರೆಯಲಾಗದು. ಓರ್ವ ಕಟ್ಟಾ ಜೈನರಾಗಿದ್ದ ಅವರು ಸೂರ್ಯಾಸ್ತಮಾನವಾಗುವುದಕ್ಕಿಂತ ಮುಂಚೆಯೇ ಆಹಾರ ಸೇವಿಸುತ್ತಿದ್ದರು. ಅವರ ಮಕ್ಕಳಾದ ಡಾ. ಸಿ.ಕೆ. ಬಲ್ಲಾಳ್ ಮಂಗಳೂರಿನಲ್ಲಿ ಪ್ರಸಿದ್ಧ ವೈದ್ಯರು, ರಾಜ ಬಲ್ಲಾಳ್ ದೆಹಲಿಯಲ್ಲಿ ವಕೀಲರಾಗಿ ಪ್ರಸಿದ್ದರು, ನಿವೃತ್ತ ಕ| ಎಸ್.ಕೆ. ಬಲ್ಲಾಳ್ ಗಢ್ವಾಲ್ ರೈಫಲ್‌ನಲ್ಲಿ ಸೇವೆ ಸಲ್ಲಿಸಿದವರು. ಅವರ ಮಗಳು ಡಾ. ಶ್ರೀಮಂಜಿರಿ ದೆಹಲಿ ವಿಶ್ವವಿದ್ಯಾಲಯದ ಮಿರಂಡಾ ಹೌಸ್‌ನಲ್ಲಿ ಪ್ರೊಫೆಸರ್ ಆಗಿದ್ದಾರೆ.

ಆಸ್ಕರ್ ಫರ್ನಾಂಡಿಸ್ ಅಧ್ಯಕ್ಷರಾಗಿರುವ ದೆಹಲಿಯ ಸೌತ್ ಕೆನರಾ ಕ್ಲಬ್‌ನ ಸ್ಥಾಪಕ ಸದಸ್ಯರಲ್ಲಿ ಅವರೊಬ್ಬರು. ಜಿಲ್ಲೆಯ ಯಕ್ಷಗಾನ ಮತ್ತು ಬಯಲಾಟಗಳನ್ನು ಅವರು ದೆಹಲಿಯಲ್ಲಿ ಬಹಳಷ್ಟು ಪ್ರೋತ್ಸಾಹಿಸಿದರು. ನವಂಬರ್ 2009 ರಲ್ಲಿ ಧರ್ಮಸ್ಥಳದಲ್ಲಿ ನಡೆದ ವಿಶ್ವ ತುಳು ಸಮ್ಮೇಳನದಲ್ಲಿ ನಮ್ಮಿಬ್ಬರನ್ನೂ ತುಳುಭಾಷೆಗೆ ನೀಡಿದ ಕೊಡುಗೆಗಾಗಿ ಸನ್ಮಾನಿಸಲಾಯಿತು.

ಪ್ರಶಸ್ತಿ ಪದವಿಗಳು ಧರ್ಮರಾಜರ ಹೆಗಲಿಗೆ ಭಾರವಾಗಿರಲಿಲ್ಲ.ಯುನೈಟೆಡ್ ಕಿಂಗ್‌ಡಂನಲ್ಲಿ ನಡೆದ ಜಾಗತಿಕ ಧಾರ್ಮಿಕ ಸಮ್ಮೇಳನದಲ್ಲಿ ಅವರನ್ನು ಗೌರವಿಸಿದುದು ಕೆಲವರಿಗಷ್ಟೇ ಗೊತ್ತು.

ಧರ್ಮರಾಜ ಅವರು ಜೈನ ಧರ್ಮದ ಆಸಕ್ತ ವಿದ್ಯಾರ್ಥಿಯಾಗಿದ್ದರು. ಶ್ರವಣ ಬೆಳಗೊಳ, ಕಾರ್ಕಳ, ಧರ್ಮಸ್ಥಳ ಮತ್ತು ಇತ್ತೀಚೆಗೆ ವೇಣೂರಿನಲ್ಲಿ ನಡೆದ ಮಸ್ತಕಾಭಿಷೇಕ ಕಾರ್ಯಕ್ರಮಗಳಲ್ಲಿ ಅವರು ತಪ್ಪದೇ ಪಾಲ್ಗೊಂಡಿದ್ದರು. ಅವರು ಬರೆದ ಪುಸ್ತಕ "ಇಂಡಿಯಾ ಇನ್ ವರ್ಲ್ಡ್ ಸ್ಪೋರ್ಟ್ಸ್" ಪಬ್ಲಿಕೇಶನ್ಸ್ ವಿಭಾಗದಿಂದ ಪ್ರಕಟವಾಗಿದೆ.

ಧರ್ಮರಾಜರ ನಿಧನದ ಮುಂಚಿನ ಶನಿವಾರ ಅವರನ್ನು ಭೇಟಿಯಾಗುವ ಸಂದರ್ಭ ನನಗೆ ದೊರಕಿತ್ತು. ಆರು ವರ್ಷಗಳಲ್ಲಿ ಅವರ ನೂರನೇ ಜನ್ಮದಿನವನ್ನು ಆಚರಿಸೋಣ ಎಂದಿದ್ದೆ ನಾನು. ಆದರೆ ಅವರಿನ್ನಿಲ್ಲ!

❑ **ಐ. ರಾಮಮೋಹನ ರಾವ್**

# ಹೊರನಾಡ ಕನ್ನಡಿಗರ ಹೆಮ್ಮೆ–ಹಿರಿಯ ವಿದ್ವಾಂಸ ಎಂ.ಕೆ. ಧರ್ಮರಾಜ್



ನಾನು 1998ರ ಜನವರಿ ತಿಂಗಳಲ್ಲಿ ದೆಹಲಿಗೆ ಬಂದಾಗ ನೇರವಾಗಿ ಹೋದದ್ದು ದೆಹಲಿ ಕರ್ನಾಟಕ ಸಂಘಕ್ಕೆ. ಹಳೆ ಕಟ್ಟಡದ ಕೆಳಗಿನ ಅಂಗಳದಲ್ಲಿ ಸಾಹಿತ್ಯ ಕಾರ್ಯಕ್ರಮವೊಂದು ನಡೆಯುತ್ತಿತ್ತು. ನಾನು ನೇರವಾಗಿ ಮೂರನೇ ಮಹಡಿಗೆ ಹೋದೆ. ಅಲ್ಲಿ ಸರವು ಕೃಷ್ಣ ಭಟ್ಟರು ಕುಳಿತಿದ್ದರು. ನಾನು ನನ್ನ ಹೆಸರು ಹೇಳಿಕೊಂಡಾಗ ಕುಳಿತಲ್ಲಿಂದ ಥಟ್ಟನೆ ಬಹಳ ಆದರ ಮತ್ತು ಗೌರವದಿಂದ ಎದ್ದು ಬಂದು 'ನಿಮ್ಮ ಹೆಸರು ಕೇಳಿದ್ದೆ, ದೆಹಲಿಗೆ ಸ್ವಾಗತ' ಎಂದು ಹೇಳಿದಾಗ ನಾನು ಕೆಲವು ದಿನ ಇರಲು ಸಂಘದಲ್ಲಿ ಅವಕಾಶ ಆದೀತೇ ಎಂದು ಕೇಳಿದೆ. ಆಗ ಅವರು ರೂಮುಗಳೆಲ್ಲ ಭರ್ತಿ ಆಗಿದೆ, ಆದರೆ ನಿಮಗೆ ಏನಾದರೂ ಮಾಡೋಣ ಎಂದು ಹೇಳಿ ಕೆಳಗಡೆಗೆ ಹೋಗಿ ಆಗ ಸಂಘದ ಕಾರ್ಯದರ್ಶಿಯಾಗಿದ್ದ ಡಾ. ವೆಂಕಟಾಚಲ ಹೆಗಡೆಯವರನ್ನು ಕರೆದುಕೊಂಡು ಮೇಲೆ ಬಂದರು. ಡಾ. ಹೆಗಡೆಯವರು ನನಗೆ ಅನುಕೂಲವಾದ ಒಂದು ವ್ಯವಸ್ಥೆ ಮಾಡಿ 'ಈ ವ್ಯವಸ್ಥೆ ಆಗುವುದಾದರೆ ನಿಮಗೆ ಎಷ್ಟು ದಿವಸ ಬೇಕೋ ಅಷ್ಟು ದಿವಸ ಇದ್ದುಕೊಳ್ಳಿ' ಎಂದು ಉದಾರವಾಗಿ ಅಂದುಬಿಟ್ಟರು. ನಾನು ಕೃಷ್ಣ ಭಟ್ಟರನ್ನು ದೆಹಲಿಯಲ್ಲಿ ಬಾಡಿಗೆಗೆ ಒಂದು ಮನೆ ಬೇಕು, ಸಹಾಯ ಮಾಡಿ ಎಂದು ಬೇಡಿಕೊಂಡೆ. ನಾಳೆಯಿಂದಲೇ ಕೆಲಸ ಸುರು ಮಾಡೋಣ, ನನ್ನ ಮನೆ ಪಶ್ಚಿಮ ವಿಹಾರದಲ್ಲಿದೆ, ನಾಳೆ ಅಲ್ಲಿಗೆ ಬನ್ನಿ' ಎಂದರು. ದೆಹಲಿ ಗೊತ್ತಿಲ್ಲದ ನಾನು ಸ್ವಲ್ಪ ಸಂಕೋಚ ಮಾಡಿದಾಗ, ಪರವಾಗಿಲ್ಲ, ನಾನೇ ಕಾರು ತರುತ್ತೇನೆ, ಒಟ್ಟಿಗೆ ಹೋದರಾಯಿತು ಎಂದರು. ನಾನು ಒಪ್ಪಿ ಕೊಂಡೆ.

ಮರುದಿನ ಭಟ್ಟರು ಅವರ ಹಳೆಯ ಅಂಬಾಸಡರ್ ಕಾರಿನೊಂದಿಗೆ ಹಾಜರಾದರು. ನನಗೆ ತೇಜಸ್ವಿ ನೆನಪಾಗತೊಡಗಿದರು. ಜೊತೆಗೆ ಕಾರು ಹೊರಡಿಸುತ್ತಿದ್ದ ಶಬ್ದ ಕೇಳಿ ನಾನು ಸ್ವಲ್ಪ ಹೆದರಿದೆನೆಂದರೆ ತಪ್ಪಾಗಲಾರದು. ತೀಕ್ಷ್ಣಮತಿಯಾಗಿದ್ದ ಭಟ್ಟರಿಗೆ ಅದು ಅರ್ಥವಾಯಿತು. ಅವರು ಬನ್ನಿ ಬನ್ನಿ ಇದು ಬೇಕಾದರೆ ಮಂಗಳೂರು ವರೆಗೆ ಓಡುತ್ತದೆ ಎಂದು ನನ್ನಲ್ಲಿ ಧೈರ್ಯ ತುಂಬಿ ಪಶ್ಚಿಮ ವಿಹಾರದ ಕಡೆ ಕಾರು ಓಡಿಸಿದರು. ನೇರ ಅವರ ಮನೆಗೆ ಕರೆದುಕೊಂಡು ಹೋಗಿ, ಪತ್ನಿ ಜಯಾ ಭಟ್ ಮತ್ತು ಅವರ ಮೂರು ಮಕ್ಕಳನ್ನೂ ಪರಿಚಯಿಸಿ, ನೀನು ಊಟಕ್ಕೆ ರೆಡಿ ಮಾಡು, ನಾನು ಮತ್ತು ಬಿಳಿಮಲೆಯವರು ಈಗ ಬರುತ್ತೇವೆ ಎಂದು ಹೇಳಿ ಕಾರನ್ನು ಮತ್ತೆಲ್ಲಿಗೋ ಓಡಿಸಿದರು. ಅವರ ಕಾರು ನಿಂತದ್ದು ಹಿರಿಯರಾದ ಶ್ರೀ ಧರ್ಮರಾಜ ಅವರ ಮನೆಯಲ್ಲಿ. ಅವರ ಪಕ್ಕದ ಮನೆಯಲ್ಲಿದ್ದ ಶ್ರೀ ಶಾರದಾಪ್ರಸಾದ್ ಅವರ ಮನೆ ತೋರಿಸಿದ ಶ್ರೀ ಭಟ್ಟರು ಅವರ ಮನೆಗೆ ಇನ್ನೊಮ್ಮೆ ಹೋಗೋಣ ಅಂತ ಹೇಳಿ ಧರ್ಮರಾಜ ಅವರ ಮನೆ ಹೊಕ್ಕರು.

ಹೀಗೆ ನಾನು ದೆಹಲಿಗೆ ಬಂದ ಎರಡನೇ ದಿವಸವೇ ನನಗೆ ಧರ್ಮರಾಜರ ಪರಿಚಯವಾಯಿತು. ಅವರ ಕ್ರಿಕೆಟ್ ಕಾಮೆಂಟರಿ ಕೇಳಿದ್ದ ನನಗೆ ಮುಂದೆ ಎಂದಾದರೂ ಅವರನ್ನು ಭೇಟಿಯಾದೇನು ಎಂಬ ಕನಸೂ ಕೂಡಾ ಬಿದ್ದಿರಲಿಲ್ಲ. ಅವರ ಮನೆ ತುಂಬಾ ಪುಸ್ತಕಗಳ ರಾಶಿ. ದೆಹಲಿಯಲ್ಲಿ ಹೀಗೆ ಕನ್ನಡ ಪುಸ್ತಕಗಳನ್ನು ಇಟ್ಟುಕೊಂಡವರು ಇರಬಹುದೆಂಬ ಕಲ್ಪನೆಯೂ ನನಗಿರಲಿಲ್ಲ. ಇಂಥವರ ಮನೆಗೆ ನನ್ನನ್ನು ಕರೆದುಕೊಂಡು ಬಂದ ಕೃಷ್ಣ ಭಟ್ಟರ ಬಗೆಗೆ ವಿಶೇಷವಾದ ಆದರವೂ ಉಂಟಾಯಿತು. (ಮುಂದೆ ಭಟ್ಟರು ಶಾರದಾ ಪ್ರಸಾದ್, ಶಾ ಬಾಲೂ ರಾವ್, ಐ ರಾಮಮೊಹನ ರಾವ್ ಮತ್ತು ಯು. ಪ್ರಭಾಕರ ರಾವ್ ಅವರನ್ನು ಪರಿಚಯಿಸಿದರು. ಆರಂಭಿಕ ಹಂತದ ಈ ಪರಿಚಯಗಳು ನಾನು ದೆಹಲಿಯನ್ನು ಬಹುವಾಗಿ ಪ್ರೀತಿಸುವಂತೆ ಮಾಡಿತು) ಧರ್ಮರಾಜರು ಮತ್ತು ಅವರ ಶ್ರೀಮತಿಯವರು ನನ್ನನ್ನು ಬಹಳ ಕಾಲದಿಂದ ಗೊತ್ತಿದ್ದವರ ಹಾಗೆ ಮಾತಾಡಿಸಿದರು. ಭಟ್ಟರಂತೂ ಅವರ ಮನೆಯ ಮಗನ ಹಾಗೆ ಇದ್ದರು. ಧರ್ಮರಾಜರು ಇದ್ದಕ್ಕಿದ್ದಂತೆ ಜೈನ ಸಾಹಿತ್ಯದತ್ತ ತಿರುಗಿಕೊಂಡರು. ಅದರಲ್ಲೂ ಮುಖ್ಯವಾಗಿ ಕನ್ನಡ ಜೈನ ಸಾಹಿತ್ಯ ಕೃತಿಗಳಿಗೆ ಮೂಲವಾದ ಪ್ರಾಕೃತ ಸಾಹಿತ್ಯದತ್ತ ನನ್ನ ಗಮನ ಸೆಳೆದರು. ಅದರಲ್ಲಿಯೂ ವಿಮಲಸೂರಿಯ 'ಪಉಮ ಚರಿತೆ (ಪದ್ಮ ಚರಿತೆ)ಯ ಅನೇಕ ಸಾಲುಗಳನ್ನು ಹೇಳುತ್ತಾ ಅದೆಂಥಾ ಅದ್ಭುತ ಲೋಕ ಎಂಬುದನ್ನು ನನಗೆ ಮನವರಿಕೆ ಮಾಡಿಕೊಟ್ಟರು. ನಾನು ಕನ್ನಡದಲ್ಲಿ ಎಂ.ಎ. ಪದವಿ ಪಡೆದಿರುವುದು ಹೌದಾದರೂ ನನಗೆ ಕನ್ನಡ ಜೈನ ಸಾಹಿತ್ಯಕ್ಕೆ ಮೂಲವಾಗಿದ್ದ ಪ್ರಾಕೃತ ಕೃತಿಗಳ ಬಗ್ಗೆ ಏನೇನೂ ತಿಳಿದಿರಲಿಲ್ಲ. ಧರ್ಮರಾಜರು ಅವುಗಳ ಬಗ್ಗೆ ತಿಳಿಸಿ ಹೇಳುವಾಗ ದೆಹಲಿಗೆ ಬಂದದ್ದು ಸಾರ್ಥಕ ಅನ್ನಿಸಿತು. ಮುಂದೆ ನಾವು ತುಳುನಾಡು ಡೆವೆಲಪ್‌ಮೆಂಟ್ ಫೋರಂ, ಸೌತ್ ಕೆನರಾ ಕ್ಲಬ್ ಮೊದಲಾದೆಡೆಗಳಲ್ಲಿ ಮತ್ತೆ ಮತ್ತೆ ಭೇಟಿ ಆಗುತ್ತಿದ್ದೆವು. ಹಾಗೆ ಭೇಟಿ ಆದಾಗಲೆಲ್ಲ ಅವರು ತುಳುನಾಡಿನ ಸಂಸ್ಕೃತಿಯ ಬಗೆಗೆ ಆಳವಾಗಿ ಮಾತಾಡುತ್ತಿದ್ದರು. ಮುಖ್ಯವಾಗಿ ತುಳು ಸಂಸ್ಕೃತಿಯ ರೂಪೀಕರಣದಲ್ಲಿ ಜೈನರು ವಹಿಸಿದ್ದ ಪಾತ್ರದ ಬಗ್ಗೆ ಅವರ ತಿಳುವಳಿಕೆ ಬಹಳ ವಿಶೇಷವಾಗಿತ್ತು. ಕಾರ್ಕಳ, ವೇಣೂರು ಮತ್ತು ಧರ್ಮಸ್ಥಳಗಳ ಬಗೆಗೆ ತುಂಬಾ ಭಾವುಕರಾಗಿ ಅವರು ಮಾತಾಡುತ್ತಿದ್ದಾಗ ಅವರ ಕಣ್ಣುಗಳಲ್ಲಿ ಕಾಂತಿ ಹೊಮ್ಮುತ್ತಿತ್ತು.

ಮುಂದೆ ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾದೆ. ಅದೇ ಕಾರಣವಾಗಿ ನಾನು ಬಗೆಬಗೆಯ ಕಿರುಕುಳಗಳನ್ನು ಹಿಂಸೆಯನ್ನೂ ಸಹಿಸಲೇಬೇಕಾಗಿತ್ತು. ಪ್ರಾಮಾಣಿಕವಾಗಿ ಕಳಕಳಿಯಿಂದ ನಾನು ಆಡುತ್ತಿದ್ದ ಮಾತುಗಳೆಲ್ಲ, ಮಾಡುತ್ತಿದ್ದ ಕೆಲಸಗಳೆಲ್ಲ ನನ್ನ ಕಣ್ಣೆದುರೇ ಅಪಹಾಸ್ಯಕ್ಕೆ ತುತ್ತಾಗುತ್ತಿದ್ದಾಗ ನಾನು ವಿಹ್ವಲಗೊಳ್ಳುತ್ತಿದ್ದೆ., ಕಂಗಾಲಾಗುತ್ತಿದ್ದೆ. ಅಂತಹ ಬಿಕ್ಕಟ್ಟಿನ ಕ್ಷಣಗಳಲ್ಲಿ ನನಗೆ ಸಾಂತ್ವನ ನೀಡುತ್ತಿದ್ದ ಕೆಲವು ಹಿರಿಯರಲ್ಲಿ ಧರ್ಮರಾಜರೂ ಒಬ್ಬರು. 'ಒಳ್ಳೆಯ ಕೆಲಸ ಆಗುತ್ತಿದೆ, ಎಷ್ಟೇ ಕಷ್ಟ ಆದರೂ ಕಟ್ಟಡದ ಕೆಲಸ ನಿಲ್ಲಿಸಬೇಡಿ, ಮೇಲೇಳುವ ಕಟ್ಟಡ ಒಮ್ಮೆ ನಿಂತರೆ, ಮತ್ತೆ ಮೇಲೆ ಬರುವುದು ಕಷ್ಟ' ಅಂತ ಅವರು ಮತ್ತೆ ಮತ್ತೆ ನನ್ನನ್ನು ಹುರಿದುಂಬಿಸುತ್ತಿದ್ದರು. ಅವರ ಮಾತುಗಳನ್ನು ಕೇಳಿ ನಾನು ಅವಮಾನಗಳನ್ನು ಮರೆಯುತ್ತಿದ್ದೆ. ಒಮ್ಮೆಯಂತೂ ಅವರು ಕೃಷ್ಣ ಭಟ್ಟರು ಅಂತ ತಿಳಿದು ನನ್ನೊಡನೆ ದೂರವಾಣಿಯಲ್ಲಿ ಮಾತಾಡುತ್ತಾ 'ಬಿಳಿಮಲೆ ಒಳ್ಳೆಕೆಲಸ ಮಾಡುತ್ತಿದ್ದಾನೆ, ಅವನು ವಿದ್ವಾಂಸ, ಅವನಿಗೆ ನೀನು ಸರಿಯಾದ ಸಹಕಾರ ನೀಡಬೇಕು' ಎಂದು ಹೇಳಿದಾಗ ನಾನು ನಾಚಿಕೊಂಡಿದ್ದೆ.

ಕಟ್ಟಡದ ಕೆಲಸವೆಲ್ಲ ಮುಗಿದು ಉದ್ಘಾಟನೆಯ ಸಂದರ್ಭ ಬಂದಾಗ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಮುಖ್ಯ ಅತಿಥಿಯಾಗಿ ಬರುವಂತೆ ಮಾಡುವಲ್ಲಿ ಧರ್ಮರಾಜರು ಸಹಕರಿಸಿದರು. ಶ್ರೀ ಹೆಗ್ಗಡೆಯರ ಜೊತೆಗೆ, ನ್ಯಾಯಮೂರ್ತಿ ಶಿವರಾಜ್ ಪಾಟೀಲ್, ಕರ್ನಾಟಕ ಬ್ಯಾಂಕಿನ ಅಧ್ಯಕ್ಷ, ಶ್ರೀ ಅನಂತಕೃಷ್ಣ ಮತ್ತು ಹಿರಿಯ ಕನ್ನಡತಿ ಡಾ. ಸರೋಜಿನಿ ಮಹಿಷಿ ಸೇರಿಕೊಂಡು ಆ ಕಾರ್ಯಕ್ರಮ ಅತ್ಯುತ್ತಮವಾಗಿ ನೆರವೇರಿತು. ಆ ರಾತ್ರಿ 12 ಗಂಟೆಯ ಸುಮಾರಿಗೆ ಧರ್ಮರಾಜರು ದೂರವಾಣಿಯಲ್ಲಿ ಮಾತಾಡಿ 'ದೇವರು ಒಳ್ಳೆಯದು ಮಾಡಲಿ' ಎಂದು ಹರಸಿದ್ದರು.

ಸಿಂಡಿಕೇಟ್ ಬ್ಯಾಂಕ್ ನವರು (ಶ್ರೀ ದೇವಾನಂದ ಉಪಾಧ್ಯಾಯ ಮತ್ತು ಬೊಳುವಾರು ಮಹಮ್ಮದ್ ಕುಂಞಿ ಅವರ ನೆರವು) ಮೂರು ಲಕ್ಷ ರೂಪಾಯಿಗಳನ್ನು ನೀಡಿ ಸಂಘದ ಎದುರು ಎರಡು ದ್ವಾರಪಾಲಕರನ್ನು ನಿಲ್ಲಿಸಲು ಅನುವು ಮಾಡಿಕೊಟ್ಟಿದ್ದರು. ಈ ದ್ವಾರಪಾಲಕರನ್ನು ಹೇಗೆ ಮತ್ತು ಯಾರು ತಯಾರು ಮಾಡಬೇಕೆಂಬ ಯೋಚನೆಯಲ್ಲಿ ಮಹಾಬಲಿಪುರಂ, ಶಿವಾರಪಟ್ಟಣ, ಶಿವಮೊಗ್ಗ, ಭುವನೇಶ್ವರ ಹೀಗೆ ಹಲವು ಕಡೆ ಸಂಪರ್ಕಿಸಿದಾಗ ಕಾರ್ಕಳದ ಕಡೆ ಯೋಚಿಸಿವಂತೆ ಮಾಡಿದವರು ಧರ್ಮರಾಜರು. ಕಾರಣ ದ್ವಾರಪಾಲಕರ ಉದ್ಘಾಟನೆಯ ಸಂದರ್ಭದಲ್ಲಿ ಅವರನ್ನು ವಿಶೇಷವಾಗಿ ಆಹ್ವಾನಿಸಿ, ಕೆ.ಎಸ್.ಜಿ. ಶೆಟ್ಟಿ ಅವರಿಗೆ ಅದರ ಜವಾಬ್ದಾರಿಯನ್ನು ವಹಿಸಿದ್ದೆ. ಧರ್ಮರಾಜರು ಬಂದಿದ್ದರು. ಹೊಯ್ಸಳ ವಾಸ್ತುಶಿಲ್ಪದ ಬಗ್ಗೆ ಮಾತಾಡಿದ್ದರು. ಸಂಘದ ಕಟ್ಟಡ ನೋಡಿ ಸಂತೋಷಪಟ್ಟಿದ್ದರು.

**ಧರ್ಮರಾಜರು ಹೊರನಾಡ ಕನ್ನಡಿಗರ ಮಾನ ಕಾಪಾಡಿದವರು. ಅವರಿಗೆ ನನ್ನ ಅಂತಿಮ ನಮನಗಳು.**

❑ **ಡಾ. ಪುರುಷೋತ್ತಮ ಬಿಳಿಮಲೆ**

# ಕನ್ನಡ ಪ್ರೇಮ ಜಾಗೃತಗೊಳಿಸಿದ ಆ ಜೀವ ಇನ್ನೆಲ್ಲಿ?

ತನ್ನ ಅಮೋಘ ಬ್ಯಾಟಿಂಗ್ ಶಕ್ತಿಯ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ವಿದ್ಯುತ್ ಸಂಚಾರವಾಗುವಂತೆ ಮಾಡಿದ್ದ ಆಸ್ಟ್ರೇಲಿಯಾದ ಮಾಜಿ ನಾಯಕ ಡಾನ್ ಬ್ರಾಡ್ಮನ್‌ರನ್ನು ಕ್ರಿಕೆಟ್ ಜಗತ್ತು ಎಂದಾದರೂ ಮರೆಯಲಿಕ್ಕುಂಟೇ? ಬ್ಯಾಟಿಂಗ್‌ನಲ್ಲಿ 99.94 ಸರಾಸರಿ ಹೊಂದಿದ್ದ ಬ್ಯಾಟಿಂಗ್ ಮಾಂತ್ರಿಕ ಬ್ರಾಡ್ಮನ್ ಪ್ರತಿಯೊಬ್ಬ ಕ್ರಿಕೆಟ್ ಅಭಿಮಾನಿಯ ಹೃದಯಕ್ಕೆ ಲಗ್ಗೆ ಹಾಕಿದ್ದವರು.

ಇಂತಹ ಒಂದು ಮಹಾನ್ ಶಕ್ತಿಯನ್ನು ಸಂದರ್ಶನ ಮಾಡಿದ ಮೊಟ್ಟ ಮೊದಲ ಭಾರತೀಯ ಯಾರೆಂಬುದು ಗೊತ್ತೇ? ಆ ವ್ಯಕ್ತಿ ಕರ್ನಾಟಕದವರು.

ಹೌದು, ಅವರೇ ಕನ್ನಡಿಗ ಎಂ.ಕೆ. ಧರ್ಮರಾಜ್. 1970ರಲ್ಲಿ ಭಾರತ ಕ್ರಿಕೆಟ್ ತಂಡ ಆಸ್ಟ್ರೇಲಿಯ ಪ್ರವಾಸಗೈದಿದ್ದ ಸಂದರ್ಭ. ದೂರವಾಣಿಯಲ್ಲಿ ಬ್ರಾಡ್ಮನ್ ಜೊತೆ ಮಾತನಾಡಿದ ಧರ್ಮರಾಜರು ತಾವು ಕೇಳಬಯಸುವ ಪ್ರಶ್ನೆಗಳ ಪಟ್ಟಿಯನ್ನು ನೀಡಿದ್ದರು. ಇದಕ್ಕೆ ಒಪ್ಪಿದ ಬ್ರಾಡ್ಮನ್, ಬಳಿಕ ದೂರವಾಣಿಯಲ್ಲೇ ಸಂದರ್ಶನ ನೀಡಿದ್ದರು. ಈ ಸಂದರ್ಶನ ಆಕಾಶವಾಣಿಯಲ್ಲಿ ಪ್ರಸಾರವೂ ಆಗಿತ್ತು. ಆ ಮೂಲಕ ಮೊದಲ ಬಾರಿಗೆ ಡಾನ್ ಬ್ರಾಡ್ಮನ್‌ರನ್ನು ಸಂದರ್ಶನ ಮಾಡಿದ ಮೊಟ್ಟಮೊದಲ ಭಾರತೀಯ ಧರ್ಮರಾಜ್ ಎಂಬುದು ಭಾರತದ ಇತಿಹಾಸದಲ್ಲಿ ದಾಖಲಾಯಿತು. ಇದು ಕನ್ನಡಿಗರ ಭಾಗ್ಯ.

ದಕ್ಷಿಣ ಕನ್ನಡದ ಕಾರ್ಕಳದಲ್ಲಿ 1918ರ ಸೆಪ್ಟಂಬರ್ 20ರಂದು ಜನಿಸಿದ ಧರ್ಮರಾಜ್, 1946ರಲ್ಲಿ ದೆಹಲಿಯ ಆಕಾಶವಾಣಿಯ ಉಪಸಂಪಾದಕರಾಗಿ ನೇಮಕಗೊಂಡರು. ಆಕಾಶವಾಣಿಯಲ್ಲಿ ಕನ್ನಡ ವಾರ್ತೆ ಮೊದಲ ಬಾರಿಗೆ ಪ್ರಸಾರವಾದಾಗ ಕನ್ನಡದಲ್ಲಿ ವಾರ್ತೆ ಓದುವುದು ಯಾರು ಎಂಬ ಪ್ರಶ್ನೆ ಉದ್ಭವಿಸಿತು. ಇಂಗ್ಲಿಷ್ ನ್ಯೂಸ್ ಸರ್ವಿಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಧರ್ಮರಾಜ್ ಮೂಲತಃ ಕನ್ನಡಿಗರಾಗಿದ್ದರಿಂದ ಮೊಟ್ಟಮೊದಲ ಬಾರಿಗೆ ವಾರ್ತೆಯನ್ನು ಕನ್ನಡದಲ್ಲಿ ಓದಿ ಇತಿಹಾಸ ಬರೆದರು. ಕನ್ನಡ ಸುದ್ದಿ ಸಂಪಾದನೆಯ ಎಲ್ಲಾ ಜವಾಬ್ದಾರಿಯನ್ನು ಧರ್ಮರಾಜ್‌ರಿಗೆ ವಹಿಸಲಾಗಿತ್ತು. ನಮ್ಮೂರಿನವ ಸುದ್ದಿ ಓದುತ್ತಿದ್ದಾನೆ ಎಂದಾಗ ಕಾರ್ಕಳದ ಜನರು ಪುಳಕಗೊಳ್ಳುತ್ತಿದ್ದರು. ಧರ್ಮರಾಜರ ಜೊತೆ ಮೈಸೂರಿನ ಗೋಪಾಲ ಶಾಸ್ತ್ರಿ ಎಂಬವರೂ ಕನ್ನಡ ವಾರ್ತೆಯ ಯಶಸ್ಸಿಗೆ ಕಾರಣರಾದರು. ಇಂದು ನಾವೆಲ್ಲರೂ ಕೇಳುತ್ತಿರುವ 'ಇಲ್ಲಿಗೆ ವಾರ್ತಾಪ್ರಸಾರ ಮುಕ್ತಾಯವಾಯಿತು' ವಾಕ್ಯವನ್ನು ಮೊದಲು ಪ್ರಯೋಗಿಸಿ, ಜನಮಾನಸದಲ್ಲಿ ನೆನಪುಳಿಯುವಂತೆ ಮಾಡಿದ್ದು ಇದೇ ಧರ್ಮರಾಜ್. ಬಹುಶಃ ಇಂದಿನ ಕನ್ನಡ ಪತ್ರಿಕೋದ್ಯಮ ಲೋಕಕ್ಕೆ ಧರ್ಮರಾಜರ ಪರಿಚಯ ಅಷ್ಟರಮಟ್ಟಿಗೆ ಇಲ್ಲದಿದ್ದರೂ, ಅವರು ನಡೆದ ದಾರಿ ಮಾತ್ರ ಎಲ್ಲರಿಗೂ ಮಾದರಿಯಾಗುವಂತಹದ್ದು.

ದೆಹಲಿಯಲ್ಲಿ ತಮ್ಮ ಮುಕ್ಕಾಲು ಪಾಲು ಜೀವನವನ್ನು ಕಳೆದ 95 ವಯಸ್ಸಿನ ಧರ್ಮರಾಜರು ಏಪ್ರಿಲ್ 25ರಂದು ವೃದ್ಧಾಪ್ಯದ ಕಾರಣದಿಂದಾಗಿ ಇಹಲೋಕ ತ್ಯಜಿಸಿದ್ದಾರೆ. ಆದರೆ ಅವರ ಹೆಜ್ಜೆ ಗುರುತುಗಳು ಅಳಿಸಿ ಹೋಗಲು ಸಾಧ್ಯವೇ ಇಲ್ಲ. ದೆಹಲಿಯ ಪ್ರತಿಯೊಬ್ಬ ಕನ್ನಡಿಗನೂ ನೆನಪಿಡುವಂತಹ ವ್ಯಕ್ತಿತ್ವ ಧರ್ಮರಾಜರದು.

ತಮ್ಮ ಕಾಲದ ಆದರ್ಶ ಪತ್ರಕರ್ತರಾಗಿ ಹೊರಹೊಮ್ಮಿದ್ದ ಧರ್ಮರಾಜರು, ರಾಜಧಾನಿ ದೆಹಲಿಯಲ್ಲಿ ಕನ್ನಡದ ಕಂಪು ಹರಿಯುವಂತೆ ಮಾಡಿದವರಲ್ಲಿ ಪ್ರಮುಖರು. ಇಂದು ದೆಹಲಿಯಲ್ಲಿ ಕರ್ನಾಟಕ ಸಂಘಗಳ ಮೂಲಕ ಕನ್ನಡ ಭಾಷಾ ಚಟುವಟಿಕೆಗಳು ಸಕ್ರಿಯವಾಗಿ ನಡೆಯುತ್ತಿವೆ ಎಂದರೆ ಅದಕ್ಕೆ ಧರ್ಮರಾಜರು ಹಾಕಿಕೊಟ್ಟಿದ್ದ ಭದ್ರ ಬುನಾದಿಯೇ ಕಾರಣ.

ಕ್ರೀಡಾ ಪತ್ರಕರ್ತರಾಗಿ ಹೆಚ್ಚು ಹೆಸರು ಮಾಡಿದ್ದ ಧರ್ಮರಾಜರು ಆಕಾಶವಾಣಿಗೆ ಇಂಗ್ಲಿಷ್ ಭಾಷೆಯ ಕ್ರಿಕೆಟ್ ಕಾಮೆಂಟೇಟರ್ ಆದ ಮೊದಲ ಕನ್ನಡಿಗನೂ ಹೌದು. ದೇವರಾಜ್‌ಪುರಿ ಎಂಬ ಸಹ ಕಾಮೆಂಟೇಟರ್ ಜೊತೆ ಕೆಲ ಟೆಸ್ಟ್ ಪಂದ್ಯಗಳು ಮತ್ತು ಬಹುತೇಕ ರಣಜಿ ಪಂದ್ಯಗಳಿಗೆ ಕಾಮೆಂಟರಿ ಹೇಳುತ್ತಿದ್ದ ಧರ್ಮರಾಜ್, 1982ರಲ್ಲಿ 'ಇಂಡಿಯಾ ಇನ್ ವರ್ಲ್ಡ್ ಸ್ಪೋಟ್ಸ್' ಎಂಬ ಕೃತಿ ರಚಿಸಿದರು.

ಧರ್ಮರಾಜರಿಗೆ ಕ್ರಿಕೆಟ್ ಎಂದರೆ ಹುಚ್ಚುಮೋಹ. ದೆಹಲಿಯ ಸಿಟಿ ಆಫ್ ಜಿಂಖಾನ ಕ್ಲಬ್‌ನ ನಾಯಕರಾಗಿದ್ದ ಅವರು, ಪ್ರತಿವರ್ಷ 'ಸಂಸದರ 11' V/s 'ದೆಹಲಿ ಜರ್ನಲಿಸ್ಟ್ 11' ತಂಡದ ನಡುವೆ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿದ್ದಾಗ ಪತ್ರಕರ್ತರ ತಂಡದ ನಾಯಕತ್ವ ವಹಿಸುತ್ತಿದ್ದರು. 1969ರಿಂದ 1973ರವರೆಗೆ ವಿದೇಶಿ ಕ್ರಿಕೆಟ್ ತಂಡಗಳು ಭಾರತ ಪ್ರವಾಸ ಕೈಗೊಂಡ ದಿನಗಳಲ್ಲಿ ವಿದೇಶಿ ತಂಡಗಳ ಭಾರತೀಯ ವ್ಯವಸ್ಥಾಪಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಧರ್ಮರಾಜರಿಗೆ ತವರು ನೆಲದ ಭಾಷೆ ಬಗ್ಗೆ ಅಪಾರ ಅಭಿಮಾನವಿತ್ತು. ಇಂಗ್ಲಿಷ್ ವಿದ್ಯೆ ಕಲಿಸುವ ದೊಡ್ಡ ಶಿಕ್ಷಣ ಸಂಸ್ಥೆಗಳು ದೆಹಲಿಯಲ್ಲಿದ್ದರೂ, 1962ರಲ್ಲಿ ಕನ್ನಡ ಶಾಲೆ ಆರಂಭವಾಗುತ್ತಿದ್ದಂತೆ ತನ್ನ ಇಬ್ಬರು ಮಕ್ಕಳಿಗೆ ಕನ್ನಡ ಕಲಿಸಲು ಮುಂದಾದರು.

ಕೆಲಸದ ವಿಚಾರ ಬಂದಾಗ ಧರ್ಮರಾಜರು ಶಿಸ್ತಿನ ಸಿಪಾಯಿ. ಕಛೇರಿ ಕೆಲಸಕ್ಕೆಂದು ಮೀಸಲಿಟ್ಟ ಎಚ್‌ಬಿ ಪೆನ್ಸಿಲ್‌ಗಳನ್ನು ಅವರ ಮಕ್ಕಳು ಡ್ರಾಯಿಂಗ್‌ಗೆಂದು ಬಳಸುವಂತಿರಲಿಲ್ಲ. 'ಪೆನ್ಸಿಲ್ ಬೇಕಿದ್ದರೆ ಹೊಸತು ಖರೀದಿಸಿ ತಂದುಕೊಡುತ್ತೇನೆ' ಎನ್ನುತ್ತಿದ್ದ ಅವರು ವಸ್ತುನಿಷ್ಠ ವರದಿಗಾರಿಕೆಯಿಂದಲೇ ಪ್ರಶಂಸೆಗೆ ಪಾತ್ರರಾಗಿದ್ದರು. ಸಂಸತ್ ವಾರ್ತೆಗಳ ವರದಿಗಾರನಾಗಿ ವಿಶೇಷ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಧರ್ಮರಾಜ್, ಮಾಜಿ ಪ್ರಧಾನಿ ಇಂದಿರಾಗಾಂಧಿ ಶ್ರೀಲಂಕಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಆಕಾಶವಾಣಿ ಪ್ರತಿನಿಧಿಯಾಗಿ ಇಂದಿರಾರ ಜೊತೆಗಿದ್ದರು.

ಆಕಾಶವಾಣಿ ವೃತ್ತಿ ಬಳಿಕ ಡೆಹರಾಡೂನ್‌ನಿಂದ ಪ್ರಕಟವಾಗುತ್ತಿದ್ದ 'ಹಿಮಾಚಲ್ ಟೈಮ್ಸ್' ಪತ್ರಿಕೆಗೆ ದೆಹಲಿ ಪ್ರತಿನಿಧಿಯಾಗಿ ದುಡಿದ ಧರ್ಮರಾಜ್ 1980ರಲ್ಲಿ ನಿವೃತ್ತಿ ಹೊಂದಿದರು.

ನಿವೃತ್ತಿ ಬಳಿಕ ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ ಶಿಕ್ಷಣ ಸಂಸ್ಥೆಯಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಆಕಾಶವಾಣಿಗೆ ವರದಿ ಮಾಡುವುದು ಹೇಗೆ ಹಾಗೂ ಕ್ರೀಡಾ ವರದಿಗಾರಿಕೆ ಹೇಗಿರಬೇಕು ಎಂಬೆಲ್ಲಾ ವಿಚಾರಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು.

ಧರ್ಮರಾಜರಿಗೆ ಮೂವರು ಪುತ್ರರು ಹಾಗೂ ಓರ್ವ ಪುತ್ರಿ ಇದ್ದಾರೆ. ಸೇನಾ ವೃತ್ತಿಯಿಂದ ನಿವೃತ್ತಿ ಹೊಂದಿರುವ ಪುತ್ರ ಎಸ್.ಕೆ. ಬಲ್ಲಾಳ್ ಹೇಳುವ ಪ್ರಕಾರ, 'ಓರ್ವ ಪತ್ರಕರ್ತನಾಗಿ ನನ್ನ ಅಪ್ಪ ಯಾವತ್ತೂ ಏಕಪಕ್ಷೀಯವಾಗಿ ಯೋಚಿಸುತ್ತಿರಲಿಲ್ಲ. ಅತಿರಂಜಿತ ವರದಿ ಮಾಡುವ ಜಾಯಮಾನವೂ ಅವರದಾಗಿರಲಿಲ್ಲ. ಒಂದು ವರ್ಗವನ್ನು ಪ್ರಚೋದಿಸುವ ಅಥವಾ ದುರುದ್ದೇಶಪೂರಿತ ಲೇಖನಗಳನ್ನು ಎಂದಿಗೂ ಬರೆಯುತ್ತಿರಲಿಲ್ಲ. ಪತ್ರಿಕೋದ್ಯಮ ಮಾರ್ಗಸೂಚಿಗಳನ್ನು ಶಿಸ್ತಿನಿಂದ ಅನುಸರಿಸುತ್ತಿದ್ದರು'.


ಜೈನ ತತ್ವಗಳನ್ನು ಮೈಗೂಡಿಸಿಕೊಂಡಿದ್ದ ಧರ್ಮರಾಜರು ಅಹಿಂಸಾ ಮಾರ್ಗಕ್ಕೆ ಶರಣಾಗಿದ್ದರು. 'ನಾನು ಸತ್ತ ಬಳಿಕ ನನ್ನ ಶವಕ್ಕೆ ಅಗ್ನಿ ಸ್ಪರ್ಶಿಸಿ ಸಂಸ್ಕಾರ ಮಾಡುವುದು ಬೇಡ' ಎಂದು ಮಕ್ಕಳಲ್ಲಿ ಹೇಳಿದ್ದ ಅವರು, ಶವಸಂಸ್ಕಾರಕ್ಕೆ ನೂರಾರು ಕಟ್ಟಿಗೆಗಳು ಬೇಕು. ಅದಕ್ಕಾಗಿ ಮರಗಳನ್ನು ಕಡಿಯಬೇಕು. ಒಂದು ಮರ ಬೆಳೆಯಲು 20 ವರ್ಷವಾದರೂ ಬೇಕಾಗುತ್ತದೆ ಎಂದಿದ್ದರು. ಅವರಿಚ್ಛೆಯಂತೇ ದೆಹಲಿಯ ಲೋಧಿ ಎಸ್ಟೇಟ್ ಬಳಿ ಇರುವ ವಿದ್ಯುತ್ ಚಿತಾಗಾರದಲ್ಲಿ ಅಂತಿಮ ಕಾರ್ಯಗಳನ್ನು ನೆರವೇರಿಸಲಾಯಿತು. ಇದು ಧರ್ಮರಾಜರ ಪರಿಸರ ಕಾಳಜಿಗೆ ಸಾಕ್ಷಿ.

1990ರ ದಶಕದಲ್ಲಿ ದೆಹಲಿಯಲ್ಲಿ ಮೊದಲ ಬಾರಿಗೆ ಜರುಗಿದ ಡಾ. ರಾಜ್‌ಕುಮಾರ್ ಅವರ ಹಾಡಿನ ಕಾರ್ಯಕ್ರಮ ಅದ್ದೂರಿ ಯಶಸ್ಸು ಕಾಣುವಲ್ಲಿ ಧರ್ಮರಾಜರ ಕೊಡುಗೆ ಮರೆಯುವಂತಿಲ್ಲ. ಸಿನಿಮಾಗಳ ಬಗ್ಗೆ ಹೆಚ್ಚು ತಿಳುವಳಿಕೆ ಇಲ್ಲದಿದ್ದರೂ, ಮಾಹಿತಿ ಸಂಗ್ರಹಿಸಿ ಕಾರ್ಯಕ್ರಮ ನಿರೂಪಕರಾದದ್ದೂ ಅಲ್ಲದೆ, ಅಚ್ಚುಕಟ್ಟಾಗಿ ಸಾಕಾರಗೊಳ್ಳುವಲ್ಲಿ ನೆರವಾದರು. ದೆಹಲಿ ಕರ್ನಾಟಕ ಸಂಘದಲ್ಲಿ ಮೊದಲ ಬಾರಿಗೆ ಇಂಗ್ಲಿಷ್ ಯಕ್ಷಗಾನ ಪರಿಚಯಿಸಿ, ಇತರ ಭಾಷಿಕರ ಮೆಚ್ಚುಗೆಗೆ ಪಾತ್ರರಾದರು.

ಮೊದಲ ಸಾರ್ವತ್ರಿಕ ಚುನಾವಣೆಯಿಂದ ಇಂದಿನವರೆಗೆ ಕರ್ನಾಟಕದ ಸಾಕಷ್ಟು ಸಂಸದರು ದೆಹಲಿಗೆ ಬಂದು ಹೋಗಿದ್ದಾರೆ. ಆದರೆ ಮಾಜಿ ಸಂಸದೆ, ಸಚಿವೆ ಸರೋಜಿನಿ ಮಹಿಷಿ ಬಿಟ್ಟರೆ ನಮ್ಮ ರಾಜ್ಯ, ಭಾಷೆ, ಸಂಸ್ಕೃತಿಯನ್ನು ರಾಜಧಾನಿಯಲ್ಲಿ ಪರಿಚಯಿಸಬೇಕು, ಕನ್ನಡಿಗರನ್ನು ಸಂಘಟಿಸಬೇಕೆಂಬ ಕಲ್ಪನೆ ಬೇರಾವ ಜನಪ್ರತಿನಿಧಿಗಳಿಗೂ ಬರಲೇ ಇಲ್ಲ. ಇಂತಹ ಕಷ್ಟಕರ ಸನ್ನಿವೇಶದಲ್ಲಿ ಕನ್ನಡಿಗರನ್ನು ಸಂಘಟಿಸಿದ ಖ್ಯಾತಿ ಶಾರದಾ ಪ್ರಸಾದ್, ಇನ್ನಾ ರಾಮಮೋಹನ ರಾವ್, ಎಂ.ಕೆ. ಧರ್ಮರಾಜ್ ಮತ್ತಿತರ ಬೆರಳೆಣಿಕೆಯ ವ್ಯಕ್ತಿಗಳಿಗೆ ಸಲ್ಲುತ್ತದೆ. 'ದೆಹಲಿ ಕನ್ನಡಿಗರ ಬಾಹುಬಲಿ' ಎಂಬ ಬಿರುದಿಗೆ ಪಾತ್ರರಾಗಿ, ಉದ್ಯೋಗ ಅರಸಿ ರಾಜಧಾನಿಗೆ ಕಾಲಿಟ್ಟ ಹತ್ತು ಹಲವು ಕನ್ನಡಿಗರಲ್ಲಿ ಭಾಷಾ ಪ್ರೀತಿಯನ್ನು ಜಾಗೃತಗೊಳಿಸಿದ ಆ ಜೀವ ಇನ್ನಿಲ್ಲವಲ್ಲ ಎಂಬುದೇ ಬೇಸರದ ಸಂಗತಿ.

❑ ರಾಘವ ಶರ್ಮ
ಕೃಪೆ : ವಿಜಯವಾಣಿ

# ಸಾಹಿತಿ ಕುಸುಮಾಕರ ದೇವರಗೆಣ್ಣೂರು ಕಾಲಲೀನ



ಕುಸುಮಾಕರ ದೇವರಗೇಣ್ಣೂರು ಕಾವ್ಯನಾಮದಲ್ಲಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಸಾಹಿತ್ಯ ಕೃಷಿ ನಡೆಸಿದ ಡಾ. ವಸಂತ ಅನಂತ ದಿವಾಣಜಿ (82) ಇನ್ನಿಲ್ಲ. 'ಸ್ವಪ್ನನೌಕೆ' (ಕವನ ಸಂಕಲನ), 'ನಾಲ್ಕನೆಯ ಆಯಾಮ' (ಕಾದಂಬರಿ), 'ದುರ್ದಮ್ಯ' (ಅನುವಾದ) ಮುಂತಾದ ಮಹತ್ವದ ಕೃತಿಗಳನ್ನು ಕನ್ನಡದ ಓದುಗರಿಗೆ ನೀಡಿದ ದೇವರಗೇಣ್ಣೂರು ಕಾಲನಲ್ಲಿ ಲೀನವಾಗಿದ್ದಾರೆ.

ಸುಮಾರು ಎರಡು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನಲ್ಲಿ ಏಪ್ರಿಲ್ 19ರಂದು ನಿಧನರಾದರು. ಕುಸುಮಾಕರ ಅವರು ಜನಿಸಿದ್ದು ವಿಜಾಪುರ ತಾಲ್ಲೂಕಿನ ದೇವರಗೇಣ್ಣೂರಿನಲ್ಲಿ, 1930ರ ಫೆಬ್ರವರಿ 15ರಂದು. ತಂದೆಯ ಹೆಸರು ಅನಂತ ದಿವಾಣಜಿ, ತಾಯಿ ನರ್ಮದಾ. ಮನೆಯಲ್ಲಿ ಕಡುಬಡತನ, ಆದರೆ ಕುಸುಮಾಕರ ಅವರ ಓದಿನ ಹಸಿವು ಅಪಾರ. ಇವರ ಪ್ರಾಥಮಿಕ ಶಿಕ್ಷಣ ದೇವರಗೇಣ್ಣೂರು, ಹೊಸೂರು, ಬಾಬಾನಗರ, ಬಿಜ್ಜರಗಿ, ಗಲಗಲಿಯಲ್ಲಿ ನಡೆಯಿತು.

ಕುಸುಮಾಕರ ಅವರು ವಿದ್ಯಾರ್ಥಿಯಾಗಿದ್ದಾಗ ಕಾವ್ಯದ ಅರ್ಥ ಹೇಳಿಸಿಕೊಳ್ಳುವ ಸಂದರ್ಭದಲ್ಲಿ ಕವಿ ದ.ರಾ. ಬೇಂದ್ರೆ ಅವರ ಪರಿಚಯ ಆಯಿತು. ಪರಿಚಯ ಗಾಢ ವಿಶ್ವಾಸಕ್ಕೆ ತಿರುಗಿತು. ಮುಂದಿನ ದಿನಗಳಲ್ಲಿ ಬೇಂದ್ರೆ ಇವರ ಪಾಲಿನ ಮಾರ್ಗದರ್ಶಕರಾದರು. ಸುಮಾರು 12 ವರ್ಷ ಬೇಂದ್ರೆಯವರೇ ಕುಸುಮಾಕರರನ್ನು ಸಲಹಿದರು.

ಬೇಂದ್ರೆ ಸೂಚನೆಯ ಮೇರೆಗೆ ಕುಸುಮಾಕರರು ಸೊಲ್ಲಾಪುರದ ದಯಾನಂದ ಕಾಲೇಜಿನಲ್ಲಿ ಕನ್ನಡದಲ್ಲಿ ಎಂ.ಎ. ಪದವಿ ಪಡೆದರು. ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದರು, ನಿವೃತ್ತಿಯವರೆಗೂ ಅಲ್ಲೇ ದುಡಿದರು.

'ಪುರಂದರ ದಾಸರ ಜೀವನ ಮತ್ತು ಕೃತಿ ಕುರಿತು ಅವರು ರಚಿಸಿದ ಮಹಾಪ್ರಬಂಧ 'ಪ್ರಸಾದ ಯೋಗ'ಕ್ಕೆ ಪಿಎಚ್.ಡಿ ಪದವಿ ದೊರೆತಿದೆ. ಕನ್ನಡದಲ್ಲಿ ಮಹತ್ವದ ಕೃತಿಗಳನ್ನು ರಚಿಸಿದ್ದರೂ, ದೂರದ ಸೊಲ್ಲಾಪುರದಲ್ಲಿ ನೆಲೆಸಿದ್ದ ಕಾರಣ, ಕನ್ನಡದ ಸಾಮಾನ್ಯ ಓದುಗರಿಗೆ ಅವರು ಅಜ್ಞಾತರಾಗಿಯೇ ಉಳಿದರೇನೋ ಎಂಬ ಪ್ರಶ್ನೆ ಕಾಡುತ್ತದೆ' ವಿಮರ್ಶಕರನ್ನು ಕಾಡಿದೆ.

ಅವರ ಎಲ್ಲ ಕೃತಿಗಳನ್ನು ಪ್ರಕಟಿಸಿರುವವರು ಮುಂಬೈನಲ್ಲಿ ವೈದ್ಯರಾಗಿರುವ ಸಹೋದರ ಪ್ರಹ್ಲಾದ್ ದಿವಾಣಜಿ ಅವರು. ಕುಸುಮಾಕರರ ಬದುಕು–ಬರಹ ಕುರಿತು ಎಚ್‌ಎಸ್‌ಆರ್ ಸಂಪಾದಕತ್ವದಲ್ಲಿ 'ಅವಗಾಹ' ಎಂಬ ಪುಸ್ತಕ ಪ್ರಕಟವಾಗಿದೆ. 'ಸರಸ್ವತಿ ಸಮ್ಮಾನ್' ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರ ಬರಹ, ರಹಮತ್ ತರೀಕೆರೆ ಅವರು ನಡೆಸಿದ ಸಂದರ್ಶನ ಮತ್ತಿತರ ಬರಹಗಳು ಈ ಪುಸ್ತಕದಲ್ಲಿವೆ.

ಕುಸುಮಾಕರ ಅವರ ಸಾಹಿತ್ಯದ ಕುರಿತು ಸಮೀಕ್ಷೆ ನಡೆಸಿರುವ ಡಾ.ಜಿ.ಎನ್. ಉಪಾಧ್ಯ ಅವರು 'ಬೊಗಸೆ ತುಂಬ ಭಕ್ತಿ ಹಿಡಿದು' ಎಂಬ ಪುಸ್ತಕ ಹೊರತಂದಿದ್ದಾರೆ.

ಪ್ರಮುಖ ಕೃತಿಗಳು : ಸ್ವಪ್ನ ನೌಕೆ (1954, ಕವನ ಸಂಕಲನ), ಮುಗಿಯದ ಕಥೆ (1965, ಕಾದಂಬರಿ), ನಾಲ್ಕನೆಯ ಆಯಾಮ (1966, ಕಾದಂಬರಿ), ನಿರಿಂದ್ರಿಯ (1993, ಕಾದಂಬರಿ), ಪರಿಘ (1995, ಕಾದಂಬರಿ), ಬಯಲು–ಬಸಿರು (2005, ಕಾದಂಬರಿ. ಇದು ಮರಾಠಿ ಮತ್ತು ಇಂಗ್ಲಿಷ್‌ಗೆ ಅನುವಾದಗೊಂಡಿದೆ), ದುರ್ದಮ್ಯ (1998, ಮರಾಠಿಯಿಂದ ಕನ್ನಡಕ್ಕೆ ಅನುವಾದ), ಪ್ರಸಾದ ಯೋಗ (ಸಂಶೋಧನಾ ಪ್ರಬಂಧ, 1972), ಗಾಳಿ ಹೆಜ್ಜೆ ಹಿಡಿದ ಸುಗಂಧ (2001, ಬೇಂದ್ರೆ ಕುರಿತ ಪುಸ್ತಕ), ತುಂಬಿ ಬರದ ಪೊಳ್ಳು (ಕಥೆ), 2002ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಮುಂಬೈನ ಬಿಲ್ಲವ ಸಮಾಜ ನೀಡುವ 'ನಾರಾಯಣಗುರು ಪ್ರಶಸ್ತಿ' ಇವರಿಗೆ ಲಭಿಸಿವೆ.

**ಅಗಲಿದ ಹಿರಿಯ ಚೇತನ ಕುಸುಮಾಕರ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.**

# ಜನಕಪುರಿ ಕನ್ನಡ ಕೂಟದ ನೂತನ ಕಾರ್ಯಕಾರಿ ಸಮಿತಿಯ ಆಯ್ಕೆ



ಎಸ್.ಎಲ್. ಭಂಡಾರ್‌ಕರ್



ಶ್ರೀನಾಥ್ ಎನ್.ಆರ್



ಎಂ.ವಿ. ವೆಂಕಟೇಶ್

ಏಪ್ರಿಲ್ 22ರಂದು ಜನಕಪುರಿ ಕನ್ನಡ ಕೂಟದ ಸರ್ವ ಸದಸ್ಯರ ಸಭೆಯಲ್ಲಿ 2012–14ರ ನೂತನ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಚುನಾವಣಾ ಅಧಿಕಾರಿ ಶ್ರೀ ಹಿಮಕರ್ ಅವರ ನೇತೃತ್ವದಲ್ಲಿ ನೇಮಕಗೊಂಡ ನೂತನ ಸಮಿತಿ ಇಂತಿದೆ.

ಅಧ್ಯಕ್ಷರು–ಎಸ್.ಎಲ್. ಭಂಡಾರ್‌ಕರ್, ಉಪಾಧ್ಯಕ್ಷರು–ಹರಿಚರಣ್ ಕಾಮತ್, ಕಾರ್ಯದರ್ಶಿ–ಶ್ರೀನಾಥ್ ಎನ್.ಆರ್. ಖಜಾಂಚಿ–ಎಂ.ವಿ. ವೆಂಕಟೇಶ್, ಜಂಟಿ ಕಾರ್ಯದರ್ಶಿ–ಭಾಗ್ಯಶ್ರೀ ಪ್ರಭಾಕರ್

ಸದಸ್ಯರುಗಳಾಗಿ : ಮೋಹಿನಿ ರೈ, ಡಾ. ಅಶೋಕ್ ಎಂ.ಈಟಿ, ಶೇಷಗಿರಿ ನಾಯಕ್, ಮೀನಾ ಶ್ರೀಧರ್, ಬಸವರಾಜ್ ಹಾಗು ಜಗದೀಶ್.

ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಜನಕಪುರಿ ಮಹಿಳಾ ಮಂಡಳಿಯವರು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಿ ನೆರೆದಿದ್ದ ಸಭಿಕರನ್ನು ಮನರಂಜಿಸಿದರು. ಉತ್ಸಾಹದಿಂದ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯ ಅವರು ಕೂಟಕ್ಕೆ ನೀಡಿದ ನಿರಂತರ ಕೊಡುಗೆಗಾಗಿ ಅಭಿನಂದಿಸಲಾಯಿತು.

❑ **ಶ್ರೀನಾಥ್ ಎನ್.ಆರ್. ಕಾರ್ಯದರ್ಶಿ**



# Choose Variety of Home Styles

## PREMIER METROPOLIS
JAYALAKSHMIPURAM, MYSORE



For specification and availability Call: 99452 48904
E-mail: projects@premierpropertiesindia.com

The unique residential apartments, each floor designed with comfort and convenience in mind. Close proximity to a selection of lifestyle amenities including educational institutions, medical care and essential shopping center, restaurants and transport makes most livable apartment in Mysore.

## PREMIER REDWOOD
LALITHA MAHAL ROAD, MYSORE



For specification and availability Call: 99450 22311
E-mail: redwood@premierpropertiesindia.com

PREMIER PROPERTIES
PROMOTERS - DEVELOPERS - BUILDERS
# 2270/1, 'Chittaranjan Mahal',
Vinoba Road, Jayalakshmipuram, Mysore - 570 012
www.premierpropertiesindia.com

MEMBER
CREDAI

• APARTMENTS • VILLAS • MALL • WATER FRONT PROPERTIES

# Saujanya Printing Press

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**


ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಬೊಳುವಾರರ 'ಸ್ವಾತಂತ್ರ್ಯದ ಓಟ' ಮಹಾ ಕಾದಂಬರಿ



**ಮುಸ್ಲಿಂ ಬದುಕನ್ನು ಕನ್ನಡ ಗದ್ಯ ಸಾಹಿತ್ಯಕ್ಕೆ ಪರಿಚಯಿಸಿದ ಮೊಟ್ಟ ಮೊದಲ ಕಥೆಗಾರರಾದ ಬೊಳುವಾರು ಮಹಮದ್ ಕುಂಞಿ ಅವರ 'ಸ್ವಾತಂತ್ರ್ಯ ಓಟ' ಮಹಾ ಕಾದಂಬರಿ ಕಳೆದ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ಬಿಡುಗಡೆಯಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2010), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬೊಳುವಾರು ಅವರ ಈ ಮಹಾಕಾದಂಬರಿ ಈಗಾಗಲೇ ಕನ್ನಡ ಸಾಹಿತ್ಯ ವಿಮರ್ಶಾವಲಯದಲ್ಲಿ ಉತ್ತಮ ಪ್ರಶಂಸೆಯನ್ನು ಗಳಿಸಿದೆ. ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿ ಕೆಲಕಾಲ ದೆಹಲಿಯಲ್ಲಿ ವಾಸವಾಗಿದ್ದ ಬೊಳುವಾರು ಅವರು ಸಂಘದ ಆಜೀವ ಸದಸ್ಯರು ಹಾಗೂ ದೆಹಲಿಯ ಕನ್ನಡಿಗರಿಗೆ ಚಿರಪರಿಚಿತರು. ಕೃತಿ ಬಿಡುಗಡೆ ಸಮಾರಂಭದಂದು ಖ್ಯಾತ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅವರು ಮಾಡಿದ ಭಾಷಣದ ಆಯ್ದ ಭಾಗ ನಿಮಗಾಗಿ. . .**



ನಮ್ಮ ಸಾಮಾಜಿಕ ಸಂದರ್ಭದಲ್ಲಿ ಇದು ಒಂದು ಮುಖ್ಯ ಘಟನೆ. ಓಟ ಎಂಬುದಕ್ಕೆ ಹಲವು ಅರ್ಥಗಳಿವೆ. ಅದು ಕೇವಲ ಸ್ವಾತಂತ್ರ್ಯವನ್ನು ಸೆಲೆಬ್ರೇಟ್ ಮಾಡಲು ನಡೆಸುವ ಗುರಿಯಿರದ ಓಟವಲ್ಲ. ಅದು ಜೀವ ಉಳಿಸಲು, ಯಾರಿಂದಲೋ ತಪ್ಪಿಸಿಕೊಂಡು ನಡೆಸುವ ಪಲಾಯನವೂ ಹೌದು. ಬೇರೆ ದೇಶದಿಂದ ಇಲ್ಲಿಗೆ ಬಂದವರು ಮಾತ್ರವಲ್ಲ, ನಮ್ಮ ನಾಡಿನಲ್ಲಿಯೇ ಹುಟ್ಟಿಬೆಳೆದ, ಇದು ಯಾರ ಮೇಲೆ ಚಿಮ್ಮಿದ ಮತ್ತೆ ಸೇರುವ ಮಣ್ಣಾಗಿದೆಯೋ ಅಂತಹ ಕೋಟ್ಯಂತರ ಮುಸ್ಲಿಮರು ಕೂಡಾ, ಸಿಡಿಮದ್ದಿನ ಗುಡಾಣದೊಳಗೆ ಇದ್ದಂತೆ ಬದುಕಬೇಕಾದ ಸ್ಥಿತಿಯಿದೆ. ಈ ಕಾದಂಬರಿಯ ನಾಯಕನಾದ ಚಾಂದಜ್ಜನ ಕೊನೆಮೊದಲಿಲ್ಲದ ಆತಂಕ ಅವರೆಲ್ಲರದೂ ಆಗುತ್ತಿದೆ. ಹಾಗೆ ನೋಡಿದರೆ, ಇದು ಒಂದು ದೇಶದ, ಒಂದು ಸಮುದಾಯದ ಕತೆ ಅಲ್ಲ. ಪ್ರಪಂಚದ ಎಲ್ಲ ದೇಶಗಳಲ್ಲೂ ಕೂಡ ಹೀಗೆಯೇ ಸ್ವಾತಂತ್ರ್ಯ ಎನ್ನುವುದು, ಸವಿಯುವ ಸಂಗತಿಯಾಗದೆ ಹೆದರುವ ಸಂಗತಿಯಾಗಿದೆ. ಅದು ಯಾರನ್ನು ಯಾಕೆ, ಹೇಗೆ ಕಾಡುತ್ತದೆ, ಹೇಗೆ ಕೊಲ್ಲುತ್ತದೆ ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಕಾದಂಬರಿ ಹುಡುಕುತ್ತದೆ. ಈ ಹುಡುಕಾಟದ ಸಾಮಾಜಿಕ ನೆಲೆಗಳು ಮತ್ತು ವೈಯಕ್ತಿಕ ನೆಲೆಗಳು ಇಲ್ಲಿ ಹದವಾಗಿ ಬೆರೆತುಕೊಂಡಿವೆ.

ಮುತ್ತುಪ್ಪಾಡಿ ಎನ್ನುವ ಹಳ್ಳಿ, ಬೊಳುವಾರರ ಕಲ್ಪನೆಯಲ್ಲಿ ಮೂಡಿಬಂದ ಹಳ್ಳಿ ಮಾತ್ರವಲ್ಲ ಅದಕ್ಕೆ ನಿಜವಾದ ಹಳ್ಳಿಯಾಗಿಯೂ ಅಸ್ತಿತ್ವದ ಸಾಧ್ಯತೆಗಳಿವೆ. ಮುತ್ತುಪ್ಪಾಡಿಯು, ಎಲ್ಲ ಹಿನ್ನೆಲೆಗಳಿಂದ ಬಂದವರು ಕೂಡ ಪರಸ್ಪರ ಅರ್ಥಮಾಡಿಕೊಳ್ಳುವ, ಎಡವಿಬೀಳುವ ಮತ್ತು ಸರಿಪಡಿಸಿಕೊಳ್ಳುವ, ತಾತ್ಕಾಲಿಕ ದ್ವೇಷವನ್ನು, ಅಂತೆಯೇ ಶಾಶ್ವತವಾದ ಪ್ರೀತಿಯನ್ನು, ಕಾಪಾಡಿಕೊಂಡು ಬರುವ ಹಳ್ಳಿಯಾಗಿದೆ. ಆದರೆ, ಈಗ ಇಂಥ ಹಳ್ಳಿ ನಮ್ಮ ನಡುವೆ ಇರಲು ಸಾಧ್ಯವೇ ಇಲ್ಲ ಅಂತ ಅನ್ನಿಸುವ ಸನ್ನಿವೇಶ ಬಂದಿದೆಯೇ? ಬಂದಿದ್ದರೆ, ಅದಕ್ಕೆ ಇರುವ ಕಾರಣಗಳು ಯಾವುವು? ಒಂದು ಪಕ್ಷ ಅಂತಹ ಹಳ್ಳಿಗಳು ಈಗಲೂ ಇದ್ದರೆ, ಅವು ಭವಿಷ್ಯದಲ್ಲಿಯೂ ಉಳಿಯುವ ಬಗೆ ಎಂತು? ಒಂದು ಸಾಧ್ಯತೆ ಎಂದರೆ, ಮುತ್ತುಪ್ಪಾಡಿ ಕೂಡ ಈ ದೇಶದ ಅನೇಕ ಹಳ್ಳಿಗಳಂತೆ ಬದಲಾಗುವುದು. ಎಲ್ಲ ಹಳ್ಳಿಗಳು ಮುತ್ತುಪ್ಪಾಡಿಯಂತೆ ಒಳ್ಳೆಯದಾಗಿಬಿಡುವುದು ಇನ್ನೊಂದು ಸಾಧ್ಯತೆ. ಎರಡನೆಯ ಸಾಧ್ಯತೆಯಿಂದ ನಾವು ದೂರ ಹೋಗುತ್ತಾ ಇದ್ದೇವಾ ಎನ್ನುವ ಪ್ರಶ್ನೆಗಳು ಈ ಕಾದಂಬರಿಯನ್ನು ಓದುವಾಗ ನಮ್ಮನ್ನು ಕಾಡುತ್ತದೆ. ಮುತ್ತಪ್ಪಾಡಿಯು ಕಾದಂಬರಿಕಾರನ ಅಪೇಕ್ಷೆಯೋ ಅಥವಾ ಭಾರತದ ವಾಸ್ತವವೋ?

ಇಂತಹ ಕಾದಂಬರಿಗಳ ರಚನೆ ಕನ್ನಡದ ಮಟ್ಟಿಗೆ ಹೊಸತು ಎಂದು ನಾನು ಅಂದುಕೊಂಡಿದ್ದೇನೆ. ಇಂಗ್ಲಿಷ್ ಭಾಷೆಯಲ್ಲಿ ಡಾಕ್ಯುಡ್ರಾಮಾ, ಡಾಕ್ಯುಫಿಕ್ಷನ್ ಎಂಬ ಹೆಸರಿನ ಹಲವು ಬರವಣಿಗೆಗಳು ಸಿಗುತ್ತವೆ. ಅವೆಲ್ಲವೂ ಒಂದು ಕಡೆ ಚರಿತ್ರೆಯನ್ನು, ಒಂದು ಕಡೆ ವಾಸ್ತವವನ್ನು ಕಟ್ಟಿಕೊಡುತ್ತಾ, ರೋಚಕವಾಗಿ ಮನಸೆಳೆಯುವ, ಭಾವುಕ ನಿರೂಪಣೆಯನ್ನು ಬಳಸಿಕೊಂಡು ಕಥೆ ಯಾವುದು, ಚರಿತ್ರೆ ಯಾವುದು ಎನ್ನುವ ಸಂಗತಿಯನ್ನು ಮಸುಕುಮಾಡುತ್ತವೆ. ಆದರೆ, ಬೊಳುವಾರು ಅವರು ಆ ಮಾರ್ಗವನ್ನು ಅನುಸರಿಸುತ್ತಲೇ, ಕೃತಿಯ ಒಳಗೆ ಮತ್ತು ಹೊರಗೆ, ಮನುಸ್ಯನನ್ನು ಕುರಿತು, ಸಮುದಾಯಗಳನ್ನು ಕುರಿತು ಒಂದು ನಿರ್ದಿಷ್ಟ ತಿಳಿವಳಿಕೆ / ನಿಲುವುಗಳ ಜೊತೆಗೆ ವೈಚಾರಿಕ ಸಂಘರ್ಷವನ್ನೂ ಇಟ್ಟುಕೊಂಡು ಬರೆದಿದ್ದಾರೆ. ಆದ್ದರಿಂದಲೇ, ವೈಚಾರಿಕತೆ–ಕಲಾತ್ಮಕತೆಗಳನ್ನು ಮಸುಕುಮಾಡದೆಯೂ ಅನ್ಯ ಭಾಷೆಗಳಲ್ಲಿ ಬಂದಿರುವ ಹಲವಾರು ಉತ್ತಮ ಬರಹಗಳ ಆಕರ್ಷಣೆ ಮತ್ತು ಓದಿಸಿಕೊಂಡು ಹೋಗುವ ಗುಣವನ್ನು ಉಳಿಸಿಕೊಂಡಿದ್ದಾರೆ. ಕನ್ನಡ ಓದುಗರು ಗಂಭೀರವಾದ ಮತ್ತು ದೀರ್ಘವಾದ ಓದುವಿಕೆಯಿಂದ ವಿಮುಖರಾಗುತ್ತಿದ್ದಾರೆ ಎಂದು ಅನ್ನಿಸತೊಡಗಿದಾಗ, ಓದುಗರನ್ನು ಮತ್ತೆ ಓದಿನ ಕಡೆಗೆ ತರುವುದು ಹೇಗೆ ಎಂಬುದು ಕಳೆದ 5–6 ವರ್ಷಗಳಿಂದ ನಮ್ಮ ಸಂಸ್ಕೃತಿಯನ್ನು ಕಾಡುತ್ತಿರುವ ಪ್ರಶ್ನೆ. ಈ ಪ್ರಶ್ನೆಗೆ 'ಡಾಕ್ಯುಡ್ರಾಮಾ' ಮತ್ತು 'ಡಾಕ್ಯುಫಿಕ್ಷನ್'ನ ಕಲ್ಪನೆಯ ಮೂಲಕ ಬೊಳುವಾರು ಒಂದು ಉತ್ತರವನ್ನು ಕಂಡುಕೊಂಡಿದ್ದಾರೆ.

ಕಳೆದ 10–15 ವರ್ಷಗಳಲ್ಲಿ ಕನ್ನಡದಲ್ಲಿ ಬಂದ ಕೆಲವು ಮುಖ್ಯವಾದ ಮತ್ತು ಸುದೀರ್ಘವಾದ ಕಾದಂಬರಿಗಳ ಸಮಸ್ಯೆ ಏನೆಂದರೆ, ಅವು ಪ್ರಾದೇಶಿಕ ಭಾಷೆಯಲ್ಲಿ ರಚಿತವಾಗಿರುವುದು. ಕನ್ನಡದ ಮನಸ್ಸುಗಳು ಆ ರೀತಿಯ ಪ್ರಾದೇಶಿಕತೆಯನ್ನು ಒಳಗೊಳ್ಳುವುದಕ್ಕೆ ಅಗತ್ಯವಾದ ಬಹುರೂಪೀ ಶಿಕ್ಷಣವನ್ನು ಪಡೆಯುತ್ತಿಲ್ಲ. ಆದ್ದರಿಂದಲೇ ನಮ್ಮ ಓದು, ಅನ್ಯವನ್ನು ಒಳಗೊಳ್ಳುವ ಬದಲು ಹೊರಗಿಡುತ್ತದೆ. ಗುಲ್ಬರ್ಗಾದ ಭಾಷೆ ಇರಬಹುದು, ಬಳ್ಳಾರಿಯ ಭಾಷೆ ಇರಬಹುದು. ಅದನ್ನು ಯಾರೋ ನಾಲ್ಕು ಜನ ಕಷ್ಟಪಟ್ಟುಕೊಂಡು ಹಲ್ಲು ಕಚ್ಚಿಕೊಂಡು ಓದಿ ನಮ್ಮದನ್ನಾಗಿ ಮಾಡಿಕೊಂಡ ತಕ್ಷಣ, ಅದು ಸಮುದಾಯದ ಎಲ್ಲರನ್ನೂ ತಲುಪುತ್ತದೆ ಅಂತ ಹೇಳಲು ಕಷ್ಟವಾಗುತ್ತದೆ. ಅದು ಚೆನ್ನಾಗಿದೆ ಎಂದು ಹೇಳಬಹುದು; ಮೆಚ್ಚಬಹುದು ಕೂಡ. ಆದರೆ, ಅದಕ್ಕೆ ಓದಿನ ಗೌರವ ಸಿಗುವುದಿಲ್ಲ. ಹೀಗೆಂದರೆ ಪ್ರಾದೇಶಿಕ ಭಾಷೆಯನ್ನು ಬಳಸಬಾರದು ಎಂದು ಅರ್ಥವಲ್ಲ. ಅಂತಹ ವೈವಿಧ್ಯಗಳು ಎಲ್ಲರಿಗೂ ತಲುಪಬಲ್ಲ ದಾರಿಗಳನ್ನು ಸಂಸ್ಕೃತಿಯು ಕಂಡುಕೊಳ್ಳಬೇಕು.

'ಸ್ವಾತಂತ್ರ್ಯದ ಓಟ'ದಲ್ಲಿ, ಬೊಳುವಾರು ಪ್ರಾದೇಶಿಕ ಭಾಷೆಗೆ ವಿದಾಯ ಹೇಳುವ ಮೂಲಕ, ಕರ್ನಾಟಕದ ಎಲ್ಲ ಓದುಗರನ್ನು ತಲುಪುವ ದಾರಿ ಕಂಡುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರೆ. ಜೊತೆಗೆ, ಅವರು ಮನುಷ್ಯನ ಭಾವನೆಗಳನ್ನು ತುಂಬ ಚೆನ್ನಾಗಿ ಅರ್ಥಮಾಡಿಕೊಂಡು ಬರೆಯಬಲ್ಲ ಒಳ್ಳೆಯ ಕಥೆಗಾರರೂ ಆಗಿರುವುದರಿಂದ ಅವರ ಬರವಣಿಗೆ ಕಥನಕುತೂಹಲವನ್ನು ಹುಟ್ಟಿಸುತ್ತದೆ. ಮುಂದೇನಾಗುತ್ತದೆ, ಮುಂದೇನಾಗುತ್ತದೆ ಎಂದು, 'ಸ್ವಾತಂತ್ರ್ಯದ ಓಟ'ದ ಕೊನೆಯ ಹೆಜ್ಜೆಯವರೆಗೂ ಅವರ ಜೊತೆಗೆ ಹೋಗಬೇಕು ಅಂತ

ಅನ್ನಿಸುತ್ತದೆ. ಮಾತ್ರವಲ್ಲ, ಕಾದಂಬರಿಯ ಓಟ ಮುಗಿದ ಮೇಲೆ ಕೂಡ, ಅದರ ಮುಖ್ಯವಾದ ಪಾತ್ರಗಳಿಗೆ ಮುಂದಿನ ಹತ್ತು ವರ್ಷಗಳಲ್ಲಿ ಏನಾಗಬಹುದು, ಬೊಳುವಾರರು ಇದರ ಮುಂದಿನ ಭಾಗ ಬರೆದರೆ ಹೇಗೇ? ಎಂಬ ಕುತೂಹಲವೂ ಉಂಟಾಗುತ್ತದೆ. ಇನ್ನೊಂದು ಕಡೆ, ನಮ್ಮ ಆಳದಲ್ಲಿರುವ ಭಾವನೆಗಳನ್ನು ಕಲಕುವ, ತಲ್ಲಣಗೊಳಿಸುವ, ಬದಲಾಯಿಸುವ, ನಲುಗಿಸುವ, ಮಾಗಿಸುವ ಗುಣವನ್ನು ಅವರ ಬರವಣಿಗೆಯು ಹೊಂದಿರುವುದರಿಂದ, ನಮ್ಮ ಕಾಲದ ಜನಪ್ರಿಯ ಬರಹಗಳು ಸೃಷ್ಟಿಸುತ್ತಿರುವ ದುರಂತಗಳನ್ನು ತಪ್ಪಿಸುವ ದಾರಿಯಲ್ಲಿ ಇವರ ಕಾದಂಬರಿ ಒಂದು ಮಹತ್ವದ ಹೆಜ್ಜೆಯಾಗುತ್ತದೆ.

'ಕವಲು' ಮತ್ತು 'ಆವರಣ'ಗಳೂ ಸೇರಿದಂತೆ, ಭೈರಪ್ಪನವರ ಕಾದಂಬರಿಗಳ ಜನಪ್ರಿಯತೆಗಳ ಹಿಂದೆ ಯಾವ ರೀತಿಯ ತರ್ಕ, ಯಾವ ರೀತಿಯ ಓದು ಕೆಲಸ ಮಾಡುತ್ತದೆಯೋ, ಆ ಕಾದಂಬರಿಗಳನ್ನು ಮೊದಲಿನಿಂದ ಕೊನೆಯತನಕ ಓದಬೇಕು ಅಂತ ಅನ್ನಿಸುತ್ತದೋ, ಹಾಗೆಯೇ ಓದಿಸಿಕೊಳ್ಳುವ, ಆದರೆ ಆಶಯಗಳ ನೆಲೆಯಲ್ಲಿ, ಆದರ್ಶಗಳ ನೆಲೆಯಲ್ಲಿ ಅವುಗಳಿಗೆ ಪರ್ಯಾಯವೆನ್ನಿಸುವ ಓದನ್ನು, ಒಂದು ಅಲ್ಟರನೇಟಿವ್ ಆದ ಸಮಾಧಾನ ಸಂತೃಪ್ತಿಗಳನ್ನು ಈ ಕಾದಂಬರಿ ಕೊಡುತ್ತದೆ. ಇಷ್ಟಾಗಿಯೂ ಇವುಗಳಿಗೆ ಸಿಗುವ ಮತ್ತು ಇವುಗಳನ್ನು ಮೆಚ್ಚಿಕೊಳ್ಳುವ ಓದುಗವರ್ಗವು ಬೇರೆಬೇರೆಯೇ ಆಗಿರುತ್ತದೆ. ಹೀಗೆ, ಕುತೂಹಲಕರವಾಗಿ, ಆಕರ್ಷಕವಾಗಿ ಬರೆಯುವಾಗಲೂ ಅತ್ಯಂತ ಜನಪರವಾಗಿ, ಹೃದಯಪರವಾಗಿ, ಸಮುದಾಯಗಳ ಪರವಾಗಿ ಬರೆಯುವುದಕ್ಕೆ ಬೊಳುವಾರರಿಗೆ ಸಾಧ್ಯವಾಗಿರುವುದಕ್ಕೆ ಮುಖ್ಯ ಕಾರಣ, ಅವರಿಗಿರುವ ಅದ್ಭುತ ಸೃಜನಶೀಲ ಸಾಮರ್ಥ್ಯ ಮತ್ತು ಅವರೇ ನಂಬಿಕೊಂಡು ಬಂದಿರುವ ಹಲವು ಜನಪರ ಚಟುವಟಿಕೆಗಳೇ ಆಗಿವೆ. ಒಂದು ನೆಲೆಯಲ್ಲಿ, ಇದು ದಲಿತ–ಬಂಡಾಯ ಸಾಹಿತ್ಯದ ಮೂಲ ಆಶಯಗಳ ಪರಿಣಾಮವೂ ಆಗಿದೆ. ಹೆಚ್ಚು ಜನರನ್ನು ತಲುಪುವುದನ್ನು ತನ್ನ 'ಪ್ರಿಯಾರಿಟಿ' ಆಗಿ ಇಟ್ಟುಕೊಂಡಾಗಲೂ ಸಾಹಿತ್ಯಿಕವಾಗಿ ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ ಎಂಬುದಕ್ಕೆ ಬೊಳುವಾರರ ಈ ಕಾದಂಬರಿಯು ಒಂದು ಅತ್ಯುತ್ತಮ ಸಾಕ್ಷಿಯಾಗುತ್ತದೆ.

ಈ ಕಾದಂಬರಿಯನ್ನು ನಾವು ಕೇವಲ ದೇಶವಿಭಜನೆಯ ಕಥೆ (ಪಾರ್ಟಿಷನ್ ಸ್ಟೋರಿ) ಎಂದು ಕರೆಯುವುದು ಸರಿಯಲ್ಲ. ಅದು ಶುರುವಾಗುವುದೇನೋ ಹಾಗೆಯೆ. ಅಲ್ಲಿಂದ ಇಲ್ಲಿಗೆ ಬಂದವರು ಅನುಭವಿಸುವ ಕಷ್ಟನಷ್ಟಗಳ ವರ್ಣನೆಯಲ್ಲಿಂದಲೇ ಶುರುವಾಗುತ್ತದೆ, ಆದರೆ ಒಂದು ಐವತ್ತು ಪುಟ ದಾಟಿದ ಮೇಲೆ, ಅದು ವಿಭಜನೆಯ ಕಥೆಯಾಗಿ ಉಳಿಯುವುದಿಲ್ಲ. ಅದು ಮುತ್ತುಪ್ಪಾಡಿ ಎಂಬ, ಕರ್ನಾಟಕದ ಒಂದು ಹಳ್ಳಿಯ ಆತ್ಮಕಥೆ ಆಗುತ್ತದೆ, ಜೀವನ ಚರಿತ್ರೆ ಆಗುತ್ತದೆ. ಕರ್ನಾಟಕದ ಸಾಹಿತ್ಯ ಲೋಕದಲ್ಲಿ ಹಲವಾರು 'ಲ್ಯಾಂಡ್ ಸ್ಕೇಪ್'ಗಳಿವೆ. ಕುವೆಂಪು ಅವರ ಕಾನೂರು, ಸೀತೆಮನೆ, ಸಿಂಭಾವಿ; ಚಿತ್ತಾಲರ ಹನೆಹಳ್ಳಿ, ಕಂಬಾರರ ಶಿವಾಪುರ, ಈ ಎಲ್ಲ ಲ್ಯಾಂಡ್ ಸ್ಕೇಪ್‌ಗಳ ನಡುವೆ ಬೊಳುವಾರರ ಮುತ್ತುಪ್ಪಾಡಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅದು ಬೇರೆ ಕೆಲವು ಊರುಗಳಂತೆ, ಕೇವಲ ಕಪ್ಪು ಬಿಳುಪುಗಳ ಲೋಕವಲ್ಲ. ಮುತ್ತುಪ್ಪಾಡಿ ನಮ್ಮೆಲ್ಲರ ಕನಸೂ ಹೌದು, ನಮ್ಮೆಲ್ಲರ ಹಳಹಳಿಕೆಯೂ ಹೌದು. ಅದು ನಮ್ಮ ನಾಸ್ಟಾಲ್ಜಿಯಾದಂತೆಯೇ ಡ್ರೀಮ್ ಕೂಡಾ ಹೌದು. ಸ್ವಾತಂತ್ರ್ಯದ ಓಟದ ನಾಯಕ ಪಾತ್ರ ಇಡೀ ಮುತ್ತುಪ್ಪಾಡಿ. ಅಲ್ಲಿಯ ಸಣ್ಣ ಮಗುವಿನಿಂದ ಹಿಡಿದು ಮುದುಕರವರೆಗೆ ಎಲ್ಲರೂ ಮುಖ್ಯ ಪಾತ್ರಗಳೇ. ಅವರೆಲ್ಲ ಈ ಕಾದಂಬರಿಯಲ್ಲಿ ಬರ್ತಾರೆ, ಇರ್ತಾರೆ, ಹೋಗ್ತಾರೆ. ತಾವು ಆಗುತ್ತಾರೆ, ಬೆಳೆಯುತ್ತಾರೆ, ಬೇರೆಯವರನ್ನು ಬೆಳೆಸುತ್ತಾರೆ ಮತ್ತು ಹೊರಟು ಹೋಗುತ್ತಾರೆ. ಎಲ್ಲ ಬದಲಾವಣೆಗಳ ಜೊತೆಗೆ ಮುತ್ತುಪ್ಪಾಡಿಯ ಜೀವನದಿ ಹರಿಯುತ್ತಲೇ ಇರುತ್ತದೆ.

ಬೊಳುವಾರರಿಗೆ ಮನುಷ್ಯನಲ್ಲಿ ಅಪಾರವಾದ ನಂಬಿಕೆಯಿರುವುದರಿಂದಲೇ ಅವರ 'ಸ್ವಾತಂತ್ರ್ಯದ ಓಟ' ಖುಷ್ವಂತ್ ಸಿಂಗರ 'ಟ್ರೇನ್ ಟು ಪಾಕಿಸ್ತಾನ್'ದಂತೆ ಕೇವಲ ವಿಭಜನೆಯ ಕಥೆಯಾಗಲೀ ಅಥವಾ ಫಣೀಶ್ವರನಾಥ ರೇಣು ಅವರ 'ಮೈಲಾ ಆಂಚಲ್'ನಂತೆ ಸ್ವಾತಂತ್ರ್ಯೋತ್ತರ ಭಾರತದ ಅಧಃಪತನದ ಕಥೆಯಾಗಲೀ ಆಗುವುದಿಲ್ಲ.

ಈ ಕಾದಂಬರಿ ಇನ್ನೂ ಒಂದು ಕಾರಣಕ್ಕೆ ಯಾಕೆ ಮುಖ್ಯವಾಗುತ್ತದೆಂದರೆ, ಇದರಲ್ಲಿ ಹೆಣ್ಣುಮಕ್ಕಳ ತ್ಯಾಗದ ಕತೆಗಳಿಲ್ಲ. ಶೋಷಣೆಗೆ ತುತ್ತಾದ ಹೆಣ್ಣು ಮಕ್ಕಳ ಕಣ್ಣೀರಿನ ವೈಭವೀಕರಣವೂ ಇಲ್ಲ. ಈ ಕಾದಂಬರಿಯ ಹೆಣ್ಣು ಏಕಕಾಲದಲ್ಲಿ ದೇವನೂರು ಅವರ 'ಸಾಕಮ್ಮ'ನೂ ಹೌದು, ಜೊತೆಯಲ್ಲೇ ಸುಖಕೊಡುತ್ತಾ ಸುಖಪಡುತ್ತಾ ಅರಳುವ ಅರಳಿಸುವ 'ಸುಖಮ್ಮ'ನೂ ಹೌದು. ಈ ಕಾದಂಬರಿಯನ್ನು ಹೆಣ್ಣು ಮಕ್ಕಳಿಗೆ ಮತ್ತು ಅವರ ಧಾರಣ ಸಾಮರ್ಥ್ಯಕ್ಕೆ ನೀಡಿದ ಅತ್ಯಂತ ದೊಡ್ಡ ಕೊಡುಗೆ. ಮುತ್ತುಪ್ಪಾಡಿಯ ಶಕ್ತಿಗೆ ಕಾರಣ ಅಲ್ಲಿ ಬದುಕುತ್ತಿರುವ ಇಂತಹ ಹೆಣ್ಣುಗಳು ಮತ್ತು ಅವರ ಕಾರಣದಿಂದ ಒಳ್ಳೆಯವರಾಗುವ ಗಂಡುಗಳೂ. ಈ ಕಾರಣಗಳಿಂದಲೂ ಈ 'ಸ್ವಾತಂತ್ರ್ಯದ ಓಟ' ಎಷ್ಟೋ ವರ್ಷಗಳ ಕಾಲ ಕನ್ನಡದ ಮನಸ್ಸಿನಲ್ಲಿ ಉಳಿಯುವ, ಉಳಿಸಬೇಕಾದ ಕಾದಂಬರಿಯಾಗುತ್ತದೆ.

ಬೊಳುವಾರು ಅವರ ಬರವಣಿಗೆಯಲ್ಲಿ 'ದರ್ಶನ'ವನ್ನು ಹೇಳಬೇಕೆಂಬ ಜ್ಞಾನದರ್ಪವಿಲ್ಲ. ಜ್ಞಾನದರ್ಪವನ್ನು ಈ ಕಾದಂಬರಿಯಲ್ಲಿ ಹುಡುಕಿದರೂ ಸಿಗುವುದಿಲ್ಲ. ಬೊಳುವಾರು ತಮ್ಮನ್ನು ಅಳಿಸಿಕೊಂಡು, ತಮ್ಮ ವಿಚಾರಗಳನ್ನು, ತಮ್ಮ ನಿಲುವುಗಳನ್ನು ಅವಮಾನತ್ತಿನಲ್ಲಿರಿಸಿಕೊಂಡು ಕಾದಂಬರಿಯನ್ನು ಬರೆದಿದ್ದಾರೆ. ಇದರಲ್ಲಿ ಭಾಷಣಗಳೇ ಇಲ್ಲ. ವಿಚಾರಗಳನ್ನು ಪ್ರತಿಪಾದಿಸುವ ಹಟವೂ ಇಲ್ಲ, ತೀರ್ಮಾನಗಳು ಇಲ್ಲ. ಯಾವುದರ ಬಗ್ಗೆಯೂ ಏನನ್ನೂ ಹೇಳದ ಈ ಕಾದಂಬರಿ ಅದೇ ಕಾಲದಲ್ಲಿ ಎಲ್ಲವನ್ನೂ ತೋರಿಸುತ್ತದೆ. ಆದ್ದರಿಂದಲೇ ಈ ಕಾದಂಬರಿಯಲ್ಲಿ ದರ್ಶನವೂ ಇದೆ, ವಿವೇಕವೂ ಇದೆ. ಜ್ಞಾನವೂ ಇದೆ.

ಒಬ್ಬ ಸೆಕ್ಯುಲರ್ ಆದವನು, ಪ್ರಗತಿಪರನಾದವನು ಧರ್ಮ ಎಂಬ ಸಂಗತಿಯನ್ನು ಹೇಗೆ 'ಹ್ಯಾಂಡಲ್' ಮಾಡಬೇಕು ಎನ್ನುವುದು ಮನುಷ್ಯನನ್ನು ಮತ್ತು ಕಲಾವಿದರನ್ನು ನೂರಾರು ವರ್ಷಗಳಿಂದ ಕಾಡುತ್ತಿರುವ ಪ್ರಶ್ನೆ. 'ಸೆಕ್ಯುಲರಿಸಂ' ಅಥವಾ 'ಎಥಿಸಂ' ಅನ್ನುವುದು ಧರ್ಮವನ್ನು ಅರ್ಥ ಮಾಡಿಕೊಳ್ಳುವ, ಸಾಂಸ್ಥಿಕ ಧರ್ಮಗಳ ಕೆಟ್ಟ ಸಂಗತಿಗಳನ್ನು ಗುರುತಿಸುತ್ತಲೇ ಅದರ ಒಳಗೆ ಇರಬಹುದಾದ ಸುಖದ ಚಿಲುಮೆಗಳನ್ನು ಹುಡುಕುವ ಕ್ರಿಯೆ. ನಿರೀಶ್ವರವಾದಿಯಾದ ಬೊಳುವಾರು ಅವರಿಗೆ ಈ ಸೂತ್ರ ಗೊತ್ತಿದ್ದರಿಂದಲೇ ಅವರಿಗೆ ಕಾದಂಬರಿಯ ಬರವಣಿಗೆಯಲ್ಲಿ 'ಧರ್ಮ' ಒಂದು ಸಮಸ್ಯೆಯಾಗಿ ಕಾಡಲೇ ಇಲ್ಲ. 'ಜೋಲಿಗೆ ಬಾಬಾ' ಅಥವಾ 'ಮಿಠಾಯಿ ಆವುಲಿಯಾ' ಎಂಬ ಅತಿ ಮುಖ್ಯವಾದ ಆಧ್ಯಾತ್ಮಿಕ ಪಾತ್ರವನ್ನು ಸೃಷ್ಟಿಸುವ ಮೂಲಕವೇ ಬೊಳುವಾರು ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಂಡಿದ್ದಾರೆ. ಆ ಬಾಬಾ ಪವಾಡಗಾರನಿಗಿಂತ ಹೆಚ್ಚಾಗಿ ಮಾನವೀಯ ಮನುಷ್ಯ. ಈ ಕಾದಂಬರಿಯು, ಒಂದು ರೀತಿಯಲ್ಲಿ ಒಂದೇ ಸಮುದಾಯದ ಒಳಕಥನವೂ ಹೌದು, ಹಲವು ಸಮುದಾಯಗಳ ಕೂಡುಕಥನವೂ ಹೌದು. ಒಂದು ಸಮುದಾಯದ ಒಳಗೆ ಏನಾಗುತ್ತದೆ ಎನ್ನುವ ಜೊತೆಯಲ್ಲೇ, ಅವರೆಲ್ಲ ಉಳಿದ ಸಮುದಾಯಗಳ ಜೊತೆಗೆ ಕೂಡಿ ಬಾಳುವಾಗ ಏನಾಗುತ್ತದೆ ಎನ್ನುವ ಚಿತ್ರಣವನ್ನೂ ಕೊಡುತ್ತದೆ. ಬೊಳುವಾರು ಅವರ ಬರವಣಿಗೆಯಲ್ಲಿ 'ನಿಮ್ಮೊಳಗಿದ್ದೂ ನಿಮ್ಮಂಥಾಗದೆ' ಎನ್ನುವ ವಿಷಾದವಿಲ್ಲ. 'ನಿಮ್ಮೊಳಗಿದ್ದು ನಿಮ್ಮಂಥಾಗಿದ್ದೇನೆ' ಎನ್ನುವ ಆತ್ಮವಿಶ್ವಾಸವಿದೆ. ಆಗಿದ್ದೇನೆ ಎನ್ನುವುದನ್ನು ಅವರ ಕಾದಂಬರಿಯ ಪಾತ್ರಗಳು ಬದುಕಿ ತೋರಿಸುತ್ತವೆ. ಹಾಗಂತ, ಬೊಳುವಾರು ಕೆಟ್ಟದ್ದನ್ನು ಕಂಡಿಲ್ಲ, ಕೆಟ್ಟದ್ದನ್ನು ನೋಡಿಲ್ಲ ಅಂತ ಅಲ್ಲ. ಗಾಂಧೀಜಿಯವರ ಮೂರು ಮಂಗಗಳ ಜೊತೆಗೆ ಬೊಳುವಾರರನ್ನು ಸೇರಿಸಲು ಸಾಧ್ಯವಾಗುವುದಿಲ್ಲ. ಬೊಳುವಾರು ಭೋಳೆಯೂ ಅಲ್ಲ, ಮುಗ್ಧರೂ ಅಲ್ಲ.

ಬೊಳುವಾರರ ಈ 'ಸ್ವಾತಂತ್ರ್ಯದ ಓಟ' ಕಾದಂಬರಿಯು ಕುವೆಂಪು ಅವರು ತಾವು ಬರೆಯಲಿದ್ದೇನೆ ಎಂದು ಹೇಳುತ್ತಿದ್ದ 'ಕಾಲೋಸ್ಮಿ' ಎಂಬ ಕಾದಂಬರಿಯ ಇನ್ನೊಂದು ನೆಲೆಯಂತೆ ನಮಗೆ ಸಿಕ್ಕಿದೆ. ಸ್ವಾತಂತ್ರ್ಯ ಪೂರ್ವದ ಕಥೆಗಳುಳ್ಳ ಎರಡು ಮುಖ್ಯ ಕಾದಂಬರಿಗಳನ್ನು ಬರೆದಿರುವ ಕುವೆಂಪು ಅವರು, ತಾವು 'ಕಾಲೋಸ್ಮಿ' ಎಂಬ ಕಾದಂಬರಿಯನ್ನು ಬರೆಯ ಬಯಸಿದ್ದು, ಅದು ಸ್ವಾತಂತ್ರ್ಯ ಹೋರಾಟವನ್ನೂ ಒಳಗೊಂಡಂತೆ, ಸ್ವಾತಂತ್ರ್ಯಾ ನಂತರದ ಇಂದಿನವರೆಗಿನ ಎಲ್ಲ ಬದುಕನ್ನು ಹಿಡಿಯುವ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತಿದ್ದರು. ಆದರೆ, ಇದು ಸ್ವಾತಂತ್ರ್ಯದ ನಂತರದ ಆಗುಹೋಗುಗಳನ್ನು ದಾಖಲಿಸುತ್ತದೆ. ಹೀಗೆಂದರೆ, ಇದು ಅವರಿಬ್ಬರನ್ನೂ ಹೋಲಿಸುವ, ಬೆಲೆಕಟ್ಟುವ ಕೆಲಸ ಅಲ್ಲ. ಈ ಕಾದಂಬರಿಯು ತನ್ನಷ್ಟಕ್ಕೆ ತಾನೇ ಅನೇಕರು ಬಹುಕಾಲದವರೆಗೂ ಓದಬೇಕಾದ ಬರಹವಾಗಿ ನಮಗೆ ಮುಖ್ಯವಾಗುತ್ತದೆ.

❑ ಕೃಪೆ : ವಿಜಯ ಕರ್ನಾಟಕ

ಸುತ್ತಮುತ್ತ . . .

## ಶ್ರೀ ರಾಮನವಮಿ ಪೂಜೆ



ಏಪ್ರಿಲ್ 29, 2012 ರಂದು ಜನಕಪುರಿ ಸಿ–3 ಬ್ಲಾಕ್‌ನ ಶ್ರೀ ರಾಮ ಮಂದಿರದಲ್ಲಿ ಜನಕಪುರಿ ಕನ್ನಡ ಕೂಟದಿಂದ ಶ್ರೀ ರಾಮನವಮಿ ಮತ್ತು ಪಂಚಾಂಗ ಶ್ರವಣ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸೇರಿದ ಜನಸಮೂಹದ ನಡುವೆ ಶ್ರೀ ಹನುಮಂತಾಚಾರರ ಮಂತ್ರ ಘೋಷಣೆಯೊಂದಿಗೆ ಭಕ್ತಿ ಶ್ರದ್ಧೆಯಿಂದ ಪೂಜೆ ಮಾಡಲಾಯಿತು. ನಂತರ ಪ್ರಸಾದ ವಿನಿಯೋಗಿಸಲಾಯಿತು.

❑ ಶ್ರೀನಾಥ್ ಎನ್.ಆರ್. ಕಾರ್ಯದರ್ಶಿ

## ಬಿ.ಎಸ್. ರಾಮಕೃಷ್ಣ ದಂಪತಿಗಳಿಗೆ ಆತ್ಮೀಯ ಬೀಳ್ಕೊಡುಗೆ




ಸುಮಾರು ನಾಲ್ಕು ದಶಕಗಳಿಂದ ದೆಹಲಿಯಲ್ಲಿ ವಾಸವಾಗಿದ್ದ ಶ್ರೀಮತಿ ಮತ್ತು ಶ್ರೀ ಬಿ.ಎಸ್. ರಾಮಕೃಷ್ಣ ದಂಪತಿಗಳು ಇದೀಗ ತಾಯ್ನಾಡಿಗೆ ಮರಳುತ್ತಿದ್ದಾರೆ. ಜನಕಪುರಿ ಕನ್ನಡ ಕೂಟದ ಸ್ಥಂಭವಾಗಿದ್ದ ಇವರು ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಯಾಗಿ ಕೂಟಕ್ಕೆ ಸಲ್ಲಿಸಿರುವ ಸೇವೆ ಅಪಾರ. ನಾಲ್ಕು ದಶಕಗಳಲ್ಲಿ ವಿವಿಧ ಕನ್ನಡ ಪರ ಸಂಸ್ಥೆಗಳಿಗೆ, ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಇವುಗಳಿಗೆ ಇವರ ಕಾಣಿಕೆ ಮಹತ್ತರವಾದುದು. ಇವರ ಶ್ರೀಮತಿ ಜೆ. ಸ್ವರ್ಣಲತ ದೆಹಲಿ ಕನ್ನಡ ಶಾಲೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ ಹಾಗು ಒಳ್ಳೆ ಕೀರ್ತಿಯನ್ನು ಸಹ ಗಳಿಸಿದ್ದಾರೆ. ಈ ದಂಪತಿಗಳಿಗೆ ಜನಕಪುರಿ ಕನ್ನಡ ಕೂಟ ಹಾಗೂ ದೆಹಲಿಯ ಎಲ್ಲಾ ಕನ್ನಡಿಗರ ಪರವಾಗಿ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು.

❑ ವೆಂಕಟೇಶ್ ಎಂ.ವಿ.

## ದೆಹಲಿ ಪೋಲಿಸ್ ಕನ್ನಡ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆ



ವಿಜಯ್ ಕುಮಾರ್ ವಿ.



ಆರ್.ಎ. ವೆಂಕಟೇಶ್

ದೆಹಲಿ ಪೋಲಿಸ್ ಕನ್ನಡ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆಯು ದಿನಾಂಕ 29.04.2012ರಂದು ಬೆಳಿಗ್ಗೆ 10.30ಕ್ಕೆ ಅಶೋಕ್ ವಿಹಾರ್ ಪಾರ್ಕ್‌ನಲ್ಲಿ ನಡೆಯಿತು. ಈ ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರುಗಳೆಲ್ಲರು ತಮ್ಮ ತಮ್ಮ ವಿಚಾರಗಳನ್ನು ಮುಂದಿಟ್ಟರು. ಶ್ರೀ ವಿಜಯ್ ಕುಮಾರ್ ವಿ. ಅವರು ಅಧ್ಯಕ್ಷ ಸ್ಥಾನಕ್ಕೆ ಮತ್ತು ಶ್ರೀ ಆರ್.ಎ. ವೆಂಕಟೇಶ್ ಅವರು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

❑ ಎಚ್.ಜಿ.ಶಿವರಾಮ್, ಕಾರ್ಯದರ್ಶಿ

## ಶ್ರೀ ರಾಮನವಮಿ ಆಚರಣೆ



ಸ್ನೇಹಾ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರು ಏಪ್ರಿಲ್ 4ರಂದು ಸಂಘದ ವಾಚನಾಲಯದಲ್ಲಿ ಶ್ರೀ ರಾಮ ನವಮಿಯನ್ನು ಆಚರಿಸಿದರು. ಸದಸ್ಯೆರೆಲ್ಲರೂ ದೇವರ ಭಜನೆಗಳನ್ನು ಹಾಡಿ ತಮ್ಮ ತಮ್ಮ ಮನೆಯಿಂದ ತಂದಿಟ್ಟ ಪ್ರಸಾದವನ್ನು ಸ್ವೀಕರಿಸಿದರು.

ಫೆಬ್ರವರಿ 6ರಂದು ದೆಹಲಿ ಕರ್ನಾಟಕ ಸಂಘ ಹಾಗೂ ನಾಟಕ ಅಕಾಡೆಮಿ, ಬೆಂಗಳೂರು ಇವರ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ರಂಗ ದಾಖಲಾತಿ ಪ್ರದರ್ಶನ ನಡೆದಿದ್ದು, ಮಾರ್ಚ್ ತಿಂಗಳ ಅಭಿಮತ ವರದಿಯಲ್ಲಿ ಈ ಸಾಲು ಬಿಟ್ಟುಹೋಗಿದೆ ಹಾಗೂ ಫೆಬ್ರವರಿ 6ರ ಬದಲು ಜನವರಿ 6 ಎಂದಾಗಿದೆ–ಪ್ರಮಾದಕ್ಕೆ ವಿಷಾದಿಸುತ್ತೇವೆ.

ಅಭಿನಂದನೆ...

# ರಾಜ್ಯ ಸಭೆಗೆ ಆಯ್ಕೆಯಾದ ನೂತನ ಸಂಸದರು




**ಜಯಪ್ರಕಾಶ್ ಹೆಗಡೆ** – ಲೋಕಸಭೆಗೆ ಉಡುಪಿ ಚಿಕಮಗಳೂರು ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ವಿಜೇತರಾದ ಜಯಪ್ರಕಾಶ್ ಹೆಗಡೆ ಅವರು ಇದೀಗ ಮೊದಲ ಬಾರಿಗೆ ಲೋಕಸಭೆಗೆ ಪಾದಾರ್ಪಣೆ ಮಾಡಿದ್ದಾರೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನವರಾದ ಜೆ.ಪಿ. ಹೆಗಡೆ ಅವರು ವೃತ್ತಿಯಲ್ಲಿ ವಕೀಲರು. ಬ್ರಹ್ಮಾವರ ಕ್ಷೇತ್ರದಿಂದ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾದ (1994–2008) ಇವರು 1994 ರಿಂದ 1998ರ ಅವಧಿಯಲ್ಲಿ ಬಂದರು ಮತ್ತು ಮೀನುಗಾರಿಕೆ ಸಚಿವರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರ ಜಾರಿಗೆಗೊಳಿಸುವ 5 ವರ್ಷಗಳಿಗೆ ಮೊದಲೇ ಇವರು ಕರಾವಳಿಯ ಮೀನುಗಾರರಿಗೆ ಮೈಕ್ರೊ ಕ್ರೆಡಿಟ್ ಕಾರ್ಡ್‌ಗಳನ್ನು ಜಾರಿಗೆ ತಂದ ಖ್ಯಾತಿ ಹೊಂದಿದ್ದಾರೆ. ಕಳೆದ 25 ವರ್ಷಗಳಿಂದ ದಕ್ಷಿಣ ಕನ್ನಡ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸರಳ, ಸಜ್ಜನಿಕೆಯ ಜಯಪ್ರಕಾಶ್ ಹೆಗಡೆ ಅವರು ತಮ್ಮ ಪ್ರಗತಿಪರ ಚಟುವಟಿಕೆಗಳಿಂದ ಉತ್ತಮ ರಾಜಕಾರಣಿಯಾಗಿ ಸೇವೆ ಸಲ್ಲಿಸಲು ಮುಂದಾಗಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಆತ್ಮೀಯ ಅಭಿನಂದನೆಗಳು.



**ಕೆ. ರೆಹಮಾನ್ ಖಾನ್** – ಸತತ 4ನೇ ಬಾರಿ ರಾಜ್ಯ ಸಭೆ ಪ್ರವೇಶಿಸಿರುವ ರೆಹಮಾನ್ ಖಾನ್ ಅವರು ಹಿಂದಿನ ಅವಧಿಯಲ್ಲಿ ರಾಜ್ಯ ಸಭೆಯ ಉಪ ಸ್ಪೀಕರ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಕೇಂದ್ರ ಸಚಿವರಾಗಿ ಕಾರ್ಯ ನಿರ್ವಹಿಸಿದ ಅನುಭವ ಉಳ್ಳ ಇವರು ರಾಜ್ಯದ ಮುಸ್ಲಿಂ ಜನಾಂಗದ ಮೊತ್ತಮೊದಲ ಲೆಕ್ಕ ಪರಿಶೋಧಕರೆಂಬ ಖ್ಯಾತಿ ಗಳಿಸಿದ್ದಾರೆ. ಕರ್ನಾಟಕ ವಿಧಾನಪರಿಷತ್ ಸದಸ್ಯರಾಗಿ ಹಾಗೂ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ ಹಿಂದುಳಿದ ವರ್ಗದವರಿಗೆ ಸೌಲಭ್ಯ, ಸವಲತ್ತುಗಳನ್ನು ಸರ್ಕಾರದಿಂದ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ ಈ ವರ್ಗದ ಜನರ ವಿದ್ಯಾಭ್ಯಾಸ ಹಾಗೂ ಸುಧಾರಣೆಗಾಗಿ ಶ್ರಮಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ 3ದಶಕಗಳಿಗೂ ಮೀರಿದ ಸುದೀರ್ಘ ಅನುಭವವುಳ್ಳ ರೆಹಮಾನ್ ಖಾನ್ ಅವರು ಭಾರತದ ಶ್ರೇಷ್ಠ ಜಾತ್ಯಾತೀತ ನೀತಿ ಸಂಹಿತೆಯ ಪ್ರತಿನಿಧಿಯಾಗಿ ಹಾಗೂ ಅಲ್ಪಸಂಖ್ಯಾತರ ಪ್ರಮುಖ ನಾಯಕರಾಗಿ ಜನಪ್ರಿಯರಾಗಿದ್ದಾರೆ.



**ರಾಜೀವ್ ಚಂದ್ರಶೇಖರ್** – ಸತತ ಎರಡನೇ ಬಾರಿಗೆ ಖ್ಯಾತ ಉದ್ಯಮಿ ರಾಜೀವ್ ಚಂದ್ರಶೇಖರ್ ರಾಜ್ಯ ಸಭೆ ಪ್ರವೇಶಿಸಿದ್ದಾರೆ. ಜ್ಯುಪಿಟರ್ ಕ್ಯಾಪಿಟಲ್ ಸಂಸ್ಥೆಯನ್ನು 2005ರಲ್ಲಿ ಪ್ರಾರಂಭಿಸಿದ ಇವರು ಭಾರತದ ಜಾಗತಿಕ ಆರ್ಥಿಕತೆಯ ಹೊಸ ಮಾರುಕಟ್ಟೆಗಳಲ್ಲಿ ವಾಣಿಜ್ಯ ಸೇವೆಯನ್ನು ವಿಸ್ತಾರಗೊಳಿಸಿದ್ದಾರೆ. 2006ರಲ್ಲಿ ರಾಜ್ಯಸಭಾ ಸಂಸದರಾಗಿ ಆಯ್ಕೆಯಾಗಿದ್ದ ಇವರು ಕರ್ನಾಟಕ, ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯಾ ಭದ್ರತಾ ವಿಷಯಗಳಿಗೆ ಸಂಬಂಧಿಸಿದಂತೆ ಆಡಳಿತ ಸುಧಾರಣೆಗಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಬೆಂಗಳೂರಿನ ನ್ಯಾಶನಲ್ ಮಿಲಿಟರಿ ಮೆಮೋರಿಯಲ್ ಕಮಿಟಿಯ ಅಧ್ಯಕ್ಷರಾಗಿರುವ ಚಂದ್ರಶೇಖರ್ ಅವರು ಹಲವಾರು ಸಾರ್ವಜನಿಕ ವೇದಿಕೆಗಳ ಮೂಲಕ ಬೆಂಗಳೂರಿನ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.




**ಬಸವರಾಜ್ ಪಾಟೀಲ್ ಸೇಡಂ** – ರಾಜ್ಯ ಬಿಜೆಪಿಯ ಹಿರಿಯ ನಾಯಕರಲ್ಲಿ ಒಬ್ಬರಾದ ಬಸವರಾಜ್ ಪಾಟೀಲ್ ಸೇಡಂ ಅವರು 1998ರಲ್ಲಿ ಗುಲ್ಬರ್ಗ ಕ್ಷೇತ್ರದಿಂದ 12ನೆಯ ಲೋಕಸಭಾ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. 1990–96ರವರೆಗೆ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿದ್ದ ಇವರು ರಾಜ್ಯ ಬಿಜೆಪಿಯ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಲವಾರು ಪ್ರಮುಖ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿರುವ ಸೇಡಂ ಅವರು ಇದೀಗ ಮೊದಲ ಬಾರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಆರ್. ರಾಮಕೃಷ್ಣ** – ತಮಿಳುನಾಡಿನ ಉದ್ಯಮಿಯಾದ ಆರ್. ರಾಮಕೃಷ್ಣ ಅವರು ಈ ಹಿಂದೆ ತಮಿಳುನಾಡಿನಿಂದ ರಾಜ್ಯಸಭಾ ಸಂಸದರಾಗಿ ಸೇವೆ ಸಲ್ಲಿಸಿರುವರು. 1965ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆ ಸಮೂಹದಲ್ಲಿ ಸೇವೆ ಆರಂಭಿಸಿದ ಇವರು ಮುಂದೆ ಈ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿದರು. 1980ರಲ್ಲಿ ರಾಜ್ಯಸಭಾ ಸಂಸದರಾಗಿ ಸೇವೆ ಸಲ್ಲಿಸಿರುವ ಇವರು ಅನೇಕ ಸಂಸದೀಯ ಸಮಿತಿಗಳ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

**ಆಯ್ಕೆಯಾದ ಈ ಎಲ್ಲ ಸಂಸದರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು**

## ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಶ್ರೀ ಪುಂಡಲೀಕ ಹಾಲಂಬಿ



ಕನ್ನಡ ಸಾಹಿತ್ಯ ಪರಿಷತ್ತಿನ 24ನೇ ಅಧ್ಯಕ್ಷರಾಗಿ ಶ್ರೀ ಪುಂಡಲೀಕ ಹಾಲಂಬಿ ಅವರು ಆಯ್ಕೆಯಾಗಿದ್ದಾರೆ. ಈಗಾಗಲೇ ಪರಿಷತ್ತಿನ ಗೌರವ ಕಾರ್ಯದರ್ಶಿ ಹಾಗೂ ಗೌರವ ಕೋಶಾಧ್ಯಕ್ಷರಾಗಿ ನಿರಂತರ 14 ವರ್ಷ ಬೇರೆ ಬೇರೆ ಅಧ್ಯಕ್ಷರುಗಳ ಜತೆ ಸೇವೆ ಸಲ್ಲಿಸಿರುವುದರಿಂದ ಪರಿಷತ್ತಿನ ಒಳ ಹೊರಗುಗಳ ಬಗ್ಗೆ ಸಂಪೂರ್ಣ ಅರಿವಿದೆ. ಕನ್ನಡ ಎಂ.ಎ. ಸ್ನಾತಕೋತ್ತರ ಪದವೀಧರರಾದ ಹಾಲಂಬಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ 36ವರ್ಷ ಸೇವೆ ಸಲ್ಲಿಸಿ, 2011ರಲ್ಲಿ ನಿವೃತ್ತರಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ನೌಕರರ ಸಂಘದ ನಿರ್ದೇಶಕ, ಹೋಟೆಲ್ ಉದ್ಯಮಿದಾರರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾಗಿ ಅಲ್ಲದೇ ಅನೇಕ ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಉಡುಪಿ ಜಿಲ್ಲೆಯ ಹಾಲಾಡಿಯವರಾದ ಇವರು ಕನ್ನಡಪರ ಹೋರಾಟಗಾರರು ಹಾಗೂ ಉತ್ತಮ ಸಂಘಟನಾಕಾರರು ಹೌದು. ದಕ್ಷ ಆಡಳಿತದ ಅನುಭವದ ಜೊತೆಗೆ 30 ಜಿಲ್ಲೆಗಳ ನಾಡಿ ಮಿಡಿತವೂ ಬಲ್ಲ ಹಾಲಂಬಿ ಅವರು ಇದೀಗ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ಕಟ್ಟುವ–ಬೆಳೆಸುವ ಕಾಯಕಕ್ಕೆ ಮತ್ತೊಮ್ಮೆ ಮುಂದಾಗಿದ್ದಾರೆ. ಹಾಲಂಬಿ ಅವರಿಗೆ ಹೊರನಾಡ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು. ಕನ್ನಡದ ಉಳಿವಿಗಾಗಿ ಹಮ್ಮಿಕೊಂಡಿರುವ ಅವರ ಎಲ್ಲ ಯೋಜನೆಗಳು ಅವರ ಅಧ್ಯಕ್ಷಾವಧಿಯಲ್ಲಿ ಸಫಲವಾಗಲಿ ಎಂದು ಹಾರೈಸುತ್ತೇವೆ.

Delhi Karnataka Sangha's Abhimatha Monthly,
May -2012, Price Rs.1/- RNI Regn. No. 53405/91, DL-SW-15/4016/10-11-12
Printout Date : May 8th / 9th, Postal Date :10th / 11th, Total Pages-24




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770